ಕರ್ನಾಟಕ ಸರ್ಕಾರ

ಕರ್ನಾಟಕ ಶಾಸನಗಳು ಸಂಪುಟ 1

ವಿಜಯನಗರದ (ಹಂಪೆಯ) ಶಾಸನಗಳು

ಸಂಪಾದಕರು

ಚನ್ನಬಸಪ್ಪ ಎಸ್. ಪಾಟೀಲ, ಎಂ.ಎ., ಎಂ.ಎ., ಪಿಎಚ್.ಡಿ., ಡಿಪ್. ಆರ್ಕ್., ಡಿಪ್. ಎಪಿ.

ವಿನೋದಾ ಪಾಟೀಲ, ಎಂ.ಎ., ಬಿ.ಎಡ್., ಡಿಪ್. ಎಪಿ.

1996

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಮೈಸೂರು

ವಿಜಯನಗರದ (ಹಂಪೆಯ) ಶಾಸನಗಳು

ಕರ್ನಾಟಕ ಸರ್ಕಾರ

ಕರ್ನಾಟಕ ಶಾಸನಗಳು ಸಂಪುಟ 1

ವಿಜಯನಗರದ (ಹಂಪೆಯ) ಶಾಸನಗಳು

ಸಂಪಾದಕರು

ಚನ್ನಬಸಪ್ಪ ಎಸ್. ಪಾಟೀಲ, ಎಂ.ಎ., ಎಂ.ಎ., ಪಿಎಚ್.ಡಿ., ಡಿಪ್. ಆರ್ಕಿ., ಡಿಪ್. ಎಪಿ.

ವಿನೋದಾ ಪಾಟೀಲ, ಎಂ.ಎ., ಬಿ.ಎಡ್., ಡಿಪ್. ಎಪಿ.

1996

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಮೈಸೂರು

ಪ್ರಥಮ ಮುದ್ರಣ : 1000 ಪ್ರತಿಗಳು

ಬೆಲೆ ರೂ. 120.00

ಡಿ.ಟಿ.ಪಿ. ಅಕ್ಷರ ಜೋಡಣೆ: ಕಾಂಪ್‌ಟೆಕ್ ಕಂಪ್ಯೂಟರ್ ಸಿಸ್ಟಮ್ಸ್, ಮೈಸೂರು
ಮುದ್ರಣ: ಎಫ್‌ಒಎಸ್‌ಟಿಆಯ್‌ಎಸ್, ಸಿಎಫ್‌ಟಿಆರ್‌ಆಯ್, ಮೈಸೂರು

ಮುನ್ನುಡಿ

ಐತಿಹಾಸಿಕ ಸಂಶೋಧನೆಗೆ ಶಾಸನಗಳು ಪ್ರಮುಖ ಆಧಾರವಾಗಿವೆ. ಅಂದಿನ ಮೈಸೂರು ರಾಜ್ಯದ ಪ್ರಾಚ್ಯವಸ್ತು ಇಲಾಖೆಯು ಇವುಗಳ ಅಧ್ಯಯನದ ಗುರಿಯನ್ನಿಟ್ಟುಕೊಂಡು ತನ್ನ ಕಾರ್ಯ ಪ್ರಾರಂಭಿಸಿತು. ಈ ಇಲಾಖೆಯ ಪ್ರಥಮ ನಿರ್ದೇಶಕರಾದ ಮಿ. ಲೂಯಿ ರೈಸರು ಅಂದಿನ ಮೈಸೂರು ರಾಜ್ಯದ ಎಲ್ಲ ಶಾಸನಗಳನ್ನು ಎಪಿಗ್ರಾಫಿಯ ಕರ್ನಾಟಿಕ ಮಾಲಿಕೆಯ 12 ಸಂಪುಟಗಳಲ್ಲಿ ಈ ಶತಮಾನ ಪ್ರಾರಂಭವಾಗುವ ಮೊದಲೇ ಪ್ರಕಟಿಸಿದರು. ತರುವಾಯ ಬೆಳಕಿಗೆ ಬಂದ ಹೊಸ ಶಾಸನಗಳನ್ನು ಮಿ. ರೈಸರ ಉತ್ತರಾಧಿಕಾರಿಗಳು ಇಲಾಖೆಯ ವಾರ್ಷಿಕ ವರದಿಗಳಲ್ಲಿ ಮತ್ತು ಎಪಿಗ್ರಾಫಿಯ ಕರ್ನಾಟಿಕದ ಪುರವಣಿಗಳಲ್ಲಿ ಪ್ರಕಟಿಸಿದರು. ಈಗ ಈ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯು ಪರಿಷ್ಕರಿಸಿ ಪುನರ್ ಮುದ್ರಣ ಮಾಡುತ್ತಿದೆ.

ಮೇಲಿನ ಮಾಲಿಕೆಯು ಈಗಿನ ಕರ್ನಾಟಕ ರಾಜ್ಯದ ದಕ್ಷಿಣ ಜಿಲ್ಲೆಗಳ ಶಾಸನಗಳನ್ನು ಮಾತ್ರ ಒಳಗೊಂಡಿದೆ. 1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದಾಗ ಈಗಿನ ಕರ್ನಾಟಕಕ್ಕೆ ಸೇರಿದ ಬೀದರ್, ಗುಲ್ಬರ್ಗ, ರಾಯಚೂರು, ಬಿಜಾಪುರ, ಬೆಳಗಾವಿ, ಧಾರವಾಡ, ಬಳ್ಳಾರಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಸಂಪುಟಗಳನ್ನು ಹೊರತರುವುದು ನಿರ್ದೇಶನಾಲಯದ ಗುರಿಯಾಗಿದೆ. ಈ ಜಿಲ್ಲೆಗಳ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳನ್ನು ಪ್ರಕಟಿಸುವ ಕಾರ್ಯವನ್ನು ನಿರ್ದೇಶನಾಲಯ ಈಗಾಗಲೇ ಪ್ರಾರಂಭಿಸಿದೆ. ಶಾಸನಗಳ ಪಾಠ ಮತ್ತು ಅನುವಾದಗಳನ್ನು ಪ್ರಕಟಿಸುವ ಕಾರ್ಯಕ್ಕೆ ಬಹಳ ಸಮಯ ಬೇಕಾಗುತ್ತದೆ. ಈಗಾಗಲೇ ಈ ಜಿಲ್ಲೆಗಳ ಅನೇಕ ಶಾಸನಗಳು ಬೇರೆ ಬೇರೆ ಮಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಎಪಿಗ್ರಾಫಿಯ ಕರ್ನಾಟಿಕ ಮಾಲಿಕೆಯ ಅನುಪಸ್ಥಿತಿಯಲ್ಲಿ ಸಂಶೋಧಕರಿಗೆ ಸುಲಭವಾಗಿ ಲಭ್ಯವಾಗುವಂತೆ ಈ ಎಲ್ಲ ಶಾಸನಗಳನ್ನು ಒಂದೇ ಮಾಲಿಕೆಯಲ್ಲಿ ಪ್ರಕಟಿಸುವುದು ಅವಶ್ಯವಾಗಿದೆ. ಡಾ. ಚನ್ನಬಸಪ್ಪ ಎಸ್. ಪಾಟೀಲ ಮತ್ತು ಶ್ರೀಮತಿ ವಿನೋದಾ ಸಿ. ಪಾಟೀಲರು ಉತ್ತರ ಕರ್ನಾಟಕದ ಶಾಸನಗಳ ಸಾರಾಂಶಗಳನ್ನು ಸಂಗ್ರಹಿಸಿ 10 ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯನ್ನು ಹಮ್ಮಿಕೊಂಡಿರುವರು. ಈ ದಿಶೆಯಲ್ಲಿ ವಿಜಯನಗರದ (ಹಂಪೆಯ) ಶಾಸನಗಳನ್ನೊಳಗೊಂಡ ಈ ಸಂಪುಟವು ಪ್ರಥಮ ಸಂಪುಟವಾಗಿದೆ.

ಬಹಳ ಶ್ರಮವಹಿಸಿ ಈ ಸಂಪುಟವನ್ನು ಪ್ರಶಂಸನೀಯವಾಗಿ ಹೊರತಂದಿರುವ ಡಾ. ಚನ್ನಬಸಪ್ಪ ಎಸ್. ಪಾಟೀಲ ಮತ್ತು ಶ್ರೀಮತಿ ವಿನೋದಾ ಸಿ. ಪಾಟೀಲರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಈ ವಿದ್ವತ್‌ಪೂರ್ಣ ಸಂಪುಟವನ್ನು ವಿದ್ವಾಂಸರ ಮತ್ತು ಸಂಶೋಧಕರ ಮುಂದಿಡಲು ನಾನು ತೀವ್ರ ಸಂತಸಗೊಂಡಿದ್ದೇನೆ.

(ಡಿ.ವಿ.ದೇವರಾಜ್)
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ

ಮೈಸೂರು
20.4.96

ಪ್ರಸ್ತಾವನೆ

ಇಪ್ಪತ್ತು ವರ್ಷಗಳ ಹಿಂದೆ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ಶಾಸ್ತ್ರ ವಿಭಾಗದ ಪ್ರೊ. ಎಸ್.ಎಚ್. ರಿತ್ತಿಯವರ ಮಾರ್ಗದರ್ಶನದಲ್ಲಿ ಪ್ರಾಚೀನ ಕರ್ನಾಟಕದ ಆಡಳಿತ ಪದಗಳ ಪದಕೋಶವನ್ನು ಸಿದ್ಧಪಡಿಸಲು ಸಂಶೋಧನಾ ಸಹಾಯಕನಾಗಿ ಕೆಲಸ ಮಾಡುವ ಸದವಕಾಶ ನನಗೆ ಒದಗಿತ್ತು. ಆಗ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳಲ್ಲಿರುವ ಶಾಸನಗಳ ಅಧ್ಯಯನ ಮಾಡಿ ಆಡಳಿತ ಪದಗಳ ಸೂಚಿಯನ್ನು ಸಿದ್ಧಪಡಿಸುತ್ತಿದ್ದೆ. ಶಾಸನಗಳಲ್ಲಿರುವ ವೈವಿಧ್ಯಮಯ ವಿಷಯಗಳನ್ನು ಓದಿ ನಾನು ಚಕಿತಗೊಂಡಿದ್ದೆ. ಆ ಕಾರ್ಯ ಮುಗಿದೊಡನೆ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ದೇವಾಲಯಗಳ ಮೇಲೆ ಪಿಎಚ್.ಡಿ. ಪ್ರೌಢ ಪ್ರಬಂಧದ ಕಾರ್ಯವನ್ನು ಪ್ರಾರಂಭಿಸಿದೆ. ಸಂಶೋಧನೆಯ ಅಂಗವಾಗಿ ಶಾಸನಗಳಿಂದ ವಿಷಯ ಸಂಗ್ರಹಿಸಲು ಪ್ರಾರಂಭಿಸಿದೆ. 19ನೇ ಶತಮಾನದ ಕೊನೆಯಲ್ಲಿ ಪ್ರಕಟಗೊಂಡ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು ಕೇವಲ ಕರ್ನಾಟಕದ ದಕ್ಷಿಣ ಭಾಗಕ್ಕೆ ಮಾತ್ರ ಸೀಮಿತವಾಗಿದ್ದು ಉತ್ತರ ಕರ್ನಾಟಕದ ಜಿಲ್ಲೆಗಳನ್ನು ಒಳಗೊಂಡಿರಲಿಲ್ಲ. ಆದುದರಿಂದ ನನ್ನ ಪ್ರೌಢ ಪ್ರಬಂಧಕ್ಕೆ ಬೇಕಾಗಿದ್ದ ಬೇರೆ ಬೇರೆ ಮಾಲಿಕೆಗಳಲ್ಲಿ ಹಂಚಿ ಹೋಗಿದ್ದ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ಶಾಸನಗಳ ವಿಷಯ ಸಂಗ್ರಹಣೆ ಕಷ್ಟದಾಯಕವಾಯಿತು.

ನಾನು 1977ರಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯಕ್ಕೆ ಸೇರಿದನಂತರ ಹಂಪೆ ಉತ್ಖನನ ಕಾರ್ಯ ಕೈಗೊಳ್ಳಬೇಕಾಯಿತು. ನಾನು ಮೊದಲೇ ತಯಾರಿಸಿದ ಶಾಸನಗಳ ಸೂಚಿ ಕಾರ್ಡುಗಳು ಹಂಪೆ ಪುನರುತ್ಥಾನ ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅನೇಕ ವಿದ್ವಾಂಸರಿಗೆ ಬಹಳ ಉಪಯೋಗವಾದವು. ಈ ಯೋಜನೆಯಡಿಯಲ್ಲಿ ವಿಜಯನಗರದಲ್ಲಿ ಇನ್ನೂ 250ಕ್ಕೂ ಹೆಚ್ಚಿನ ಹೊಸ ಶಾಸನಗಳು ದೊರೆತವು.

ಉತ್ತರ ಕರ್ನಾಟಕ ಜಿಲ್ಲೆಗಳ ಶಾಸನಗಳ ಸಾರಾಂಶ ಸಂಗ್ರಹಿಸಿ ಸಂಶೋಧಕರ ಅಧ್ಯಯನಕ್ಕೆ ಅನುಕೂಲವಾಗುವಂತೆ ಒಂದೇ ಮಾಲಿಕೆಯಲ್ಲಿ ಪ್ರಕಟಿಸುವುದು ನನ್ನ ಯೋಜನೆಯಾಗಿತ್ತು. ಆದರೆ ನಾನು ಹಂಪೆ ಉತ್ಖನನ ಮತ್ತು ಅದರ ವರದಿಗಳನ್ನು ತಯಾರಿಸುವುದರಲ್ಲಿ ಮಗ್ನನಾಗಿದ್ದುದರಿಂದ ಈ ವಿಚಾರವನ್ನು ಜಾರಿಗೊಳಿಸುವುದು ಅಸಾಧ್ಯವಾಗಿತ್ತು. ಅದೇ ಸಮಯಕ್ಕೆ ಭಾರತ ಸರ್ಕಾರದ ಪುರಾತತ್ವ ಸರ್ವೇಕ್ಷಣೆಯಿಂದ ಡಿಸೆಂಬರ್ 1994ರಿಂದ ಮೇ 1985ರವರೆಗೆ ಬಹ್ರೇನ್‌ನಲ್ಲಿ ಉತ್ಖನನ ನಡೆಸಲು ನಿಯೋಜನೆಗೊಂಡ ತಂಡದ ಒಬ್ಬ ಸದಸ್ಯನಾಗಿ ಆಯ್ಕೆಗೊಂಡೆ. ಬಹ್ರೇನ್‌ನಲ್ಲಿ ಉತ್ಖನನ ಮುಗಿದ ತಕ್ಷಣ ನಾನು ಹೊಸ ಕ್ಯಾಮರಾ, ಬೆರಳಚ್ಚು ಯಂತ್ರ ಮತ್ತು ಕ್ಷೇತ್ರ ಕಾರ್ಯಕ್ಕೆ ಬೇಕಾದ ಉಪಕರಣಗಳೊಂದಿಗೆ ಕಾರ್ಯಗತಗೊಳಿಸಬೇಕಾದ ಹಲವು ಯೋಜನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮೈಸೂರಿಗೆ ಹಿಂದಿರುಗಿದೆ. ಉತ್ತರ ಕರ್ನಾಟಕ ಜಿಲ್ಲೆಗಳ ಶಾಸನಗಳ ಸಾರಾಂಶಗಳನ್ನು ಸಂಗ್ರಹಿಸಿ ಪ್ರಕಟಿಸುವುದೂ ಇದರಲ್ಲಿ ಒಂದಾಗಿತ್ತು. ಆಗ ನನ್ನ ಹತ್ತಿರ ಬೆರಳಚ್ಚು ಯಂತ್ರ ಮತ್ತು ಕಾಗದ ಮುಂತಾದವುಗಳ ಖರ್ಚಿಗಾಗಿ ಸ್ವಲ್ಪ ಹಣವಿತ್ತು. ಈ ಸಂದರ್ಭದಲ್ಲಿ ನನ್ನ ಸುಯೋಗವೋ ಎನ್ನುವಂತೆ ಈ ನನ್ನ ಕಾರ್ಯದಲ್ಲಿ ನೆರವಾಗಲು ನನ್ನ ಪತ್ನಿ ಶ್ರೀಮತಿ ವಿನೋದಾ ಪಾಟೀಲರು ಮುಂದೆ ಬಂದರು. ನಾವಿಬ್ಬರೂ ಸೇರಿ ಶಾಸನಗಳನ್ನು ಸಂಗ್ರಹಿಸಲು ನಿರ್ದಿಷ್ಟ ಮಾದರಿಯನ್ನು ಸಿದ್ಧಪಡಿಸಿದೆವು. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಗ್ರಂಥಾಲಯದಿಂದ ಪುಸ್ತಕಗಳನ್ನು ಪಡೆದು ಕೆಲಸವನ್ನು ಪ್ರಾರಂಭಿಸಿದೆವು. ನನ್ನ ಪತ್ನಿ ಶಾಸನಗಳನ್ನು ಬೆರಳಚ್ಚು ಮಾಡತೊಡಗಿದರು. ವರ್ಷಗಳು ಕಳೆದಂತೆ ಬೆರಳಚ್ಚಾದ ಶಾಸನಗಳ ಸಂಖ್ಯೆ ನಮ್ಮ ಊಹೆ ಮೀರಿ ಬೆಳೆಯಿತು. ಶಾಸನಗಳನ್ನು ಜಿಲ್ಲಾವಾರು, ತಾಲ್ಲೂಕುವಾರು ಮತ್ತು ಪ್ರತಿ ತಾಲ್ಲೂಕಿನ ಗ್ರಾಮಗಳನ್ನು ಅಕಾರಾದಿಯಾಗಿ ಜೋಡಿಸಿ, ಶಾಸನಗಳ ಬೇರೆ ಬೇರೆ ಉಲ್ಲೇಖಗಳನ್ನು ಒಟ್ಟುಗೂಡಿಸಿ, ಶಾಸನಗಳ ದಿನಾಂಕವನ್ನು ಕ್ರಿಸ್ತಶಕೆಗೆ ಮಾರ್ಪಡಿಸಿ ಶಾಸನಗಳ ಸಂಪಾದನೆಯನ್ನು ಪ್ರಾರಂಭಿಸಿದೆವು.

1992ರಲ್ಲಿ ಈ ನಿರ್ದೇಶನಾಲಯದ ನಿರ್ದೇಶಕರಾಗಿದ್ದ ಶ್ರೀ ಚಿರಂಜೀವಿ ಸಿಂಗ್, ಭಾ.ಆ.ಸೇ., ಅವರನ್ನು ನಾನು ಭೇಟಿಯಾಗಿ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳ ಶಾಸನಗಳನ್ನು ಮಾದರಿಯಾಗಿ ತೋರಿಸಿ ವಿವರಿಸಿದಾಗ ಈ ಮಾಲಿಕೆಯ ಸಂಪುಟಗಳ ಉಪಯುಕ್ತತೆಯನ್ನು ಪ್ರಶಂಶಿಸಿ ನಿರ್ದೇಶನಾಲಯದಿಂದ ಪ್ರಕಟಿಸಲು ಒಪ್ಪಿದರು.

ಈ ಮಾಲಿಕೆಯಲ್ಲಿ ಪ್ರಕಟವಾಗುವ ಸಂಪುಟಗಳು ಕೆಳಗಿನಂತಿವೆ:

1. ವಿಜಯನಗರ (ಹಂಪೆ)
2. ಬಳ್ಳಾರಿ ಜಿಲ್ಲೆ
3. ರಾಯಚೂರು ಜಿಲ್ಲೆ
4. ಗುಲ್ಬರ್ಗ ಜಿಲ್ಲೆ
5. ಬೀದರ್ ಜಿಲ್ಲೆ
6. ಬೆಳಗಾವಿ ಜಿಲ್ಲೆ
7. ಧಾರವಾಡ ಜಿಲ್ಲೆ
8. ಬಿಜಾಪುರ ಜಿಲ್ಲೆ
9. ಉತ್ತರ ಕನ್ನಡ ಜಿಲ್ಲೆ
10. ದಕ್ಷಿಣ ಕನ್ನಡ ಜಿಲ್ಲೆ

ಮೊದಲನೇ ಸಂಪುಟವು ಬಳ್ಳಾರಿ ಜಿಲ್ಲೆಯ ಜಗತ್ಪ್ರಸಿದ್ಧವಾದ ಪ್ರಾಚೀನ ಸ್ಮಾರಕಗಳನ್ನೊಳಗೊಂಡ ವಿಜಯನಗರದ (ಹಂಪೆಯ) 471 ಶಾಸನಗಳನ್ನೊಳಗೊಂಡಿದೆ. ಜಗತ್ತಿನಾದ್ಯಂತದ ವಿದ್ವಾಂಸರು ಮತ್ತು ಪ್ರವಾಸಿಗರನ್ನು ಆಕರ್ಷಿಸುವ ಈ ಸ್ಥಳಕ್ಕೆ ಪ್ರತ್ಯೇಕವಾದ ಸಂಪುಟವನ್ನು ಸಿದ್ಧಪಡಿಸುವುದೇ ಸೂಕ್ತವೆಂಬುದು ನನ್ನ ಅನಿಸಿಕೆಯಾಗಿತ್ತು. ಅಂತಿಮವಾಗಿ ನನ್ನ ಈ ಕನಸು ಈಗ ನನಸಾಗಿದೆ.

ಶ್ರೀ ಚಿರಂಜೀವಿ ಸಿಂಗ್ ಅವರು ಈ ಸಂಪುಟಗಳನ್ನು ಪ್ರಕಟಿಸಲು ನೀಡಿದ ಪ್ರೋತ್ಸಾಹಕ್ಕೆ ಅವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಮೊದಲನೇ ಸಂಪುಟವನ್ನು ಪ್ರಕಟಿಸಿ ಈ ಮಾಲಿಕೆಗೆ ಚಾಲನೆ ನೀಡಿದ ಡಾ. ಡಿ.ವಿ.ದೇವರಾಜ್ ರವರಿಗೆ ನಾನು ಋಣಿ. ಈ ಸಂಪುಟದ ಹಸ್ತಪ್ರತಿಯನ್ನು ಸಕಾಲದಲ್ಲಿ ಬೆರಳಚ್ಚು ಮಾಡಿದ ಶ್ರೀಮತಿ ಎಮ್. ಚಂದ್ರಮ್ಮ ಅವರಿಗೆ ನಾನು ಕೃತಜ್ಞ.

ಕೇಂದ್ರೀಯ ಆಹಾರ ವಿಜ್ಞಾನ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ವಿ. ಪ್ರಕಾಶ್ ಅವರು ಈ ಪುಸ್ತಕದ ಮುದ್ರಣವನ್ನು ಸಂತೋಷದಿಂದ ಒಪ್ಪಿ ಸಕಾಲದಲ್ಲಿ ಮುದ್ರಿಸಿ ಕೊಟ್ಟಿರುವರು. ಶ್ರೀ ಕೆ.ಎ.ರಂಗನಾಥ, ಮುಖ್ಯಸ್ಥರು, ಎಫ್‌ಐಎಸ್‌ಟಿಆಯ್‌ಎಸ್ ಮತ್ತು ಶ್ರೀ ಎಸ್. ಉಮೇಶ್, ಮುದ್ರಣದ ತಾಂತ್ರಿಕ ಅಧಿಕಾರಿ ಅವರು ಶ್ರೀಯುತರಾದ ಜಿ. ವೆಂಕಟೇಶ್ ಮತ್ತು ಸಿ.ಎನ್.ಜನಾರ್ಧನ ಅವರ ಸಹಾಯದಿಂದ ಈ ಪುಸ್ತಕವನ್ನು ಅತ್ಯಂತ ಕಡಿಮೆ ಸಮಯದಲ್ಲಿ ಆಕರ್ಷಕವಾಗಿ ಮುದ್ರಿಸಿದ್ದಾರೆ. ಈ ಎಲ್ಲ ಮಹನೀಯರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮೈಸೂರು
20-4-96

(ಚನ್ನಬಸಪ್ಪ ಎಸ್. ಪಾಟೀಲ)
ಉಪ ನಿರ್ದೇಶಕ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ

ಪರಿವಿಡಿ

ಸಂಕ್ಷೇಪಗಳು ಮತ್ತು ಆಧಾರ ಗ್ರಂಥಗಳು

ಆ್ಯರಿಎ : ಆ್ಯನುವಲ್ ರಿಪೋರ್ಟ್ ಆನ್ ಎಪಿಗ್ರಾಫಿ

ಆ್ಯರಿಇಎ : ಆ್ಯನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ

ಆ್ಯರಿಸೌಇಎ : ಆ್ಯನುವಲ್ ರಿಪೋರ್ಟ್ ಆನ್ ಸೌಥ್ ಇಂಡಿಯನ್ ಎಪಿಗ್ರಾಫಿ

ಎಇ : ಎಪಿಗ್ರಾಫಿಯ ಇಂಡಿಕ

ಕ್ವಾಜಮಿಸೊ : ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸಾಯಿಟಿ

ಜಎಸೊಇ : ಜರ್ನಲ್ ಆಫ್ ದಿ ಎಪಿಗ್ರಾಫಿಕಲ್ ಸೊಸಾಯಿಟಿ ಆಫ್ ಇಂಡಿಯ

ವಿಪ್ರೊರೀ : ವಿಜಯನಗರ ಪ್ರೊಗ್ರೆಸ್ ಆಫ್ ರೀಸರ್ಚ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಸೌಇಇ : ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಶನ್ಸ್

ಫಿಲಿಯೋಜಾ ವಸುಂಧರಾ, 1986, ''ಟು ಸ್ಮಾಲ್ ಇನ್ಸ್‌ಕ್ರಿಪ್‌ಶನ್ಸ್ ಫ್ರಾಮ್ ಹಂಪಿ'', ಗೌರೀಶ್ವರ ಭಟ್ಟಾಚಾರ್ಯ (ಸಂ.), *ದೇಯಧರ್ಮ: ಸ್ಟಡೀಸ್ ಇನ್ ಮೆಮೊರಿ ಆಫ್ ಡಾ. ಡಿ.ಸಿ. ಸರ್ಕಾರ್*, ಶ್ರೀ ಸದ್ಗುರು ಪಬ್ಲಿಕೇಶನ್ಸ್, ಡೆಲ್ಲಿ.

ಫಿಲಿಯೊಜಾ ಪಿಯರೆ-ಸಿಲ್ವಿಯನ್ ಮತ್ತು ವಸುಂಧರಾ ಫಿಲಿಯೋಜಾ, 1988, *ಹಂಪಿ-ವಿಜಯನಗರ, ದಿ ಟೆಂಪಲ್ ಆಫ್ ವಿಠಲ*, ಸೀತಾರಾಮ ಭಾರತೀಯ ಇನ್‌ಸ್ಟ್ಯೂಟ್ ಆಫ್ ಸೈಂಟಿಫಿಕ್ ರೀಸರ್ಚ್, ನ್ಯೂ ಡೆಲ್ಲಿ.

ರಾಜಶೇಖರ ಎಸ್., 1992, ''ಇನ್ಸ್‌ಕ್ರಿಪ್‌ಶನ್ಸ್'', ಅನ್ನಾ ಎಲ್. ದಲ್ಲಾಪಿಕೋಲ, ಜಾನ್ ಎಂ. ಫಿಟ್ಜ್, ಜಾರ್ಜ್ ಮಿಶಲ್ ಮತ್ತು ಎಸ್. ರಾಜಶೇಖರ (ಸಂ), *ದಿ ರಾಮಚಂದ್ರ ಟೆಂಪಲ್ ಆಟ್ ವಿಜಯನಗರ*, ಮನೋಹರ ಮತ್ತು ಅಮೇರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ನ್ಯೂ ಡೆಲ್ಲಿ.

ಸುಗಂಧಾ, *ಹಿಸ್ಟರಿ ಆ್ಯಂಡ್ ಆರ್ಕಿಯಾಲಜಿ ಆಫ್ ಆನೆಗೊಂದಿ*, ಪೂನ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಪ್ರೌಢ ಪ್ರಬಂಧ, ಪೂನ.


ಶಾಸನಗಳು ದೊರೆತ ಊರುಗಳ ಸೂಚಿ

ವಂಶಾನುಕ್ರಮದಲ್ಲಿ ಶಾಸನಗಳ ಸೂಚಿ

ಅರಸ	ಶಾಸನ ಕಾಲ ಕ್ರಿ.ಶ.	ಶಾಸನ ಸಂಖ್ಯೆ
ಕಲ್ಯಾಣ ಚಾಲುಕ್ಯ		
ಅಹವಮಲ್ಲ	988	45
ವಿಕ್ರಮಾದಿತ್ಯ VI	1076	375
ಕಲಚುರಿ		
ಬಿಜ್ಜಳ	--	419
ಕುರುಗೋಡಿನ ಸಿಂದ		
ಕಲಿದೇವರಸ	1199	97
ಹೊಯ್ಸಳ		
ಸೋಮೇಶ್ವರ	1236	98
ವಿಜಯನಗರ		
ಹರಿಹರ I	1342	23
	1349	39
ಹರಿಹರ	--	207, 268, 272
ಬುಕ್ಕ I	1366	369
ಬುಕ್ಕ	--	346, 349
ಹರಿಹರ II	1379	99, 153
	1380	368
(ಕಂಪಭೂಪ)	1383	33
	1386	152, 382
	1397	209
	1398	210, 211
ದೇವರಾಯ I	1410	213
	1412	423
ದೇವರಾಯ II	1426	347
	1434	401
	1436	49
	1437	19
	1439	288
ದೇವರಾಯ III	1450	403

ಅರಸ	ಶಾಸನ ಕಾಲ ಕ್ರಿ.ಶ.	ಶಾಸನ ಸಂಖ್ಯೆ
ಮಲ್ಲಿಕಾರ್ಜುನ	--	370 , 371
ವಿರೂಪಾಕ್ಷ	--	267
ನರಸಿಂಹ	1505	69
ಬುಕ್ಕ (?)	1506	225
ನರಸಿಂಹ II	1529	173
ಕೃಷ್ಣದೇವರಾಯ	1510	70, 103-104, 106
	1513	75, 102, 175
		178-179, 314, 338
	1515	227-228
	1516	198-199, 414
	1516-17	197
	1517	431
	1518	428
	1521	333
	1524	64, 416
	1526	435
	1528	379
	1529	226, 389
ಅಚ್ಯುತರಾಯ	1531	3, 188, 372, 420, 432
	1532	186, 231, 225
	1533	18, 181
	1534	182, 189, 257
	1535	176
	1536	57, 190-191, 291,
		394, 421
	1538	172, 200, 202-203,
		229-230, 258-259,
		412, 417-418, 437,
		464-465, 467
	1540	468
	--	256, 307, 320
ಸದಾಶಿವರಾಯ	1543	192
	1545	180, 194, 234-235, 332

	1547	355-356
	1548	351, 357
	1549	415, 471
	1553	204
	1554	184-185, 326
	1556	35, 52, 78, 169, 402
	1557	383
	1559	187, 205
	1560	170
	1561	77, 177, 301
	1563	183
	1563-64	193
	1564	174
	--	232, 342-343
ಶ್ರೀರಂಗ	1578	438
ರಾಮರಾಜ	1591	22
	--	373
ವೆಂಕಟಪತಿ I	1612	55
ವೆಂಕಟ II	1636	439
ಕೆಳದಿ ನಾಯಕ		
--	--	440
ಇತರ		
	1319	9
	1325	38
	1348	429
	1366	11
	1371	13
	1375	10
	1377	216
	1379	12, 154
	1390	8, 215
	1400	162
	1406	107, 157, 212
	1410	155
	1411	265
	1482	151
	1485	424
	1494	112
	1517	84
	1525	65, 315
	1528	54
	1529	105
	1531	430
	1532	196
	1551	6
	1552	58
	1561	2
	1657	50
	1699	43
	1729	53
ಟಿಪ್ಪು ಸುಲ್ತಾನ (ಹಿಜ್ರಿ 1210)	1790	422
--	1870	24
--	1878	25
--	1879	26


15°26'
76°25'
76°30'
15°26'
GANGAWATI
A
B
C
D
E
F
G
H
J
K
Anegondi
15°21'
15°21'
Bukkasagara
Nimbapura
Hampi
L
M
N
O
Venkatapura
P
Kadirampur
Kamalapura
Nagenahalli
Q
Malapanagudi
R
S
T
U
Kondanayakanahalli
Anantasayanagudi
15°16'
HOSPET
15°16'
V
W
X
Y
Z
Jambunathanahalli
76°25'
76°30'
76°35'
0
5 KM

ಪೀಠಿಕೆ


ಈ ಸಂಪುಟವು ಹಿಂದೆ ವಿಜಯನಗರ ಪಟ್ಟಣ ಆವರಿಸಿದ್ದ ಈಗಿನ ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗೊಂದಿ; ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಬುಕ್ಕಸಾಗರ, ಹಂಪೆ, ಕಮಲಾಪುರ, ಕಡಿರಾಮಪುರ, ವೆಂಕಟಾಪುರ, ನಿಂಬಾಪುರ, ನಾಗೇನಹಳ್ಳಿ, ಅನಂತಶಯನಗುಡಿ, ಹೊಸಪೇಟೆ, ಮಲಪನಗುಡಿ, ಕೊಂಡನಾಯಕನಹಳ್ಳಿ ಮತ್ತು ಜಂಬುನಾಥನಹಳ್ಳಿಯಲ್ಲಿರುವ 471 ಶಾಸನಗಳನ್ನೊಳಗೊಂಡಿದೆ. ಈ ಶಾಸನಗಳಲ್ಲಿ ಹೆಚ್ಚಿನವು ಕೃಷಿ ಭೂಮಿ ಮತ್ತು ಬೆಟ್ಟಗಳ ವಿಶಾಲವಾದ ಪ್ರದೇಶದಲ್ಲಿ ಹರಡಿವೆ. ಶಾಸನಗಳಿರುವ ನಿರ್ದಿಷ್ಟವಾದ ಸ್ಥಳಗಳನ್ನು ಪ್ರಮುಖ ದೇವಾಲಯ ಅಥವಾ ಸ್ಥಳಗಳಿಗೆ ಸಂಬಂಧಪಟ್ಟಂತೆ ಸೂಚಿಸುವುದು ಕಷ್ಟದಾಯಕವಾಗಿದೆ. ಆದುದರಿಂದ ಡಾ. ಜಾನ್ ಎಮ್. ಫ್ರಿಟ್ಸ್, ಡಾ. ಜಾರ್ಜ್ ಮಿಶಲ್ ಮತ್ತು ಡಾ. ಕಾರ್ಲಾ ಎಮ್. ಸಿನೊಪೊಲಿ ಅವರು ರೂಪಿಸಿರುವ ಈ ಪ್ರದೇಶದ ನಕಾಶೆಗಳ ಸರಣಿಯನ್ನು ಶಾಸನಗಳ ಸ್ಥಳಗಳನ್ನು ಗುರುತಿಸಲು ಉಪಯೋಗಿಸಲಾಗಿದೆ.

ಈಶಾನ್ಯಕ್ಕೆ ಗಂಗಾವತಿ ಮತ್ತು ನೈಋತ್ಯಕ್ಕೆ ಹೊಸಪೇಟೆ ಮತ್ತು ಮಧ್ಯದಲ್ಲಿ ವಿಜಯನಗರ ಪಟ್ಟಣವನ್ನೊಳಗೊಂಡ ಪ್ರದೇಶವನ್ನು 25 ಚೌಕಗಳಲ್ಲಿ ವಿಭಾಗಿಸಲಾಗಿದೆ. ಪ್ರತಿಯೊಂದು ಚೌಕವನ್ನು ಇಂಗ್ಲೀಷ್ ದೊಡ್ಡಕ್ಷರದಿಂದ ಗುರುತಿಸಲಾಗಿದೆ. ಆದ್ದರಿಂದ 25 ಚೌಕಗಳನ್ನು ಇಂಗ್ಲೀಷ್ A ಅಕ್ಷರದಿಂದ Z ಅಕ್ಷರದವರೆಗಿನ (I ಬಿಟ್ಟು) 25 ಅಕ್ಷರಗಳಿಂದ ಗುರುತಿಸಲಾಗಿದೆ. ಆನೆಗೊಂದಿಯು H ಚೌಕದಲ್ಲಿ, ವಿಜಯನಗರದ ಮಧ್ಯ ಭಾಗವು N ಚೌಕದಲ್ಲಿ, ಮತ್ತು ಕಮಲಾಪುರ S ಚೌಕದಲ್ಲಿವೆ. ಈ 25 ಚೌಕಗಳಲ್ಲಿ ಪ್ರತಿಯೊಂದು ಚೌಕವನ್ನು ಪುನಃ 25 ಉಪಚೌಕಗಳಲ್ಲಿ ವಿಭಾಗಿಸಲಾಗಿದೆ. ಪ್ರತಿಯೊಂದು ಉಪಚೌಕವನ್ನು ಎರಡು ದೊಡ್ಡ ಅಕ್ಷರಗಳಿಂದ ಗುರುತಿಸಲಾಗಿದೆ. ಉದಾ: N ಚೌಕವನ್ನು 25 ಸಣ್ಣ ಉಪಚೌಕಗಳಲ್ಲಿ ವಿಭಾಗಿಸಲಾಗಿದ್ದು, ಉಪಚೌಕಗಳನ್ನು NA ದಿಂದ NZ ವರೆಗಿನ ಅಕ್ಷರಗಳಿಂದ (NI ಬಿಟ್ಟು) ಗುರುತಿಸಲಾಗಿದೆ. ಪುನಃ ಎರಡು ಅಕ್ಷರಗಳಿಂದ ಗುರುತಿಸಲಾದ 25 ಚೌಕಗಳಲ್ಲಿ ಪ್ರತಿಯೊಂದನ್ನು 25 ಚಿಕ್ಕ ಚೌಕಗಳಲ್ಲಿ ವಿಭಾಗಿಸಲಾಗಿದೆ. ಈ ಚೌಕಗಳನ್ನು ಇಂಗ್ಲೀಷ್ ಸಣ್ಣಕ್ಷರ a ದಿಂದ z ವರೆಗಿನ ಅಕ್ಷರಗಳಿಂದ ಗುರುತಿಸಲಾಗಿದೆ. ಈ ಹಂತದ ಪ್ರತಿಯೊಂದು ಚೌಕವನ್ನು ಮೂರು ಅಕ್ಷರಗಳಿಂದ ಗುರುತಿಸಲಾಗಿದೆ. ಉದಾ: ಕೃಷ್ಣದೇವಸ್ಥಾನವು NLm ಮತ್ತು NLn ಚೌಕಗಳಲ್ಲಿ ಮತ್ತು ಉದ್ದಾನ ವೀರಭದ್ರ ದೇವಸ್ಥಾನವು NLw ಚೌಕದಲ್ಲಿವೆ. ಈ ನಕಾಶೆಗಳಲ್ಲಿ ಕೆಲವನ್ನು ನಿರ್ದೇಶನಾಲಯವು ಹೊರತಂದಿರುವ "ವಿಜಯನಗರ: ಪ್ರೊಗ್ರೆಸ್ ಆಫ್ ರಿಸರ್ಚ್ 1983-84" ರಲ್ಲಿ ಪ್ರಕಟಿಸಲಾಗಿದೆ. ಶಾಸನಗಳ ಸ್ಥಳಗಳನ್ನು ನಕಾಶೆಗಳಲ್ಲಿ ಗುರುತಿಸಿ, ಮೂಲ ಪಾಠ ಮತ್ತು ಅನುವಾದದೊಂದಿಗೆ "ಎಪಿಗ್ರಾಫಿಯ ಕರ್ನಾಟಿಕ" ದಲ್ಲಿ ಪ್ರಕಟಿಸಲಾಗುವುದು.


ಈ ಸಂಪುಟದಲ್ಲಿ ಶಾಸನಗಳನ್ನು ನಕಾಶೆಗಳ ಸರಣಿಯ ಅನುಕ್ರಮದಲ್ಲಿ ಅಳವಡಿಸಲಾಗಿದೆ. ಶಾಸನಗಳನ್ನು ಒಂದು ನಿರ್ದಿಷ್ಟ ಮಾದರಿಯಲ್ಲಿ ಪ್ರಕಟಿಸಲಾಗಿದೆ. ಮೊದಲನೇ ಅಂಕಣದಲ್ಲಿ ಶಾಸನ ಇರುವ ಸ್ಥಳದ ವಿವರ ಮತ್ತು ಅದರ ಕೊನೆಯಲ್ಲಿ ಆವರಣದಲ್ಲಿ ನಕಾಶೆಯ ಉಲ್ಲೇಖವಿದೆ. ಎರಡನೇ ಅಂಕಣದಲ್ಲಿ ವಂಶ ಮತ್ತು ಅರಸನ ಹೆಸರು ಇವೆ. ಮೂರನೇ ಅಂಕಣದಲ್ಲಿ ಶಾಸನದಲ್ಲಿ ಉಲ್ಲೇಖವಾದ ದಿನಾಂಕ ಮತ್ತು ಅದರ ಸಮಕಾಲೀನ ಕ್ರಿಸ್ತ ಶಕ ಇದೆ. ನಾಲ್ಕನೇ ಅಂಕಣದಲ್ಲಿ ಭಾಷೆ ಮತ್ತು ಲಿಪಿ ಇವೆ. ಐದನೆಯದರಲ್ಲಿ ಶಾಸನದ ಸಾರಾಂಶವಿದೆ. ಕೊನೆಯ ಅಂಕಣದಲ್ಲಿ ಶಾಸನದ ಪ್ರಕಟಣೆಯ ಉಲ್ಲೇಖವಿದೆ.

ರಾಜಕೀಯ: ವಿಜಯನಗರದ ಸ್ಥಾಪನೆಗಿಂತ ಮೊದಲೇ ಹಂಪೆ ಪ್ರದೇಶವು ಮಹತ್ವದ್ದಾಗಿತ್ತು.[1] ಅರಮನೆ ಪ್ರದೇಶದ ಆವರಣದಲ್ಲಿ ದೊರೆತ ಕ್ರಿ.ಶ. 1-2ನೇ ಶತಮಾನದ ಮೂರು ಬ್ರಾಹ್ಮಿ ಶಾಸನಗಳೇ ಈ ಪ್ರದೇಶದಲ್ಲಿ ದೊರೆತ ಅತಿ ಪ್ರಾಚೀನ ಶಾಸನಗಳು. ಅವುಗಳಲ್ಲೊಂದು ಶಾಸನ ಸಂ. 374 ಮತ್ತು ಶಿಲ್ಪಪಟ್ಟಿಗಳ ಮೇಲಿರುವ ಇನ್ನೆರಡು ಶಾಸನಗಳು ಇನ್ನೂ ಪ್ರಕಟಗೊಳ್ಳಬೇಕಿದೆ. ಶಾಸನ ಸಂ. 374 ತ್ರುಟಿತವಾಗಿದ್ದು ದಾನ ನೀಡಿದ ವಿಷಯ ತಿಳಿಸುತ್ತದೆ.

ಕಲ್ಯಾಣ ಚಾಲುಕ್ಯರಿಗೆ ಸಂಬಂಧಿಸಿದ ಎರಡು ಶಾಸನಗಳಿವೆ. ಇವುಗಳಲ್ಲಿ ಕ್ರಿ.ಶ. 988ರ ಶಾಸನ ಸಂ. 45 ಅಹವಮಲ್ಲ (ಇರಿವಬೆಡಂಗ ಸತ್ಯಾಶ್ರಯ)ನದು ಮತ್ತು ಕ್ರಿ.ಶ. 1076ರ ಶಾಸನ ಸಂ. 107 ಆರನೆಯ ವಿಕ್ರಮಾದಿತ್ಯನದು. ಶಾಸನ ಸಂ. 107 ಆರನೆಯ ವಿಕ್ರಮಾದಿತ್ಯನಿಂದ ಪ್ರಾರಂಭಗೊಂಡ ಚಾಲುಕ್ಯ ವಿಕ್ರಮ ವರ್ಷದಲ್ಲಿರುವ ಪ್ರಥಮ ಶಾಸನವಾಗಿದೆ. ಈ ಪ್ರದೇಶವು 12ನೇ ಶತಮಾನದಲ್ಲಿ ಕಲಚುರಿಗಳ ಆಡಳಿತಕ್ಕೊಳಪಟ್ಟಿತ್ತು. ಶಾಸನ ಸಂ. 419 ಕಲಚುರಿ ಅರಸ ಬಿಜ್ಜಳನ ಬಿರುದುಗಳನ್ನು ತಿಳಿಸುತ್ತದೆ. ಕ್ರಿ.ಶ. 1199ರ ಶಾಸನ ಸಂ. 97 ಕಲಿದೇವರಸನು ಕುರುಗೋಡಿನಿಂದ ಬಲ್ಲಕುಂದೆ ನಾಡನ್ನು ಮತ್ತು ಆತನ ಸಾಮಂತ ಮಾದೆಯ ನಾಯಕನು ಮತಂಗ ಪರ್ವತವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಕಲಿದೇವರಸನು ಸಿಂದ ವಂಶದ ಅರಸನಾಗಿದ್ದ. 13ನೇ ಶತಮಾನದಲ್ಲಿ ಹೊಯ್ಸಳರು ಈ ಪ್ರದೇಶದ


N
76°28'
76°29'
15°2
NA
NB
NC
ND
NE
NF
NG
NH
NJ
NK
15°20'
15°2
NM
NN
NO
NP
NQ
NR
NS
NT
NU
15°19'
15°1
NV
NW
NX
NY
NZ
76°28'
76°29'
76°30
0
500m
1KM

NL



ಮೇಲೆ ಪ್ರಭುತ್ವ ಹೊಂದಿದ್ದರು. ಕ್ರಿ.ಶ. 1236ರ ಶಾಸನ ಸಂ. 98 ಹೊಯ್ಸಳ ಅರಸ ಸೋಮೇಶ್ವರನು ವಿರೂಪಾಕ್ಷ ದೇವಸ್ಥಾನಕ್ಕೆ ದಾನ ಕೊಟ್ಟದ್ದನ್ನು ತಿಳಿಸುತ್ತದೆ.

14ನೇ ಶತಮಾನದ ಆರಂಭದಲ್ಲಿ ಮುಮ್ಮಡಿ ಸಿಂಗೆಯನಾಯಕನ ಮಗ ಕಂಪಿಲದೇವನು ತನ್ನ ರಾಜಧಾನಿಗಳಾದ ಹೊಸಮಲೆ ದುರ್ಗ ಮತ್ತು ಕುಮ್ಮಟದಿಂದ ಹಂಪೆ ಪ್ರದೇಶವನ್ನು ಆಳುತ್ತಿದ್ದನು.[2] ಶಾಸನ ಸಂ. 113 ಈತನು ಒಂದು ದೇವಸ್ಥಾನವನ್ನು ಕಟ್ಟಿಸಿ ಅದರಲ್ಲಿ ತನ್ನ ತಾಯಿ ಮಾದನಾಯಕಿತಿ, ತಂದೆ ಸಿಂಗೆಯನಾಯಕ ಮತ್ತು ಪೆರುಮೆಯನಾಯಕರ ಹೆಸರಿನಲ್ಲಿ ಲಿಂಗಗಳನ್ನು ಪ್ರತಿಷ್ಠಾಪಿಸಿದನೆಂದು ತಿಳಿಸುತ್ತದೆ.

ವಿಜಯನಗರವನ್ನು ಸಂಗಮ, ಸಾಳುವ, ತುಳುವ ಮತ್ತು ಅರವೀಡು ವಂಶದವರು ಆಳಿದರು. ಈ ಪ್ರದೇಶದ ಶಾಸನಗಳು ಹೆಚ್ಚಾಗಿ ಈ ವಂಶಗಳ ಅರಸರನ್ನು ಉಲ್ಲೇಖಿಸುತ್ತವೆ. ಸಂಗಮ ವಂಶದ ಮೊದಲನೆಯ ಅರಸನಾದ ಒಂದನೇ ಹರಿಹರನ ಆಳ್ವಿಕೆಯಲ್ಲಿ ಆತನ ಅಧಿಕಾರಿ ಇರುಗಪ್ಪ ದಂಡನಾಥನ ಮಗ ಬೈಚ ದಂಡನಾಥನು ಕ್ರಿ.ಶ. 1342ರಲ್ಲಿ ಆನೆಗೊಂದಿಯಲ್ಲಿ ಒಂದು ಜೈನ ಬಸದಿಯನ್ನು ಕಟ್ಟಿಸಿದನು (ಸಂ. 23). ಅದೇ ಅರಸನು ಕ್ರಿ.ಶ. 1349ರಲ್ಲಿ ಕಪಿಲೇಶ್ವರ ದೇವರಿಗೆ ಭೂಮಿ ದಾನ ನೀಡಿದನು (ಸಂ. 39). ಇನ್ನೂ ನಾಲ್ಕು ಶಾಸನಗಳಲ್ಲಿ (ಸಂ. 207, 268, 270, 272) ಹರಿಹರನ ಉಲ್ಲೇಖವಿದೆ, ಆದರೆ ಆತ ಒಂದನೇ ಹರಿಹರ ಅಥವಾ ಎರಡನೇ ಹರಿಹರ ಎಂಬುದು ತಿಳಿಯುವುದಿಲ್ಲ. ಇವುಗಳಲ್ಲೊಂದು (ಸಂ. 272) ಅರಸನ ಬೊಕ್ಕಸದ ನಾಗಪ್ಪನ ತಿರುವಕ್ಕಳ ತಂಳಪನನ್ನು ಉಲ್ಲೇಖಿಸುತ್ತದೆ. ಒಂದನೇ ಬುಕ್ಕನ ಅಧಿಕಾರಿಯಾಗಿದ್ದ ಮಹಾಪ್ರಧಾನ ಬಸವ ದಂಡನಾಯಕನು ಕ್ರಿ.ಶ. 1366ರಲ್ಲಿ ವಿರೂಪಾಕ್ಷ ದೇವರಿಗೆ ಭೂಮಿ ದಾನ ನೀಡಿದನು (ಸಂ. 369). ಇನ್ನೂ ಎರಡು ಶಾಸನಗಳು (ಸಂ. 346 ಮತ್ತು 349) ಆನೆಗೊಂದಿಯ ಕೊತ್ತಳ ಮತ್ತು ಸೋಮಯದೇವರ ಕೊತ್ತಳಗಳ ಬಗ್ಗೆ ತಿಳಿಸುತ್ತವೆ. ಈ ಕೊತ್ತಳಗಳಿರುವ ಸ್ಥಳಗಳನ್ನು ಗುರುತಿಸುವಾಗ ವಿಜಯನಗರ ಪಟ್ಟಣವನ್ನು ವೀರ ಬುಕ್ಕರಾಯನ ವಿಜಯನಗರ ಪಟ್ಟಣವೆಂದು ಉಲ್ಲೇಖಿಸುತ್ತವೆ. ಈ ಅರಸನೇ ವಿಜಯನಗರ ಸ್ಥಾಪನೆಗೆ ಕಾರಣನಾದ ಒಂದನೇ ಬುಕ್ಕನೆಂದು ಹೇಳಬಹುದು.[3]

ಎರಡನೇ ಹರಿಹರನ ಕಾಲದ ಒಂಬತ್ತು ಶಾಸನಗಳಿವೆ. ಈ ಅರಸನ ಆಜ್ಞೆಯ ಮೇರೆಗೆ ಮುದ್ದ ದಂಡೇಶನು ಕ್ರಿ.ಶ. 1379ರಲ್ಲಿ ವಿರೂಪಾಕ್ಷ ದೇವಸ್ಥಾನಕ್ಕೆ ದಾನಮಾಡಿದನು (ಸಂ. 99). ಅದೇ ವರ್ಷ ಆತನ ಅಧಿಕಾರಿಗಳಾದ ಚಿಕ ಒಡೆಯ, ಸಾಯಣಅಯ್ಯ ಮತ್ತು ಅಕ್ಷುದನಾಥ ಒಡೆಯರು ಆಡಳಿತ ನೋಡಿಕೊಳ್ಳುತ್ತಿದ್ದರು (ಸಂ. 153). ಕ್ರಿ.ಶ. 1380ರ ಶಾಸನ ಸಂ. 368 ಅರಸನ ಮನೆಯ ಮಲಗೆಯ ನಾಯಕನ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1383ರಲ್ಲಿ ಹರಿಹರನ ಮಗ ಕಂಪಭೂಪನು ತುಂಗಭದ್ರಾ ನದಿಗೆ ದಾರಿಯನ್ನು ಮಾಡಿಸಿದನು (ಸಂ. 33). ಇರುಗಪ್ಪ ದಂಡನಾಯಕನು ಕ್ರಿ.ಶ. 1386ರಲ್ಲಿ ಕುಂಥು ಜಿನನಾಥನಿಗೆ ವಿಜಯನಗರದಲ್ಲಿ ಕಲ್ಲಿನ ದೇವಸ್ಥಾನ (ಗಾಣಗಿತ್ತಿ ಜೈನ ದೇವಸ್ಥಾನ) ಕಟ್ಟಿಸಿದನು (ಸಂ. 382). ರಾಣಿ ಬುಕ್ಕಯವೆಯು ಕ್ರಿ.ಶ. 1397ರಲ್ಲಿ ಜಡೆಯಶಂಕರ ದೇವಸ್ಥಾನದಲ್ಲಿ ದೀಪಸ್ತಂಭವನ್ನು ನಿಲ್ಲಿಸಿದಳು (ಸಂ. 209). 13 ಗ್ರಂಥಗಳ ಕರ್ತೃವಾದ ವಿರೂಪಾಕ್ಷ ಪಂಡಿತನು ಕ್ರಿ.ಶ. 1398ರಲ್ಲಿ ಹೇಮಕೂಟದ ಮೇಲೆ ವಿರೂಪಾಕ್ಷ ಸಿದ್ಧ ಶ್ರೀಪಾದ ಶ್ರೀವಲ್ಲಭ ದೇವರ ದೇವಸ್ಥಾನವನ್ನು ಕಟ್ಟಿಸಿದನು (ಸಂ. 210-211).

ಒಂದನೇ ದೇವರಾಯನ ಉಲ್ಲೇಖ ಎರಡು ಶಾಸನಗಳಲ್ಲಿದೆ (ಸಂ. 213 ಮತ್ತು 423). ಆತನ ಮಂತ್ರಿ ಲಕ್ಷ್ಮೀಧರನು ಮಾಲ್ಯವಂತ ಪರ್ವತದ ದಕ್ಷಿಣಕ್ಕೆ ಒಂದು ಗುಹೆಯಲ್ಲಿ ಕ್ರಿ.ಶ. 1410ರಲ್ಲಿ ಗಣೇಶನ ವಿಗ್ರಹವನ್ನು ಪ್ರತಿಷ್ಠಾಪಿಸಿದನು (ಸಂ. 213). ಹೆಗ್ಗಡೆ ಸೋವಣ್ಣ ಅಣ್ಣನು ಕ್ರಿ.ಶ. 1405ರಲ್ಲಿ ಮಲಪನಗುಡಿಯಲ್ಲಿ ಮಾಳಿಗೆಯುಳ್ಳ ಬಾವಿ (ಮಾಳಿಗೆಕೂಪಾರಾಮ)ವನ್ನು ಕಟ್ಟಿಸಿದನು (ಸಂ. 423-424). ಎರಡನೇ ದೇವರಾಯನ ಉಲ್ಲೇಖ ಐದು ಶಾಸನಗಳಲ್ಲಿದೆ. ಅವನು ಕ್ರಿ.ಶ. 1426ರಲ್ಲಿ ವಿಜಯನಗರದ ಪಾನ್ ಸುಪಾರಿ ಬಜಾರದಲ್ಲಿ ಪಾರ್ಶ್ವನಾಥನ ದೇವಸ್ಥಾನವನ್ನು ಕಟ್ಟಿಸಿದನು (ಸಂ. 347). ಕ್ರಿ.ಶ. 1434ರಲ್ಲಿ ಹನುಮಂತ ದೇವರ ದೇವಸ್ಥಾನದ ಸ್ಥಾನಿಕ ರಾಮಯನಿಗೆ ಒಂದು ಗ್ರಾಮವನ್ನು ದಾನಮಾಡಿದನು (ಸಂ. 401). ಆನೆಯಗೊಂದಿಯ ತಿರುವೆಂಗಳನಾಥ ದೇವರಿಗೆ ಕ್ರಿ.ಶ. 1436ರಲ್ಲಿ ಭೂಮಿ ದಾನ ಮಾಡಲಾಯಿತು (ಸಂ. 40) ಮತ್ತು ಅದೇ ಊರಿನಲ್ಲಿ ಕ್ರಿ.ಶ. 1437ರಲ್ಲಿ ಭೈರವ ದೇವಸ್ಥಾನವನ್ನು ಕಟ್ಟಲಾಯಿತು (ಸಂ. 19). ಅರಸನ ಸೇವಕನಾದ ಕಟಿಗೆಯ ಅಹ್ಮದಖಾನನು ಅರಸನಿಗೆ ಪುಣ್ಯವಾಗಲೆಂದು ಕ್ರಿ.ಶ. 1439ರಲ್ಲಿ ಧರ್ಮಶಾಲೆ ಮತ್ತು ಬಾವಿಯನ್ನು ಕಟ್ಟಿಸಿದನು (ಸಂ. 288). ಮಲ್ಲಿಕಾರ್ಜುನನೆಂಬ ಹೆಸರನ್ನುಳ್ಳ ಮೂರನೇ ದೇವರಾಯನ ಕಾಲದ ಮೂರು ಶಾಸನಗಳಿವೆ. ಕ್ರಿ.ಶ. 1450ರ ಶಾಸನ ಸಂ. 403 ಅವನನ್ನು ಪ್ರೌಢ ದೇವರಾಯನೆಂದು ಉಲ್ಲೇಖಿಸುವುದಲ್ಲದೆ ರಾಯಪ್ಪಣ್ಣಯ್ಯನೆಂಬುವನು ಸೋಮಲಾಪುರವೆಂಬ ಗ್ರಾಮವನ್ನು ಅರಸನ ಆಜ್ಞೆಯ ಮೇರೆಗೆ ಕಟ್ಟಿಸಿದನು ಮತ್ತು ಅರಸನು ಅಲ್ಲಿ ಸೌಮ್ಯಸೋಮೇಶ್ವರ ದೇವಸ್ಥಾನವನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಶಾಸನ ಸಂ. 370 ಈ ಅರಸನನ್ನು ಪ್ರೌಢ ದೇವರಾಯನ ಮಗ ಮಲ್ಲಿಕಾರ್ಜುನನೆಂದು ಉಲ್ಲೇಖಿಸುತ್ತದೆ ಮತ್ತು ಶಾಸನ ಸಂ. 371 ಈತನ ಸೇವಕ ಸಿರಂಗು (ಶ್ರೀರಂಗ)ನನ್ನು ಉಲ್ಲೇಖಿಸುತ್ತದೆ.

ಅರಸ ವಿರೂಪಾಕ್ಷನ ಉಲ್ಲೇಖವಿರುವುದು ಶಾಸನ ಸಂ. 267ರಲ್ಲಿ ಮಾತ್ರ. ಕಾಲದ ಉಲ್ಲೇಖವಿಲ್ಲದ ಈ ಶಾಸನವು ಹೆಗಡೆ ಹಿತಲಬಾಗಿಲ ಬಸವಣ್ಣ ಅಣ್ಣನು ಅರಸನ ಆಜ್ಞೆಯ ಮೇರೆಗೆ ಕಾಲುವೆ ಕಟ್ಟಿಸಿದ ವಿಷಯ ತಿಳಿಸುತ್ತದೆ. ಇದೇ ಹೆಸರಿನ ಇಬ್ಬರು ಅರಸರಿದ್ದಾರೆ. ಎರಡನೇ ವಿರೂಪಾಕ್ಷನು 1404ರಿಂದ 1406ರವರೆಗೆ ಕೇವಲ ಎರಡು ವರ್ಷ ಮಾತ್ರ ಆಳಿದನು. ಮೂರನೇ ವಿರೂಪಾಕ್ಷನು 1465ರಿಂದ 1485ರವರೆಗೆ ಇಪ್ಪತ್ತು ವರ್ಷಗಳ ಕಾಲ ಆಳಿದನು. ಶಾಸನದಲ್ಲಿ ಉಲ್ಲೇಖಗೊಂಡ ವಿರೂಪಾಕ್ಷನು ಮೂರನೇ ವಿರೂಪಾಕ್ಷ ಇರಬಹುದು.

ಸಾಳುವ ಎರಡನೇ ನರಸಿಂಹನ ಎರಡು ಶಾಸನಗಳು ಮಾತ್ರ ದೊರೆತಿವೆ. ಅವುಗಳಲ್ಲಿ ಶಾಸನ ಸಂ. 69 (ಕ್ರಿ.ಶ. 1505) ಕಡಿರಾಮಪುರದ ಹತ್ತಿರ ಗೋರಿಯನ್ನು ಕಟ್ಟಿಸಿದ ಬಗ್ಗೆ ತಿಳಿಸಿದರೆ ಶಾಸನ ಸಂ. 173 (ಕ್ರಿ.ಶ. 1529) ಸಾಳುವ ನರಸಯನು ಆದಿನಾರಾಯಣ ದೇವಸ್ಥಾನ ಕಟ್ಟಿಸಿದನೆಂದು ತಿಳಿಸುತ್ತದೆ.

ತುಳುವ ವಂಶದ ಕೃಷ್ಣದೇವರಾಯ, ಅಚ್ಯುತದೇವರಾಯ ಮತ್ತು ಸದಾಶಿವರಾಯನ ಕಾಲದ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಕೃಷ್ಣದೇವರಾಯನ ಪಟ್ಟಾಭಿಷೇಕವು ಆಗಸ್ಟ್ 8, 1509, ಅಂದರೆ ಶ್ರೀಕೃಷ್ಣ ಜನ್ಮಾಷ್ಟಮಿಯಂದು (ಕೃಷ್ಣನು ಹುಟ್ಟಿದ ದಿನ) ನಡೆಯಿತೆಂದು ನಂಬಲಾಗಿದೆ. ಇದಕ್ಕೆ ಆಧಾರ ಕ್ರಿ.ಶ. 1604ರಲ್ಲಿ ಎರಡನೆಯ ವೆಂಕಟನ ಆದೇಶದ ಮೇರೆಗೆ ಅಟ್ಠವಣಂ ಅಧಿಕಾರಿಗಳು ಸಿದ್ಧಗೊಳಿಸಿದ ''ವಿಜಯನಗರ ಸಾಮ್ರಾಜ್ಯಮು'' ಎಂಬ ವರದಿ.[4] ಆದರೆ ಶಕ 1430 (ಮುಗಿದ ಮೇಲೆ), ಶುಕ್ಲ ಸಂವತ್ಸರ ಮಾಘ ಶು. 14, ಅಂದರೆ ಕ್ರಿ.ಶ. 1510, ಜನವರಿ 24ರ ಎರಡು ಶಾಸನಗಳು ಸಂ. 104 ಮತ್ತು 106, ಅರಸನು ತನ್ನ ಪಟ್ಟಾಭಿಷೇಕದ ಸಮಯದಲ್ಲಿ ಸಿಂಗೆನಾಯಕನಹಳ್ಳಿಯನ್ನು ವಿರೂಪಾಕ್ಷ ದೇವರಿಗೆ ದಾನ ಮಾಡಿದನೆಂದು ತಿಳಿಸುತ್ತವೆ. ಈ ಶಾಸನಗಳ ಪ್ರಕಾರ ಕೃಷ್ಣದೇವರಾಯನ ಪಟ್ಟಾಭಿಷೇಕವು ಕ್ರಿ.ಶ. 1510, ಜನವರಿ 24ರಂದು ನಡೆಯಿತು. ಆದರೆ ವಿದ್ವಾಂಸರು ಈ ಶಾಸನಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ. ಸಿಂಗೆನಾಯಕನಹಳ್ಳಿಯಲ್ಲಿ ಇತ್ತೀಚೆಗೆ ದೊರೆತ ಶಾಸನ ಸಂ. 70 ಇದೇ ವಿಷಯವನ್ನು ತಿಳಿಸುತ್ತದೆ. ಈ ಶಾಸನವು ಪ್ರಾರಂಭದಲ್ಲಿ ದಿನಾಂಕವನ್ನು ಶಕ 1431, ಶುಕ್ಲ ಸಂವತ್ಸರದ ಮಾಘ ಶು. 14 ಎಂದು ಉಲ್ಲೇಖಿಸಿ ನಂತರ ಅರಸನು ಪಟ್ಟಾಭಿಷೇಕದಲ್ಲಿ ಶುಕ್ಲ ಸಂವತ್ಸರದ ಮಾಘ ಶು. 14ರಂದು ಪಟ್ಟವ ಕಟ್ಟಿಕೊಂಡು ಸಿಂಹಾಸನದ ಮೇಲೆ ಚಿತ್ತಯಿಸಿ ಸಿಂಗೆನಾಯಕನಹಳ್ಳಿಯನ್ನು ವಿರೂಪಾಕ್ಷದೇವರ ಸೇವೆಗೆ ದಾನ ಮಾಡಿದನೆಂದು ತಿಳಿಸುತ್ತದೆ. ಈ ಶಾಸನದಲ್ಲಿ ಒಂದೇ ದಿನಾಂಕವನ್ನು ಎರಡು ಸಲ ಉಲ್ಲೇಖಿಸಿರುವುದರಿಂದ ಮತ್ತು ಪಟ್ಟಾಭಿಷೇಕದ ದಿನಾಂಕವನ್ನು ಸ್ಪಷ್ಟವಾಗಿ ತಿಳಿಸಿರುವುದರಿಂದ ಕೃಷ್ಣದೇವರಾಯನ ಪಟ್ಟಾಭಿಷೇಕವು ಕ್ರಿ.ಶ. 1510, ಜನವರಿ 24ರಂದು ನಡೆಯಿತೆಂಬುದರ ಬಗ್ಗೆ ಸಂಶಯವಿಲ್ಲ.

ಕೃಷ್ಣದೇವರಾಯನು ವಿಜಯನಗರದಲ್ಲಿ ಅನೇಕ ದೇವಸ್ಥಾನಗಳನ್ನು ಕಟ್ಟಿಸಿದನು. ತನ್ನ ಪಟ್ಟಾಭಿಷೇಕದ ಸಮಯದಲ್ಲಿ ವಿರೂಪಾಕ್ಷ ದೇವಸ್ಥಾನದಲ್ಲಿ ಮಹಾರಂಗಮಂಟಪ ಮತ್ತು ಮುಂದಿನ ಗೋಪುರವನ್ನು ಕಟ್ಟಿಸಿ ದೊಡ್ಡ ಗೋಪುರದ ಜೀರ್ಣೋದ್ಧಾರ ಮಾಡಿಸಿದನು (ಸಂ. 104 ಮತ್ತು 106). ಅಲ್ಲದೆ ಕ್ರಿ.ಶ. 1515ರಲ್ಲಿ ಬಾಲಕೃಷ್ಣ ದೇವಸ್ಥಾನ (ಸಂ. 227), ಕ್ರಿ.ಶ. 1516ರಲ್ಲಿ ವಿಠಲ ದೇವಸ್ಥಾನದಲ್ಲಿ ನೂರು ಕಂಬಗಳ ಮಂಟಪ (ಸಂ. 197-199), ಮತ್ತು ಕ್ರಿ.ಶ. 1529ರಲ್ಲಿ ಲಕ್ಷ್ಮೀನರಸಿಂಹ ದೇವಸ್ಥಾನವನ್ನು (ಸಂ. 226) ಕಟ್ಟಿಸಿದನು. ಸಾಲೆತಿರುಮಲ ಮಹಾರಾಯಪುರವೆಂಬ ನಗರವನ್ನು (ಈಗಿನ ಅನಂತಶಯನಗುಡಿ) ಕಟ್ಟಿಸಿ ಅಲ್ಲಿ ಕ್ರಿ.ಶ. 1524ರಲ್ಲಿ ಅನಂತಪದ್ಮನಾಭನ ದೇವಸ್ಥಾನವನ್ನು ಕಟ್ಟಿಸಿದನು (ಸಂ. 416). ಇವನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು ಕ್ರಿ.ಶ. 1513ರಲ್ಲಿ ವಿಠಲ ದೇವಸ್ಥಾನದಲ್ಲಿ ಗೋಪುರಗಳನ್ನು ಕಟ್ಟಿಸಿದರು (ಸಂ. 175). ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಮಹಾಮಂಡಲೇಶ್ವರ ಚಿಕತಿಮ್ಮಯ್ಯದೇವಮಹಾಅರಸು ಕ್ರಿ.ಶ. 1521ರಲ್ಲಿ ರಾಮಚಂದ್ರ ದೇವಸ್ಥಾನದ ಮುಂದೆ ಉತ್ಸವ ಮಂಟಪವನ್ನು ಕಟ್ಟಿಸಿದನು (ಸಂ. 333). ಕ್ರಿ.ಶ. 1524ರಲ್ಲಿ ಗೋಪಿನಾಥ ದೀಕ್ಷಿತನು ಹಿರಿಯ ಕಾಲುವೆಯಲ್ಲಿ ರಘುನಾಥ ದೇವಸ್ಥಾನವನ್ನು ಕಟ್ಟಿಸಿದನು (ಸಂ. 64). ಕ್ರಿ.ಶ. 1510ರಲ್ಲಿ ನರಸಣನಾಯಕನ ತಾಯಿ ಮತ್ತು ಕೃಷ್ಣದೇವರಾಯನ ಅಜ್ಜಿಯಾದ ಬುಕ್ಕಾಜಮ್ಮನು ವಿರೂಪಾಕ್ಷ ದೇವರ ನೈವೇದ್ಯಕ್ಕೆ ಭೂಮಿ ದಾನ ಮಾಡಿದಳು (ಸಂ. 103). ಸ್ವತಃ ಕೃಷ್ಣದೇವರಾಯನೇ ವೀರೂಪಾಕ್ಷ (ಸಂ. 70, 102, 104, 106), ಪ್ರಸನ್ನ ವಿರೂಪಾಕ್ಷ (ಸಂ. 75, 314), ವಿಠಲ (ಸಂ. 175, 178-179), ರಾಮಚಂದ್ರ (ಸಂ. 338), ಬಾಲಕೃಷ್ಣ (ಸಂ. 227-228), ತಿರುವೆಂಗಳನಾಥ (ಸಂ. 431), ಹಿರಿಯ ಕಾಲುವೆಯಲ್ಲಿಯ ರಘುನಾಥ (ಸಂ. 64) ಮತ್ತು ಲಕ್ಷ್ಮೀನರಸಿಂಹ (ಸಂ. 226) ದೇವಸ್ಥಾನಗಳಿಗೆ ದಾನ ಮಾಡಿದನು. ಇವುಗಳಲ್ಲಿ ಕೆಲವು ದಾನಗಳನ್ನು ತಂದೆ ನರಸನಾಯಕ ಮತ್ತು ತಾಯಿ ನಾಗಾಜಿದೇವಿಯವರಿಗೆ ಪುಣ್ಯವಾಗಲೆಂದು ಮಾಡಿದನು. ಆತನ ರಾಣಿ ತಿರುಮಲದೇವಿಯು ತನ್ನ ಮಗ ರಾಜಕುಮಾರ ತಿರುಮಲರಾಯನಿಗೆ ಪುಣ್ಯವಾಗಲೆಂದು ಕರಿಯ ತಿರುವೆಂಗಳನಾಥ ದೇವರಿಗೆ ಭೂಮಿ ದಾನ ಮಾಡಿದಳು (ಸಂ. 428). ನಾಗಲಾದೇವಿಪುರವನ್ನು (ಈಗಿನ ನಾಗೇನಹಳ್ಳಿ) ಕೃಷ್ಣದೇವರಾಯನು ತನ್ನ ತಾಯಿ ನಾಗಲಾದೇವಿಯ ಹೆಸರಿನಲ್ಲಿ ಕ್ರಿ.ಶ. 1516ರಲ್ಲಿ ಕಟ್ಟಿಸಿದನು (ಸಂ. 414). ಅರಸನ ಪುರೋಹಿತನಾದ ರಂಗನಾಥ ದೀಕ್ಷಿತನು ಅರಸನಿಂದ ಆ ಗ್ರಾಮವನ್ನು ದಾನದ ರೂಪದಲ್ಲಿ ಪಡೆದು ಅಲ್ಲಿ ನಾಗೇಶ್ವರ ಮತ್ತು ನಾಗೇಂದ್ರಶಯನ ದೇವಸ್ಥಾನಗಳನ್ನು ಮತ್ತು ನಾಗಾಂಬಿಕಾ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿದನು.

ಅಚ್ಯುತದೇವರಾಯನ ಆಳ್ವಿಕೆಯ ಕಾಲದಲ್ಲಿ ಎರಡು ಪ್ರಮುಖ ಉಪನಗರಗಳ ನಿರ್ಮಾಣವಾಯಿತು. ಈಗಿನ ಅಚ್ಯುತರಾಯ ದೇವಸ್ಥಾನದ ಸುತ್ತಲಿನ ಪ್ರದೇಶವನ್ನು ಅಚ್ಯುತಾಪುರವೆಂದು ಮತ್ತು ದೇವಸ್ಥಾನದ ಮುಂದಿರುವ ಬೀದಿಯನ್ನು ಅಚ್ಯುತರಾಯಪೇಟೆ ಎಂದು ಅರಸನ ನೆನಪಿಗಾಗಿ ಕರೆಯಲಾಗಿದೆ. ಮಹಾಮಂಡಲೇಶ್ವರ ಹಿರಿಯ ತಿರುಮಲರಾಯವೊಡೆಯನು ತಿರುವೆಂಗಳನಾಥ (ಅಚ್ಯುತರಾಯ) ದೇವಸ್ಥಾನವನ್ನು ಮತ್ತು ಅಚ್ಯುತರಾಯಪೇಟೆಯನ್ನು ಕ್ರಿ.ಶ. 1534ರಲ್ಲಿ ಕಟ್ಟಿಸಿದನು (ಸಂ. 257). ಪೆನುಗೊಂಡ ಬಾಗಿಲಿನ ಹತ್ತಿರವಿರುವ ವರದಾಜಮ್ಮನ ಪಟ್ಟಣವನ್ನು ಅಚ್ಯುತದೇವರಾಯನ ರಾಣಿ ವರದಾಜಮ್ಮನ ಹೆಸರಿನಲ್ಲಿ ಕಟ್ಟಲಾಗಿದೆ. ಇಲ್ಲಿ ತಿಮ್ಮರಾಜನು ಕ್ರಿ.ಶ. 1540ರಲ್ಲಿ ರಘುನಾಥ ದೇವಸ್ಥಾನವನ್ನು ಕಟ್ಟಿಸಿದನು (ಸಂ. 468). ಅದೇ ಅರಸನ ಆಳ್ವಿಕೆಯ ಕಾಲದಲ್ಲಿ ಗಂಧದ ತಿಪ್ಪಸೆಟ್ಟಿಯು ವಿಠಲ ದೇವಸ್ಥಾನದಲ್ಲಿ 13 ಆಳ್ವಾರರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದನು (ಸಂ. 182) ಮತ್ತು ಚಪರದ ರಾಘವಪ್ಪನಾಯಕನು ಅದೇ ದೇವಸ್ಥಾನದ ಉತ್ತರ ಗೋಪುರದ ಮೇಲೆ ಕಳಸವನ್ನು ಪ್ರತಿಷ್ಠಾಪಿಸಿದನು (ಸಂ. 172). ನಲ ತಿಮ್ಮನಬೋಯಿಯು ರಾಜಕುಮಾರ ವೆಂಕಟಾದ್ರಿ, ಚಿಕರಾಯನಿಗೆ ಪುಣ್ಯವಾಗಲೆಂದು ಕ್ರಿ.ಶ. 1539ರಲ್ಲಿ ಒಂದು ಕೆರೆಯನ್ನು ಕಟ್ಟಿಸಿದನು (ಸಂ. 412). ಅಚ್ಯುತದೇವರಾಯನು ವಿಠಲದೇವರಿಗೆ ಒಂದು ಗ್ರಾಮವನ್ನು ದಾನಮಾಡಿ (ಸಂ. 188), ಸುವರ್ಣಮೇರು (ಸಂ. 181) ಮತ್ತು ಆನಂದನಿಧಿ (ಸಂ. 202-203, 229-230, 258-259, 417-418, 464, 467) ಮತ್ತು ಬ್ರಾಹ್ಮಣರಿಗೂ (ಸಂ. 394, 437) ದಾನಗಳನ್ನು ಮಾಡಿದನು. ರಾಣಿ ವರದಾಜಮ್ಮನು ಬಾಲಕೃಷ್ಣ ದೇವರಿಗೆ ಹಣವನ್ನು ದಾನವಾಗಿ ಕೊಟ್ಟಳು (ಸಂ. 231). ತಿಮ್ಮರಸಯ್ಯನು ಅರಸನಿಗೆ ಪುಣ್ಯವಾಗಲೆಂದು ಮಹೇಶ ದೇವಸ್ಥಾನಕ್ಕೆ ಭೂಮಿ ದಾನ ಮಾಡಿದನು (ಸಂ. 18). ವರದಪ್ಪನಾಯಕ (ಸಂ. 189) ಮತ್ತು ಹಿರಿಯತಿರುಮಲನಾಯಕರು (ಸಂ. 190) ಅರಸ ಮತ್ತು ರಾಜಕುಮಾರ ಚಿಕ್ಕರಾಯನಿಗೆ ಪುಣ್ಯವಾಗಲೆಂದು ವಿಠಲದೇವರಿಗೆ ಹಣವನ್ನು ದಾನವಾಗಿ ಕೊಟ್ಟರು. ಪ್ರಧಾನ ತಿರುಮಲರಾಜನ ಕಾರ್ಯಕರ್ತನಾದ ಅಬ್ಬರಾಜ ತಿಮ್ಮಪನು ತಿರುಮಲದೇವಿಯರಪಟ್ಟಣದ ತಿರುವೆಂಗಳನಾಥ ದೇವರ ಸೇವೆಗೆಂದು ಮೂಲವೀಸವನ್ನು ದಾನವಾಗಿ ಕೊಟ್ಟನು (ಸಂ. 421).

ದೇವಸ್ಥಾನಗಳನ್ನು ಕಟ್ಟಿಸಿ ಅವುಗಳಿಗೆ ದಾನನೀಡುವ ಪದ್ಧತಿಯು ಸದಾಶಿವರಾಯನ ಕಾಲದಲ್ಲಿಯೂ ಮುಂದುವರೆಯಿತು. ದಳವಾಯಿ ಜಂಗಮಯ್ಯನು ಅರಸನಿಗೆ ಪುಣ್ಯವಾಗಲೆಂದು ಕ್ರಿ.ಶ. 1545ರಲ್ಲಿ ಹಿರಿಯಕಾಲುವೆಯ ಛತ್ರದ ಹತ್ತಿರ ತಿರುವೆಂಗಳನಾಥ ಮತ್ತು ಮುದುವೀರಣ್ಣ ದೇವಸ್ಥಾನಗಳನ್ನು ಕಟ್ಟಿಸಿದನು (ಸಂ. 234-235). ಮಹಾಮಂಡಲೇಶ್ವರ ಮಾದರಾಜು ಮಲ್ಲರಾಜುವಿನ ಮೊಮ್ಮಗ ಮತ್ತು ವಲ್ಲಭರಾಜುವಿನ ಮಗನಾದ ತಿಮ್ಮರಾಜುವು ಕ್ರಿ.ಶ. 1545ರಲ್ಲಿ ಮಾಧವ ದೇವಸ್ಥಾನದಲ್ಲಿ ರಂಗಮಂಟಪವನ್ನು ಕಟ್ಟಿಸಿದನು (ಸಂ. 332). ಅರಿವೀಟಿ ರಾಮರಾಜ ಕೊಂಡಯದೇವನ ಮೊಮ್ಮಗ ಮತ್ತು ಕೋನೇಟಯ್ಯನ ಮಗನಾದ ಉದಗಿರಿ ತಿಮ್ಮರಾಜನು ಕ್ರಿ.ಶ. 1554ರಲ್ಲಿ ವಿಠಲ ದೇವರ ಉಯ್ಯಾಲೆ ಉತ್ಸವಕ್ಕೆ ಮಂಟಪವನ್ನು ಕಟ್ಟಿಸಿದನು (ಸಂ. 184) ಮತ್ತು ಜಾತಾನಿ ತಿರುಮಲಯನು ವಿಠಲ ದೇವಸ್ಥಾನದ ಹತ್ತಿರ ಕ್ರಿ.ಶ. 1559ರಲ್ಲಿ ಮೊದಲಿ ಆಳುವಾರರ ದೇವಸ್ಥಾನವನ್ನು ಕಟ್ಟಿಸಿದನು (ಸಂ. 205). ಮಹಾಮಂಡಲೇಶ್ವರ ರಾಮರಾಜು ತಿರುಮಲರಾಜುವಿನ ಮಗ ರಘುನಾಥರಾಜು ಕ್ರಿ.ಶ. 1554ರಲ್ಲಿ ಅಲಮೇಲ ಮಂಗಮ್ಮ ದೇವಸ್ಥಾನವನ್ನು ಕಟ್ಟಿಸಿದನು (ಸಂ. 326). ಮಹಾಮಂಡಲೇಶ್ವರ ರಾಮರಾಜು ಕೋನೇಟಯ್ಯದೇವ ಮಹಾರಾಜುವಿನ ಮಗ ಅವುಬಳರಾಜು ಕ್ರಿ.ಶ. 1556ರಲ್ಲಿ ತಿರುಮಂಗೈಆಳ್ವಾರರ ದೇವಸ್ಥಾನವನ್ನು ಕಟ್ಟಿಸಿದನು (ಸಂ. 78).

ಈ ಕಾಲದಲ್ಲಿ ವಿಠಲ ದೇವಸ್ಥಾನಕ್ಕೆ (ಸಂ. 77, 174, 177, 183-185, 192, 194), ವಿಠಲ ದೇವಸ್ಥಾನದಲ್ಲಿರುವ ಲಕ್ಷ್ಮೀನಾರಾಯಣ ದೇವರಿಗೆ (ಸಂ. 180), ಆಳುವಾರಿ ದೇವರಿಗೆ (ಸಂ. 204), ತಿರುಮಂಗೈಆಳ್ವಾರ್ ದೇವಸ್ಥಾನಕ್ಕೆ (ಸಂ. 77-78, 174), ರಘುನಾಥ ದೇವಸ್ಥಾನಕ್ಕೆ (ಸಂ. 355-357), ಪ್ರಾತ ವಿಠಲ ದೇವಸ್ಥಾನಕ್ಕೆ (ಸಂ. 170), ಬಾಲಕೃಷ್ಣ ದೇವಸ್ಥಾನಕ್ಕೆ (ಸಂ. 232), ನರಸಿಂಹ ದೇವಸ್ಥಾನಕ್ಕೆ (ಸಂ. 342), ತಿರುವೆಂಗಳನಾಥ ದೇವಸ್ಥಾನಕ್ಕೆ (ಸಂ. 234), ಅಲಮೇಲ ಮಂಗಮ್ಮ ದೇವಸ್ಥಾನಕ್ಕೆ (ಸಂ. 326), ಜಂಬುಕೇಶ್ವರ ಬೆಟ್ಟದ ಮೇಲಿರುವ ಹನುಮಂತದೇವರ ದೇವಸ್ಥಾನಕ್ಕೆ (ಸಂ. 415, 471) ಕಳಸಾಪುರದ ಹತ್ತಿರವಿರುವ ಆನಂದ ಭೈರವ ದೇವಸ್ಥಾನಕ್ಕೆ (ಸಂ. 402), ಮುದುವೀರಣ್ಣ ದೇವಸ್ಥಾನಕ್ಕೆ (ಸಂ. 235) ಮತ್ತು ಚಿಕ್ಕದೇವರ ಬಸ್ತಿಯ ಶಾಂತಿನಾಥ ದೇವರಿಗೆ (ಸಂ. 383) ದಾನ ಕೊಡಲಾಯಿತು.

ಅರವೀಡು ವಂಶದ ರಾಮರಾಜನ ಆಳ್ವಿಕೆಯ ಕಾಲದಲ್ಲಿ ಕೊಂಡರಾಜಯ್ಯನ ಬೊಕ್ಕಸ ಭಂಡಾರಕರ್ತನಾದ ಯೆಲ್ಲಪ್ಪನಾಯಕನ ಮಗ ಕಂಬನಾಯಕನು ರಾಮರಾಜನ ಕಾರ್ಯಕರ್ತನಾದ ಕೋನೇಟಿ ಕೊಂಡರಾಜಯ್ಯನಿಗೆ ಪುಣ್ಯವಾಗಲೆಂದು ಬಾಗಿಲ ಹನುಮಂತರಾಯ ದೇವರಿಗೆ ಭೂಮಿ ದಾನ ಮಾಡಿದನು (ಸಂ. 373).

ಭೌಗೋಳಿಕ: 12ನೇ ಶತಮಾನದಲ್ಲಿ ಹಂಪೆಯು ಬಲ್ಲಕುಂದೆನಾಡಿನ ಉಪವಿಭಾಗವಾದ ಮೊರವದಿ ನಾಡಿನಲ್ಲಿತ್ತು (ಸಂ. 97). ದಕ್ಷ ಆಡಳಿತಕ್ಕಾಗಿ ವಿಜಯನಗರ ಸಾಮ್ರಾಜ್ಯವನ್ನು ಅನೇಕ ಭಾಗಗಳಲ್ಲಿ ವಿಂಗಡಿಸಲಾಗಿತ್ತು. ಶಾಸನಗಳಲ್ಲಿ ಇಂತಹ ವಿಭಾಗ ಮತ್ತು

ಉಪವಿಭಾಗಗಳನ್ನು ಮಂಡಲ, ವಿಷಯ, ರಾಜ್ಯ, ವಳಿತ, ಸೀಮೆ, ನಾಡು, ಸ್ಥಳ ಮತ್ತು ಕೊಟ್ಟಂ ಎಂದು ಉಲ್ಲೇಖಿಸಲಾಗಿದೆ. ಕುಂತಳ ವಿಷಯವು ಕರ್ನಾಟ ಮಂಡಲದಲ್ಲಿತ್ತು (ಸಂ. 23). ಅರಕೆರೆವೆಂಠೆ (ಸಂ. 64) ಮತ್ತು ಪಾಂಡ್ಯನಾಡು (ಸಂ. 416) ಹಸ್ತಿನಾವತಿ ವಳಿತದ ಉಪವಿಭಾಗಗಳಾಗಿದ್ದವು. ಕವತಾಳಸೀಮೆಯು ಆದವಾನಿವಳಿತದ ಉಪವಿಭಾಗವಾಗಿತ್ತು (ಸಂ. 174). ಹೆನ್ನೆನಾಡು ಗುತ್ತಿಸೀಮೆಯ ಉಪವಿಭಾಗವಾಗಿತ್ತು (ಸಂ. 226). ಕೊಯ್ಯಕುರಿಕೆಸೀಮೆಯು ಕುಕ್ಕುಟ್ಲಸ್ಥಳದ ಉಪವಿಭಾಗವಾಗಿತ್ತು (ಸಂ. 435). ಚೋಲಿಂಗನಪುರಪದ್ರು ಚಂದ್ರಗಿರಿ ರಾಜ್ಯದ ಉಪವಿಭಾಗವಾದ ಪ್ರೋಲೂರಿನಾಡಿನ ಉಪವಿಭಾಗವಾಗಿತ್ತು (ಸಂ. 437). ಕುಂಶ್ಯವತ್ತಿಲಕೊಟ್ಟಮ್ ಚಂದ್ರಗಿರಿ ರಾಜ್ಯದ ಉಪವಿಭಾಗವಾದ ನಿನ್ರನಾಡಿನ ಉಪವಿಭಾಗವಾಗಿತ್ತು (ಸಂ. 439). ಪುಲಿಯೇರುಮಾಗಣಿಯು ಗುತ್ತಿಯಸೀಮೆಯ ಉಪವಿಭಾಗವಾಗಿತ್ತು (ಸಂ. 184). ಶಾಸನಗಳಲ್ಲಿ ಉಲ್ಲೇಖವಾದ ಇತರ ವಿಭಾಗಗಳೆಂದರೆ ಕೊಪಣಸೀಮೆ (ಸಂ. 78, 174, 338), ಯಿಲಿಕಂಠಿಸೀಮೆ (ಸಂ. 78), ರಾಚೂರಸೀಮೆ (ಸಂ. 174), ಗುಡ್ಡಂಗಂಗಾವತಿಸೀಮೆ (ಸಂ. 180), ತೆಕ್ಕಲಕೋಟೆಸೀಮೆ (ಸಂ. 184), ಉರುವಕೊಂಡೆಸೀಮೆ (ಸಂ. 226), ರಾಯದುರ್ಗಸೀಮೆ (ಸಂ. 228), ಸೊಂಡೂರಸೀಮೆ (ಸಂ. 333, 338), ನಾರಿಯಸೀಮೆ (ಸಂ. 338), ದೊರವದಿ ಸೋಮಲಾಪುರಸೀಮೆ (ಸಂ. 465), ಹೊಸೂರಮಾಗಣಿ (ಸಂ. 227), ಕಂಪಿಲೆಮಾಗಣಿ (ಸಂ. 221, 227) ತಿರುಮಲದೇವಿಪಟ್ಟಣಮಾಗಣಿ (ಸಂ. 228) ಮತ್ತು ಕಳಸಾಪುರಮಾಗಣಿ (ಸಂ. 338).

ಆರ್ಥಿಕ: ಶಾಸನಗಳು ಅಧಿಕ ಭೂಮಿಯನ್ನು ಬೇಸಾಯಕ್ಕೆ ಪರಿವರ್ತಿಸಿದ ಬಗ್ಗೆ, ಅಧಿಕ ನೀರಾವರಿ ಸೌಲಭ್ಯಗಳ ಬಗ್ಗೆ, ಹೊಸ ಗ್ರಾಮ ಮತ್ತು ಉಪನಗರಗಳ ನಿರ್ಮಾಣದ ಬಗ್ಗೆ ಮತ್ತು ವಾಣಿಜ್ಯಕ್ಕೆ ಪ್ರೋತ್ಸಾಹ ನೀಡಿದ ಬಗ್ಗೆ ತಿಳಿಸುತ್ತವೆ. ಕ್ರಿ.ಶ. 1561ರ ಶಾಸನ ಸಂ. 77 ನಿರ್ದಿಷ್ಟವಾದ ಒಂದು ತುಂಡು ಭೂಮಿಯನ್ನು ಸಮತಲ ಮಾಡಿ ವ್ಯವಸಾಯಕ್ಕೆ ಅಳವಡಿಸಿದ್ದನ್ನು ತಿಳಿಸುತ್ತದೆ. ಈಗಿನ ತುರ್ತು ಕಾಲುವೆ ಅಣೆಕಟ್ಟನ್ನು ಚಿಂತಾಯಕ ದೇವಣ್ಣನು ಕಟ್ಟಿಸಿದನು (ಸಂ. 56). ಇಲ್ಲಿಂದ ಪ್ರಾರಂಭವಾಗುವ ಕಾಲುವೆಯನ್ನು ಹಿರಿಯ ಕಾಲುವೆ (ಈಗಿನ ತುರ್ತು ಕಾಲುವೆ) ಎಂದು ಕರೆಯುತ್ತಿದ್ದರು (ಸಂ. 64, 234-235). ಹಿರಿಯ ಕಾಲುವೆಯನ್ನು ಹೆಗಡೆ ಹಿತಲಬಾಗಿಲ ಬಸವಣ್ಣನು ಅರಸ ವಿರೂಪಾಕ್ಷನ ಆಜ್ಞೆಯ ಮೇರೆಗೆ ಕಟ್ಟಿಸಿದನು (ಸಂ. 267). ಇನ್ನೊಂದು ಕಾಲುವೆಯನ್ನು ಅವಿಕಥವಿತರಸನು ಬುಕ್ಕಸಾಗರದಲ್ಲಿ ಕಟ್ಟಿಸಿದನು (ಸಂ. 54). ಭೂಮಿಗೆ ನೀರನ್ನು ಪೂರೈಸಲು ಕೆರೆಗಳನ್ನೂ ಸಹ ಕಟ್ಟಿಸಲಾಗಿದೆ. ನಾಗಾಂಬಿಕಾ ಸಮುದ್ರವೆಂಬ ಕೆರೆಯನ್ನು ನಾಗೇನಹಳ್ಳಿಯಲ್ಲಿ ಕ್ರಿ.ಶ. 1516ರಲ್ಲಿ ಕಟ್ಟಿಸಲಾಗಿದೆ (ಸಂ. 414). ಇನ್ನೊಂದು ಕೆರೆಯನ್ನು ಸೀತಾರಾಮ ತಾಂಡದ ಹತ್ತಿರ ಕ್ರಿ.ಶ. 1539ರಲ್ಲಿ ಕಟ್ಟಿಸಲಾಗಿದೆ (ಸಂ. 412).

ರಾಜಧಾನಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದರಿಂದ ಕೆಳಗಿನ ಹೊಸ ಊರುಗಳು ಹುಟ್ಟಿಕೊಂಡವು: ಕೃಷ್ಣಾಪುರ (ಕೃಷ್ಣ ದೇವಸ್ಥಾನದ ಸುತ್ತ) (ಸಂ. 226-27, 421), ಅಚ್ಯುತಾಪುರ (ಅಚ್ಯುತರಾಯ ದೇವಸ್ಥಾನದ ಸುತ್ತ) (ಸಂ. 71, 261), ವಿಠಲಾಪುರ (ವಿಠಲ ದೇವಸ್ಥಾನದ ಸುತ್ತ) (ಸಂ. 78), ವರದಾಜಮ್ಮನ ಪಟ್ಟಣ (ಪೆನುಗೊಂಡೆ ಬಾಗಿಲಿನ ಹತ್ತಿರ) (ಸಂ. 421, 465, 468), ಕಡೆರಾಮಪುರ (ಈಗಿನ ಕಡಿರಾಮಪುರ) (ಸಂ. 69), ಸಾಲೆತಿರುಮಲ ಮಹಾರಾಯಪುರ (ಈಗಿನ ಅನಂತಶಯನಗುಡಿ) (ಸಂ. 416), ನಾಗಲಾದೇವಿಪುರ (ಈಗಿನ ನಾಗೇನಹಳ್ಳಿ) (ಸಂ. 414), ತಿರುಮಲದೇವಿ ಪಟ್ಟಣ (ಈಗಿನ ಹೊಸಪೇಟೆಯ ಒಂದು ಭಾಗ) (ಸಂ. 404, 420-421) ಮತ್ತು ಸೋಮಲಾಪುರ (ಸಂ. 403).[5]

ಪೆದ್ದಅಂಗಡಿ ವೀಧಿ (ದೊಡ್ಡಅಂಗಡಿ ಬೀದಿ) (ಸಂ. 332), ಕ್ರಮುಕಪರ್ಣಾಪಣ ಅಥವಾ ಪರ್ಣಪೂಗಿಫಲಾಪಣ ವೀಧಿ (ಪಾನ್‌ಸುಪಾರಿ ಬಜಾರ್) (ಸಂ. 347), ಅಚ್ಯುತರಾಯಪೇಟೆ ಅಥವಾ ಅಚ್ಯುತಾಪುರಪೇಟೆ (ಸಂ. 235, 240, 257) ಮತ್ತು ಕೃಷ್ಣಾಪುರಪೇಟೆ (ಸಂ. 235) ಮುಖ್ಯವಾದ ಪೇಟೆಗಳಾಗಿದ್ದವು. ಇವುಗಳಲ್ಲದೆ ಆದಿನಾರಾಯಣ ದೇವಸ್ಥಾನಕ್ಕೆ ದಾನ ಮಾಡಿದ ಅಂಗಡಿ (ಸಂ. 315), ಜೈನ ದೇವಸ್ಥಾನಕ್ಕಾಗಿ ಕಟ್ಟಿಸಿದ ಅಂಗಡಿ (ಸಂ. 383), ಚಿಕ್ಕತಾರಿಯರ ಅಂಗಡಿ (ಸಂ. 447) ಮತ್ತು ಮಲ್ಲಿಕಾರ್ಜುನದೇವರಿಗೆ ದಾನವಾಗಿ ಕೊಟ್ಟ ಅಂಗಡಿಯ (ಸಂ. 308) ಪ್ರಸ್ತಾಪವೂ ಇಲ್ಲಿಯ ಶಾಸನಗಳಲ್ಲಿದೆ.

ವಿದೇಶಗಳೊಂದಿಗಿನ ವ್ಯಾಪಾರವು ಹೆಚ್ಚಿದಂತೆ ನಾಣ್ಯಗಳು ಪ್ರಮುಖ ಪಾತ್ರವನ್ನು ವಹಿಸಿದವು. ಶಾಸನಗಳಲ್ಲಿ ಅನೇಕ ನಾಣ್ಯಗಳ ಉಲ್ಲೇಖವಾಗಿದೆ. 11ನೇ ಶತಮಾನದಲ್ಲಿ ಲೊಕ್ಕಿ ಗದ್ಯಾಣವು ಚಲಾವಣೆಯಲ್ಲಿತ್ತು (ಸಂ. 375), ವಿಜಯನಗರ ಶಾಸನಗಳು ಚಿಕ ಗದ್ಯಾಣ (ಸಂ. 335), ಘಟ್ಟಿ ವರಹ (ಸಂ. 77, 180), ಗದ್ಯಾಣ (ಸಂ. 64, 204), ಹಣ (ಸಂ. 55), ಹೊನ್ನು (ಸಂ. 64), ಕಾಸು (ಸಂ. 255, 420), ಪ್ರತಾಪ (ಸಂ. 357), ಪ್ರತಾಪ ಹಣ (ಸಂ. 356), ಪ್ರತಾಪ ಗದ್ಯಾಣ (ಸಂ. 79), ವರಹ (ಸಂ. 46, 185, 190, 268, 465) ಮತ್ತು ವರಹ ಗದ್ಯಾಣಗಳನ್ನು (ಸಂ. 438) ಉಲ್ಲೇಖಿಸುತ್ತವೆ.

ಸಮಾಜ: 12 ಮತ್ತು 13ನೇ ಶತಮಾನಗಳಲ್ಲಿ ವಿರೂಪಾಕ್ಷ ದೇವಸ್ಥಾನದ ಬಲ ಭಾಗದಲ್ಲಿ ಬ್ರಾಹ್ಮಣರ ಊಟಕ್ಕಾಗಿ ಒಂದು ಸತ್ರಸಾಲೆ ಇತ್ತು (ಸಂ. 97-98). ವಿಜಯನಗರ ಕಾಲದಲ್ಲಿ ಉದ್ದಾನ ವೀರಭದ್ರ ದೇವಸ್ಥಾನದ ಹತ್ತಿರ ಒಂದು ಛತ್ರವಿತ್ತು (ಸಂ. 234, 235). ಎರಡನೇ ದೇವರಾಯನ ಸೇವಕನಾಗಿದ್ದ ಅಹ್ಮದ ಖಾನನು ಕ್ರಿ.ಶ. 1439ರಲ್ಲಿ ಒಂದು ಧರ್ಮಶಾಲೆ ಮತ್ತು ಒಂದು ಬಾವಿಯನ್ನು ಕಟ್ಟಿಸಿದನು (ಸಂ. 288).[6]

ವಿಜಯನಗರ ಕಾಲದಲ್ಲಿ ಪ್ರವಾಸಿಗರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು ಮಹತ್ವದ ಕಾರ್ಯಗಳಲ್ಲಿ ಒಂದಾಗಿತ್ತು. ಮಲಪನಗುಡಿಯಲ್ಲಿರುವ ಶಾಸನಗಳು ಸಂ. 423-424 (ಕ್ರಿ.ಶ. 1405) ದಾನಿಯು ಬಿಸಿಲಹಳ್ಳಿಕಣಿವೆ ಮತ್ತು ಬಡವಲಿಯ ಕಣಿವೆ ಹೆದ್ದಾರಿಗಳು ಕೂಡುವ ಸ್ಥಳದಲ್ಲಿ ಮಾಳಿಗೆಯುಳ್ಳ ಬಾವಿಯನ್ನು ಕಟ್ಟಿಸಿ ಸುತ್ತಲೂ ವನವನ್ನು ಬೆಳೆಸಿದನೆಂದು (ಮಾಳಿಗೆ ಕೂಪಾರಾಮ) ತಿಳಿಸುತ್ತದೆ.[7] ಅಲ್ಲದೆ ಅವನು ಈ ಬಾವಿಯ ಜೀರ್ಣೋದ್ಧಾರಕ್ಕೆ, ಅರವಟ್ಟಿಗೆ ನಡೆಸುವುದಕ್ಕೆ ಪಾತ್ರೆಗಳನ್ನು ಕೊಳ್ಳುವುದಕ್ಕೆ ಮತ್ತು ಅಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ವೇತನ ಕೊಡಲು ಭೂಮಿಯನ್ನು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಶಾಸನ ಸಂ. 171 ಬಾವಿಯನ್ನು ಕಟ್ಟಿಸಿ, ವನವನ್ನು ಬೆಳೆಸಿ ಅರವಟ್ಟಿಗೆಯನ್ನು ಕಟ್ಟಿಸಿದ ಬಗ್ಗೆ ತಿಳಿಸುತ್ತದೆ. ಈ ಶಾಸನವನ್ನು ಅರವಟ್ಟಿಗೆಗೆ ಉಪಯೋಗಿಸಿದ ಕಲ್ಲಿನ ತೊಟ್ಟಿಯ ಮೇಲೆ ಬರೆಯಲಾಗಿದೆ. ಶಾಸನ ಸಂ. 3 (ಕ್ರಿ.ಶ. 1531), ಸಂ. 4 (15-16ನೇ ಶತಮಾನ) ಮತ್ತು ಸಂ. 6 (ಕ್ರಿ.ಶ. 1551) ಆನೆಗೊಂದಿಯ ಹತ್ತಿರವಿರುವ ಅರವಟ್ಟಿಗೆಗಳ ಬಗ್ಗೆ ತಿಳಿಸುತ್ತವೆ. ನೀರಿಗಾಗಿ ಕಲ್ಲಿನ ತೊಟ್ಟಿಗಳನ್ನು ರಸ್ತೆಗಳ ಪಕ್ಕದಲ್ಲಿ ಇಡುತ್ತಿದ್ದರು. ಶಾಸನ ಸಂ. 214 ಅಬರಾಜು ತಿಮಪನು ನೀರಿನ ತೊಟ್ಟಿಯನ್ನು ದಾನ ಮಾಡಿದನೆಂದು ತಿಳಿಸುತ್ತದೆ. ಶಾಸನ ಸಂ. 292 ಓಬಯವೆ ಒಂದು ನೀರಿನ ತೊಟ್ಟಿಯನ್ನು ದಾನ ಮಾಡಿದಳೆಂದು ತಿಳಿಸುತ್ತದೆ. ಅದೇ ಕಾಲದಲ್ಲಿ ಮಹಾದೇವಿಯಕ್ಕ ಕೆಳಬಾವಿ (ಸಂ. 244), ವಿನಾಯಕ ಅಶ್ವತ್ಥ ಬಾವಿ (ಸಂ. 215), ಬ್ಯನಕನ ಬಾವಿ (ಸಂ. 265), ಲಿಂಗಬಾವಿ (ಸಂ. 365), ರಂಗನಾಥ ಬಾವಿ (ಸಂ. 367), ಒರತೆಯಕುಂಡ (ಸಂ. 368) ಮುಂತಾದವುಗಳನ್ನು ನಿರ್ಮಿಸಲಾಯಿತು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕಿಂತ ಮೊದಲೇ ಇಲ್ಲಿ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಲಾಗಿತ್ತು. ಕ್ರಿ.ಶ. 1076ರ ಶಾಸನ ಸಂ. 375 ಒಂದು ಮಠದಲ್ಲಿ ಪುರಾಣ ಹೇಳುತ್ತಿದ್ದ ಉಪಾಧ್ಯಾಯರಿಗೆ ದಾನಕೊಟ್ಟದ್ದನ್ನು ತಿಳಿಸುತ್ತದೆ. 13ನೇ ಶತಮಾನದ ಶಾಸನ ಸಂ. 1 ವಿವಾಹ ಪುರಾಣ ಮತ್ತು ಅಮೃತಮಥನ ಪುರಾಣಗಳನ್ನು ಒಳಗೊಂಡಿದೆ. ವಿಜಯನಗರ ಅರಸರು ಕಲೆ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದರು. ವಿರೂಪಾಕ್ಷ ಪಂಡಿತನು 13 ಕೃತಿಗಳನ್ನು ರಚಿಸಿದನು (ಸಂ. 210). ಕ್ರಿ.ಶ. 1541ರಲ್ಲಿ ಮಾಧವ ದೇವಸ್ಥಾನದಲ್ಲಿ ರಂಗಮಂಟಪವನ್ನು ನೃತ್ಯ, ಗೀತ, ವಾದ್ಯ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿಯೇ ಕಟ್ಟಿಸಿದರು (ಸಂ. 332). ತಿರುಮಲಮ್ಮನು ಕ್ರಿ.ಶ. 1533ರಲ್ಲಿ ಸುವರ್ಣಮೇರು ದಾನ ಮಾಡುವ ಸಮಯದಲ್ಲಿ ಸಂಸ್ಕೃತ ಶ್ಲೋಕವನ್ನು ಹಾಡಿದಳು (ಸಂ. 181).

ಧಾರ್ಮಿಕ: ವಿಜಯನಗರ ಕಾಲದಲ್ಲಿ ಶೈವ, ವೈಷ್ಣವ ಮತ್ತು ಜೈನ ಧರ್ಮಗಳಿಗೆ ಪ್ರೋತ್ಸಾಹ ನೀಡಲಾಗಿತ್ತು. ಅನೇಕ ಶೈವ, ವೈಷ್ಣವ ಮತ್ತು ಜೈನ ದೇವಸ್ಥಾನಗಳನ್ನು ಕಟ್ಟಿಸಿ ಅವುಗಳಿಗೆ ದಾನಗಳನ್ನು ಕೊಡಲಾಯಿತು.

ಕ್ರಿ.ಶ. 1450ರಲ್ಲಿ ಸೌಮ್ಯ ಸೋಮೇಶ್ವರ ದೇವಾಲಯವನ್ನು ಕಟ್ಟಲಾಯಿತು (ಸಂ. 403). ಕೃಷ್ಣದೇವರಾಯನು ಕ್ರಿ.ಶ. 1510ರಲ್ಲಿ ವಿರೂಪಾಕ್ಷ ದೇವಸ್ಥಾನದಲ್ಲಿ ಮಹಾರಂಗಮಂಟಪ ಮತ್ತು ಮುಂದಿನ ಗೋಪುರವನ್ನು ಕಟ್ಟಿಸಿ, ದೊಡ್ಡ ಗೋಪುರದ ಜೀರ್ಣೋದ್ಧಾರ ಮಾಡಿಸಿದನು (ಸಂ. 104, 106). ಕ್ರಿ.ಶ. 1516ರಲ್ಲಿ ನಾಗೇನಹಳ್ಳಿಯಲ್ಲಿ ನಾಗೇಶ್ವರ ದೇವಸ್ಥಾನವನ್ನು (ಸಂ. 414) ಮತ್ತು ಕ್ರಿ.ಶ. 1545ರಲ್ಲಿ ಮುದುವೀರಣ್ಣ (ಉದ್ದಾನ ವೀರಭದ್ರ) ದೇವಸ್ಥಾನಗಳನ್ನು ಕಟ್ಟಿಸಲಾಯಿತು (ಸಂ. 235).

ಶಾಸನಗಳು ವಿಠಲ ದೇವಾಲಯದಲ್ಲಿ ಗೋಪುರ (ಕ್ರಿ.ಶ. 1513, ಸಂ. 175), ನೂರು ಕಂಬಗಳ ಮಂಟಪ (ಕ್ರಿ.ಶ. 1516, ಸಂ. 197-199) ಮತ್ತು ಉಯ್ಯಾಲೆ ಮಂಟಪ (ಕ್ರಿ.ಶ. 1554, ಸಂ. 184)ಗಳನ್ನು ಕಟ್ಟಿಸಿದ್ದನ್ನು ತಿಳಿಸುತ್ತವೆ. ಅದೇ ದೇವಸ್ಥಾನದಲ್ಲಿ ತಿರುಕ್ಕಚ್ಚಿ ನಂಬಿಯನ್ನೊಳಗೊಂಡು 13 ಆಳ್ವಾರರ ವಿಗ್ರಹಗಳನ್ನು ಕ್ರಿ.ಶ. 1535ರಲ್ಲಿ ಪ್ರತಿಷ್ಠಾಪಿಸಲಾಯಿತು (ಸಂ. 182). ಕ್ರಿ.ಶ. 1556 ಮತ್ತು 1559ರಲ್ಲಿ ತಿರುಮಂಗೈ ಆಳ್ವಾರ (ಸಂ. 78) ಮತ್ತು ಮೊದಲಿ ಆಳ್ವಾರರ (ಸಂ. 205) ದೇವಸ್ಥಾನಗಳನ್ನು ವಿಠಲ ದೇವಸ್ಥಾನದ ಹತ್ತಿರ ಕಟ್ಟಿಸಲಾಯಿತು. ಕೃಷ್ಣದೇವರಾಯನು ಕ್ರಿ.ಶ. 1515ರಲ್ಲಿ ಕೃಷ್ಣಾಪುರದಲ್ಲಿ ಬಾಲಕೃಷ್ಣ (ಸಂ. 227), ಕ್ರಿ.ಶ. 1524ರಲ್ಲಿ ಅನಂತಶಯನಗುಡಿಯಲ್ಲಿ ಅನಂತಪದ್ಮನಾಭ (ಸಂ. 416) ಮತ್ತು ಕ್ರಿ.ಶ. 1529ರಲ್ಲಿ ಕೃಷ್ಣಾಪುರದಲ್ಲಿ ಲಕ್ಷ್ಮೀನರಸಿಂಹ (ಸಂ. 226) ದೇವಸ್ಥಾನಗಳನ್ನು ಕಟ್ಟಿಸಿದನು. ನಾಗೇನಹಳ್ಳಿಯಲ್ಲಿ ಕ್ರಿ.ಶ. 1516ರಲ್ಲಿ ನಾಗೇಂದ್ರಶಯನ ದೇವಸ್ಥಾನವನ್ನು ಕಟ್ಟಿಸಲಾಯಿತು (ಸಂ. 414). ಕ್ರಿ.ಶ. 1521ರಲ್ಲಿ ರಾಮಚಂದ್ರ

ದೇವಸ್ಥಾನದಲ್ಲಿ ಉತ್ಸವ ಮಂಟಪವನ್ನು ಕಟ್ಟಿಸಲಾಯಿತು (ಸಂ. 333). ಕ್ರಿ.ಶ. 1524ರಲ್ಲಿ ಓರಿಯಕಾಲುವೆಯಲ್ಲಿ ರಘುನಾಥ ದೇವಸ್ಥಾನವನ್ನು ಕಟ್ಟಿಸಲಾಯಿತು (ಸಂ. 64). ಕ್ರಿ.ಶ. 1534ರಲ್ಲಿ ಅಚ್ಯುತಾಪುರದಲ್ಲಿ ತಿರುವೆಂಗಳನಾಥ (ಅಚ್ಯುತರಾಯ) (ಸಂ. 257) ಮತ್ತು ಕ್ರಿ.ಶ. 1545ರಲ್ಲಿ ಓರಿಯ ಕಾಲುವೆಯ ಹತ್ತಿರ ತಿರುವೆಂಗಳನಾಥ (ಸಂ. 234) ದೇವಸ್ಥಾನವನ್ನು ಕಟ್ಟಿಸಲಾಯಿತು. ವರದಾಜಮ್ಮನ ಪಟ್ಟಣದಲ್ಲಿ ಕ್ರಿ.ಶ. 1540ರಲ್ಲಿ ರಘುನಾಥ ದೇವಸ್ಥಾನವನ್ನು ಕಟ್ಟಿಸಲಾಯಿತು (ಸಂ. 468). ಕ್ರಿ.ಶ. 1545ರಲ್ಲಿ ಮಾಧವ ದೇವಸ್ಥಾನದಲ್ಲಿ ರಂಗಮಂಟಪವನ್ನು ಕಟ್ಟಿಸಲಾಯಿತು (ಸಂ. 332).

ಜೈನ ದೇವಸ್ಥಾನಗಳನ್ನು ಕಟ್ಟಿಸಿದ ಬಗ್ಗೆ ಶಾಸನಗಳಲ್ಲಿ ಪ್ರಸ್ತಾಪವಿದೆ. ಆನೆಗೊಂದಿಯಲ್ಲಿ ಕ್ರಿ.ಶ. 1342ರಲ್ಲಿ ಜೈನ ದೇವಾಲಯವನ್ನು (ಸಂ. 23) ಮತ್ತು ವಿಜಯನಗರದಲ್ಲಿ ಕ್ರಿ.ಶ. 1386ರಲ್ಲಿ ಕುಂಥು ಜಿನನಾಥ (ಸಂ. 382) ಮತ್ತು 1426ರಲ್ಲಿ ಪಾರ್ಶ್ವನಾಥ (ಸಂ. 347) ದೇವಸ್ಥಾನಗಳನ್ನು ಕಟ್ಟಿಸಲಾಯಿತು. ಮುಸ್ಲಿಮರಿಗೆ ಪ್ರೋತ್ಸಾಹ ನೀಡಿದ ವಿಷಯವು ಎರಡನೇ ದೇವರಾಯನ ಸೇವಕನಾದ ಅಹ್ಮದ್ ಖಾನನು ಕ್ರಿ.ಶ. 1439ರಲ್ಲಿ ಧರ್ಮಶಾಲೆ ಮತ್ತು ಬಾವಿಯನ್ನು ಕಟ್ಟಿಸಿದ್ದುದರಿಂದ ತಿಳಿದುಬರುತ್ತದೆ.

ವಿಜಯನಗರ ದೇವಸ್ಥಾನಗಳನ್ನು ವಿವರಿಸಲು ಸೂಕ್ತವಾದ ಪದಗಳು ಈ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಗರ್ಭಗೃಹ, ಶುಕನಾಸಿ, ಅಂತರಾಳಿಕ, ರಂಗಮಂಟಪ (ಸಂ. 78), ಮಹಾರಂಗಮಂಟಪ (ಸಂ. 104), ಸಂಧ್ಯಾಮಂಟಪ (ಸಂ. 403), ಉತ್ಸವ ಮಂಟಪ (ಸಂ. 333) ಪ್ರಾಕಾರ (ಸಂ. 78), ಗೋಪುರ (ಸಂ. 104, 172, 175, 200) ಮತ್ತು ತೇರುಬೀದಿ (ಸಂ. 240) ಪದಗಳನ್ನು ಶಾಸನಗಳು ಉಲ್ಲೇಖಿಸುತ್ತವೆ.[8]

ರಕ್ಷಣಾ ವ್ಯವಸ್ಥೆ: ವಿಜಯನಗರದ ಕೋಟೆಯ ಬಾಗಿಲು ಮತ್ತು ಕೊತ್ತಳಗಳನ್ನು ಸುಲಭವಾಗಿ ಗುರುತಿಸಲು ಅನುಕೂಲವಾಗುವಂತೆ ಹೆಸರುಗಳನ್ನಿಡಲಾಗಿತ್ತು. ಬಾಗಿಲುಗಳಿಗೆ ಅವುಗಳ ಹೆಸರಿನ ಮುಂದೆ ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿ ಎಂದೂ ಮತ್ತು ಕೊತ್ತಳಗಳ ಹೆಸರಿನ ಮುಂದೆ ಕೊತ್ತಳ ಎಂದೂ ಸೇರಿಸಲಾಗಿದೆ. ಶಾಸನಗಳಲ್ಲಿರುವ ಪದಗಳಿಂದ ಬಾಗಿಲುಗಳನ್ನು ಮೂರು ವಿಧಗಳಲ್ಲಿ ಹೆಬ್ಬಾಗಿಲು, ಬಾಗಿಲು, ದಿಡ್ಡಿ (ಚಿಕ್ಕ ಬಾಗಿಲು) ಎಂದು ವಿಂಗಡಿಸಲು ಸಾಧ್ಯವಾಗಿದೆ. ಕೆಳಗೆ ಪಟ್ಟಿ ಮಾಡಿದ ಬಾಗಿಲು ಮತ್ತು ಕೊತ್ತಳಗಳನ್ನು ಶಾಸನಗಳ ಸಹಾಯದಿಂದ ಗುರುತಿಸಲಾಗಿದೆ. ಸಿಂಘಾರದ ಹೆಬ್ಬಾಗಿಲು (ಸಂ. 346), ಬೇಟೆಕಾರರ ಹೆಬ್ಬಾಗಿಲು (ಸಂ. 368), ಕೋಟಿಶಂಕರದೇವರ ಬಾಗಿಲು (ಸಂ. 312-313), ಹೊದೆಯ ಬಾಗಿಲು (ಸಂ. 207), ಸೋಮವಾರದ ಬಾಗಿಲು (ಸಂ. 349), ಉಪ್ಪರಿಗೆ ಬಾಗಿಲು (ಸಂ. 384), ಸ್ವಾಮಿದೇವರ ಬಾಗಿಲು (ಸಂ. 466) ಪೆನುಗೊಂಡೆ ಬಾಗಿಲು (ಸಂ. 468), ಜಡೆಯಶಂಕರದೇವರ ದಿಡ್ಡಿ (ಸಂ. 304), ಹಂಪಾದೇವಿಯ ದಿಡ್ಡಿ (ಸಂ. 302), ಮತಂಗೇಶ್ವರದೇವರ ದಿಡ್ಡಿ (ಸಂ. 260), ರೆಮ್ಮು ದಿಡ್ಡಿ (ಸಂ. 289), ಪ್ರತಾಪ ಕೊತ್ತಳ (ಸಂ. 309), ಸ್ವಾಮಿದ್ರೋಹರಗಂಡನ ಕೊತ್ತಳ (ಸಂ. 303), ಮತಂಗದೇವರ ಕೊತ್ತಳ (ಸಂ. 297), ಮಳಲ ವಿನಾಯಕ ಕೊತ್ತಳ (ಸಂ. 300), ಜಲಸೇನದೇವರ ಕೊತ್ತಳ (ಸಂ. 236), ಮದನ ಕೊತ್ತಳ (ಸಂ. 266), ಮಿಸರಗಂಡನ ಕೊತ್ತಳ (ಸಂ. 274), ಹಂಪೆಯ ಕೊತ್ತಳ (ಸಂ. 316), ಹನುಮನ ಕೊತ್ತಳ (ಸಂ. 316) ಶಂಕರದೇವರ ಕೊತ್ತಳ (ಸಂ. 317), ಆನೆಗೊಂದಿಯ ಕೊತ್ತಳ (ಸಂ. 346), ಮತ್ತು ಸೋಮಯದೇವರ ಕೊತ್ತಳ (ಸಂ. 349).[9]

ಟಿಪ್ಪಣಿಗಳು

1. ಕೊಟ್ರಯ್ಯ ಸಿ.ಟಿ.ಎಮ್., 1983, ''ಹಂಪಿ ಬಿಫೋರ್ ಫೌಂಡಿಂಗ್ ಆಫ್ ವಿಜಯನಗರ,'' *ಶ್ರೀ ನಿಧಿ: ಪರ್ಸ್‌ಪೆಕ್ಟಿವ್ಸ್ ಇನ್ ಇಂಡಿಯನ್ ಆರ್ಕಿಯಾಲಜಿ, ಆರ್ಟ್ ಆ್ಯಂಡ್ ಕಲ್ಚರ್, ಶ್ರೀ ಕೆ.ಆರ್. ಶ್ರೀನಿವಾಸನ್ ಫೆಸ್ಟ್‌ಸ್ಕ್ರಿಫ್ಟ್*, ಮದ್ರಾಸ್, ಪು. 381-387.

2. ಪಾಟೀಲ ಚನ್ನಬಸಪ್ಪ ಎಸ್., 1991, ''ಮುಮ್ಮಡಿ ಸಿಂಗ, ಕಂಪಿಲ ಆ್ಯಂಡ್ ಕುಮಾರ ರಾಮ'', *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್ 1987-88*, (ಸಂ.) ಡಿ.ವಿ. ದೇವರಾಜ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. 179-198. ''ಕುಮ್ಮಟ'', *ಅದೇ*, ಪು. 199-216.

3. ಲಾಂಗ್‌ಹರ್ಸ್ಟ್ ಎ.ಎಚ್., 1982 (ಪುನರ್ ಮುದ್ರಣ), *ಹಂಪಿ ರೂಯಿನ್ಸ್*, ಪು. 10-11; ದೇಸಾಯಿ ಪಿ.ಬಿ., ಶ್ರೀನಿವಾಸ ಎಚ್ ರಿತ್ತಿ ಮತ್ತು ಬಿ.ಆರ್ ಗೋಪಾಲ್, 1981, *ಎ ಹಿಸ್ಟರಿ ಆಫ್ ಕರ್ನಾಟಕ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. 355.

4. ನೀಲಕಂಠ ಶಾಸ್ತ್ರಿ ಕೆ.ಎ. ಮತ್ತು ವೆಂಕಟರಮಣಯ್ಯ ಎನ್., 1946, *ಫರ್ದರ್ ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ*, ಮದ್ರಾಸ್ ವಿಶ್ವವಿದ್ಯಾಲಯ, ಪು. 188.

5. ಪಾಟೀಲ ಚನ್ನಬಸಪ್ಪ ಎಸ್., ''ವಿಜಯನಗರ ಸಿಟಿ ಇನ್ ಇನ್ಸ್‌ಕ್ರಿಪ್‌ಶನ್ಸ್'' ವರ್ಲ್ಡ್ ಆರ್ಕಿಯಾಲಜಿ ಕಾಂಗ್ರೆಸ್ III, 4-11ನೇ ಡಿಸೆಂಬರ್ 1994, ನವದೆಹಲಿಯಲ್ಲಿ ಮಂಡಿಸಿದ ಪ್ರಬಂಧ.

6. ನಾಗರಾಜರಾವ್ ಎಂ.ಎಸ್., 1983, ''ಅಹ್ಮದ್‌ಖಾನ್ಸ್ ಧರ್ಮಶಾಲ,'' *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್, 1979-83*, (ಸಂ) ಎಂ.ಎಸ್. ನಾಗರಾಜ ರಾವ್, ಪು. 64-65.

7. ಪಾಟೀಲ ಚನ್ನಬಸಪ್ಪ ಎಸ್., 1991, ''ಮಾಳಿಗೆ-ಕೂಪ-ಆರಾಮ ಎಟ್ ಮಲಪನಗುಡಿ'', *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್ 1984-87*, (ಸಂ.) ಡಿ.ವಿ. ದೇವರಾಜ್ ಮತ್ತು ಚನ್ನನಬಸಪ್ಪ ಎಸ್. ಪಾಟೀಲ, ಪು. 177-182.

8. ಪಾಟೀಲ ಚನ್ನಬಸಪ್ಪ ಎಸ್., 1991, ''ಟೆಂಪಲ್ ಆರ್ಕಿಟೆಕ್ಚರಲ್ ಟರ್ಮ್ಸ್ ಇನ್ ವಿಜಯನಗರ ಇನ್ಸ್‌ಕ್ರಿಪ್‌ಶನ್ಸ್'', *ಅದೇ*, ಪು. 167-173.

9. ಪಾಟೀಲ ಚನ್ನಬಸಪ್ಪ ಎಸ್., 1995, ''ಡಿಫೆನ್ಸ್ ಸಿಸ್ಟಮ್ ಎಟ್ ವಿಜಯನಗರ'', *ಸ್ಟಡೀಸ್ ಇನ್ ಇಂಡಿಯನ್ ಆರ್ಟ್ ಆ್ಯಂಡ್ ಆರ್ಕಿಯಾಲಜಿ, ಪ್ರೊ. ಕೆ.ಡಿ. ಬಾಜ್ಪೆಯಿ ಕಮೆಮೊರೇಶನ್ ವಾಲ್ಯೂಮ್*, (ಸಂ.) ಕೆ.ಕೆ. ಶರ್ಮ ಮತ್ತು ಆರ್.ಸಿ. ಅಗ್ರವಾಲ, ಆರ್ಯನ್ ಬುಕ್ಸ್ ಇಂಟರ್‌ನ್ಯಾಶನಲ್, ನವದೆಹಲಿ, ಪು. 237-243.

ಆನೆಗೊಂದಿ

ಸಂ. 1

ಸ್ಥಳ: ಆನೆಗೊಂದಿಯ ಉತ್ತರ ದಿಕ್ಕಿಗಿರುವ ಬಾಗಿಲಿನ ಹತ್ತಿರ ಹೊಲದಲ್ಲಿ ದೊರೆತ ತಾಮ್ರ ಶಾಸನ (ನಕಾಶೆ II)

ವಂಶ ಮತ್ತು ಅರಸ: --

ಕಾಲ: 13ನೇ ಶತಮಾನ

ಭಾಷೆ ಮತ್ತು ಲಿಪಿ: ಕನ್ನಡ

ಸಾರಾಂಶ: ''ವಿವಾಹ ಪುರಾಣ'' ಮತ್ತು ''ಅಮೃತ ಮಥನ ಪುರಾಣ'' ವೆಂದು ಶಾಸನದಲ್ಲಿ ಹೆಸರಿಸಿದ ಎರಡು ಸಾಹಿತ್ಯ ಕೃತಿಗಳನ್ನೊಳಗೊಂಡಿದೆ. ಮೊದಲನೆಯದು ಶಿವ ಮತ್ತು ಪಾರ್ವತಿಯರ ವಿವಾಹದ ಕಥೆಯನ್ನು ವಿವರಿಸಿದರೆ ಎರಡನೆಯದು ಸುರರು ಮತ್ತು ಅಸುರರು ಅಮೃತವನ್ನು ಪಡೆಯಲು ಸಮುದ್ರವನ್ನು ಕಡೆದ ಕಥೆಯನ್ನು ವಿವರಿಸುತ್ತದೆ.

ಉಲ್ಲೇಖ: ವಿಪೊರೀ, 1987-88, ಪು. 15-34.

ಸಂ. 2

ಅದೇ ಬಾಗಿಲಿನ ಹತ್ತಿರವಿರುವ ದೊಡ್ಡ ಗುಂಡಿನ ಮೇಲೆ (ನಕಾಶೆ H)

--

ಶಕ 1483 = ಕ್ರಿ.ಶ. 1561

ಕನ್ನಡ

ಅಪೂರ್ಣ ಜೈನ ಶಾಸನ.

ವಿಪೊರೀ, 1984-87, ಸಂ. 165.

ಸಂ. 3

ಗ್ರಾಮದ ಉತ್ತರಕ್ಕಿರುವ ಸುಂಕದ ಬಾಗಿಲಿನ ಹತ್ತಿರ ಗುಂಡಿನ ಮೇಲೆ (ನಕಾಶೆ H)

ವಿಜಯನಗರ, ಅಚ್ಯುತದೇವ

ಶಕ 1452, ವಿಕೃತಿ, ಮಾಘ ಶು. 5, ಬುಧವಾರ = ಕ್ರಿ.ಶ. 1531, ಜನವರಿ 23

ಕನ್ನಡ

ಅರವಂಟಿಗೆಗೆ ಮತ್ತು ಆನೆಗೊಂದಿಯ ಉತ್ತರದ (ಬಡಗನೆಯ) ಬಾಗಿಲಲ್ಲಿ ಪ್ರತಿಷ್ಠೆಮಾಡಿದ ಬಸವರಾಜ ದೇವರ ಪೂಜೆಗೆ ಚವರದ ಕೋನಪನಾಯಕನ ಮಗ ಮಾದಯ್ಯ ಮತ್ತು ಪೆನುಗೊಂಡೆಯ ನಾಗಯ್ಯ ಭೂಮಿಯನ್ನು ದಾನವಾಗಿ ಕೊಟ್ಟರು.

ವಿಪ್ರೊರೀ, 1984-87, ಸಂ. 166.

ಸಂ. 4

ಅದೇ ಗುಂಡಿನ ಮೇಲೆ ಮೇಲಿನ ಶಾಸನದ ಪಕ್ಕದಲ್ಲಿ (ನಕಾಶೆ H)

--

15-16ನೇ ಶತಮಾನ

ಕನ್ನಡ

ಹಿಂದೆ ದೇಮರಸಯನು ಅರವಂಟಿಗೆಗೆ ಭೂಮಿ ದಾನಮಾಡಿದ್ದನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1984-87, ಸಂ. 167.

ಸಂ. 5

ಅಂಜನಾದ್ರಿ ದೇವಸ್ಥಾನಕ್ಕೆ ಹೋಗುವ ಹಳೆಯ ರಸ್ತೆಯಲ್ಲಿ (ನಕಾಶೆ HXc)

--

15ನೇ ಶತಮಾನ

ಕನ್ನಡ

ನರಸನಾಯಕನು ಕಪಿಲೇಶ್ವರ ದೇವರಿಗೆ ಹದಿನೈದು ಕೊಳಗ ಭೂಮಿ ದಾನಮಾಡಿದ್ದನ್ನು ತಿಳಿಸುತ್ತದೆ.

ಸುಗಂಧಾ, ಸಂ. 12.

ಸಂ. 6

ಆನೆಗೊಂದಿಯಿಂದ ಮಲ್ಲಾಪುರ ಮತ್ತು ಇತರ ಗ್ರಾಮಗಳಿಗೆ ಹೋಗುವ ಮಾರ್ಗದಲ್ಲಿ ಎಡಕ್ಕಿರುವ ಬಂಡೆಯ ಮೇಲೆ (ನಕಾಶೆ HY)

--

ಶಕ 1481, ವಿರೋಧಿ, ಚೈತ್ರ ಬ. 5 = ಕ್ರಿ.ಶ. 1551, ಮಾರ್ಚ್ 26 (ಶಕ 1473)

ಕನ್ನಡ

ಮಹಾಮಂಡಲೇಶ್ವರ ರಾಮರಾಯ ಮತ್ತು ತಿರುಮಲದೇವರಾಜರು ಪ್ರವಾಸಿಗರಿಗೆ ನೀರು ಮುಂತಾದುವುಗಳನ್ನು ಒದಗಿಸಲು ಅರವಂಟಿಗೆಗೆ ಭೂಮಿ ದಾನ ಮಾಡಿದರು.

ಕ್ವಾಜಮಿಸೊ, VII, ಶಾಸನ ಸಂ. IX.

ಸಂ. 7

ಆನೆಗೊಂದಿ - ಮುನಿರಾಬಾದ್ ರಸ್ತೆಯಲ್ಲಿ ಗವಿರಂಗನಾಥ ದೇವಸ್ಥಾನದ ಪಕ್ಕದಲ್ಲಿರುವ ಗುಂಡಿನ ಮೇಲೆ (ನಕಾಶೆ HYa)

--

15-16ನೇ ಶತಮಾನ

ಕನ್ನಡ

ವೊಳಅಂಗಡಿಯ ವೀರಯದೇವರ ಮೂಗುಳ ಗದ್ದೆಯ ಉಲ್ಲೇಖವಿದೆ.

ವಿಪೊರೀ, 1984-87, ಸಂ. 168.

ಸಂ. 8

ಗವಿರಂಗನಾಥ ದೇವಸ್ಥಾನದ ಹತ್ತಿರವಿರುವ ಬಂಡೆಯ ಮೇಲೆ (ನಕಾಶೆ HYa)

--

ಶಕ 1312 = ಕ್ರಿ.ಶ. 1390

ಕನ್ನಡ

ಅಳಿಸಿಹೋಗಿದೆ.

ವಿಪ್ರೊರಿೀ, 1984-87, ಸಂ. 169.

ಸಂ. 9

ಅದೇ ಬಂಡೆಯ ಮೇಲೆ ಮೇಲಿನ ಶಾಸನದ ಪಕ್ಕದಲ್ಲಿ (ನಕಾಶೆ HYa)

--

ಶಕ 12.2, ಸಿದ್ಧಾರ್ಥಿ, ಭಾದ್ರಪದ = ಕ್ರಿ.ಶ. 1319, ಆಗಸ್ಟ್-ಸೆಪ್ಟೆಂಬರ್ (ಶಕ 1241)

ಕನ್ನಡ

ಬೆನ್ನೂರಿನ ವ್ಯಕ್ತಿಯ (ಹೆಸರು ಅಳಿಸಿದೆ) ನಿಸಿದಿಯ ಬಗ್ಗೆ ತಿಳಿಸುತ್ತದೆ.

ವಿಪ್ರೊರಿೀ, 1984-87, ಸಂ. 170.

ಸಂ. 10

ಅದೇ ಬಂಡೆಯ ಮೇಲೆ (ನಕಾಶೆ HYa)

--

ಶಕ 1298, ರಾಕ್ಷಸ, ಕಾರ್ತಿಕ ಬ. 2 = ಕ್ರಿ.ಶ. 1375, ನವೆಂಬರ್ 11 (ಶಕ 1297)

ಕನ್ನಡ

ಮೂಲಸಂಘ ಮತ್ತು ಬಲಾತ್ಕರಗಣದ ಮದನಕೀರ್ತಿರಾವುಳರ ಶಿಷ್ಯನಾದ ಬೆನ್ನೂರಿನ ಚಿಕ್ಕಣ್ಣನ ಮಗ ನಾಗಪ್ಪನ ನಿಸಿದಿಯ ಬಗ್ಗೆ ತಿಳಿಸುತ್ತದೆ.

ವಿಪ್ರೊರಿೀ, 1984-87, ಸಂ. 171.

ಸಂ. 11

ಅದೇ ಬಂಡೆಯ ಮೇಲೆ ಮೇಲಿನ ಶಾಸನದ ಪಕ್ಕದಲ್ಲಿ (ನಕಾಶೆ HYa)

--

ಶಕ 1288, ಪರಾಭವ, ಶ್ರಾವಣ ಶು. 1, ಗು(ರುವಾರ) = ಕ್ರಿ.ಶ. 1366, ಜುಲೈ 9

ಕನ್ನಡ

ಹಾರಿಯುದ ಲಕ್ಕಸೆಟ್ಟಿಯ ಮಗ ಸೋಮಸೆಟ್ಟಿಯ ನಿಸಿದಿಯ ಬಗ್ಗೆ ಮತ್ತು ಮೂಲಸಂಘ ಮತ್ತು ದೇಸಿಗಣದ ನರೇಂದ್ರನ ಶಿಷ್ಯನ ಬಗ್ಗೆ ತಿಳಿಸುತ್ತದೆ.

ಎಪ್ರೊ.ರಿ. 1984-87, ಸಂ. 172; ಕ್ಯಾಮಿಸೆ. VII, ಶಾಸನ ಸಂ. III.

ಸಂ. 12

ಅದೇ ಬಂಡೆಯ ಮೇಲೆ ಮೇಲಿನ ಶಾಸನದ ಪಕ್ಕದಲ್ಲಿ (ನಕಾಶೆ HYa)

--

ಶಕ 1391 = ಕ್ರಿ.ಶ. 1469

ಕನ್ನಡ

ಹಾಳಾಗಿದೆ.

ಎಪ್ರೊ.ರಿ. 1984-87, ಸಂ. 173.

ಸಂ. 13

ಅದೇ ಬಂಡೆಯ ಮೇಲೆ ಮೇಲಿನ ಶಾಸನದ ಪಕ್ಕದಲ್ಲಿ (ನಕಾಶೆ HYa)

--

ಶಕ 1293, ವಿರೋಧಿಕೃತ, ಆಶ್ವೀಜ ಶು. 6, ಸೋಮ(ವಾರ) = ಕ್ರಿ.ಶ. 1371, ಸೆಪ್ಟೆಂಬರ್ 15

ಕನ್ನಡ

ಹೊನ್ನಶೆಟ್ಟಿಯ ಸಮಿತಿಯ ಮಗಳು ಹೊನ್ನಶೆಟ್ಟಿಯ ಸೋಮಸೆಟ್ಟಿಯ ನಿಸಿದಿಯ ಬಗ್ಗೆ ತಿಳಿಸುತ್ತದೆ.

ಎಪ್ರೊ.ರಿ. 1984-87, ಸಂ. 174.

ಸಂ. 14

-- (ನಕಾಶೆ HYk)

--

16ನೇ ಶತಮಾನ

ಕನ್ನಡ

ಈ ಪಾದಿಯಲ್ಲಿರುವ ಭೂಮಿಯನ್ನು ಅಮರೇಶ್ವರ ದೇವರಿಗೆ ದಾನ ಕೊಟ್ಟ ವಿಷಯ ತಿಳಿಸುತ್ತದೆ.

ಸುಗಂಧ. ಸಂ. 14

ಸಂ. 15

ಬಣ್ಣದಲ್ಲಿ ಬರೆದ ಶಾಸನ (ನಕಾಶೆ HYs)

ವಿಜಯನಗರ, ದೇವರಾಯ

--

--

"ಪ್ರೌಢ ಪ್ರತಾಪ ದೇವರಾಯ" ಎಂದು ಬರೆಯಲಾಗಿದೆ.

ಸುಗಂಧಾ ಸಂ. 10.

ಸಂ. 16

ಆನೆಗೊಂದಿ - ಮುನಿರಾಬಾದ್ ರಸ್ತೆಯ ದಕ್ಷಿಣ ದಿಕ್ಕಿನ ಬಾಗಿಲಿನ ಹತ್ತಿರವಿರುವ ದೊಡ್ಡ ಬಂಡೆಗಲ್ಲಿನ ಮೇಲೆ (ನಕಾಶೆ HYu)

--

14ನೇ ಶತಮಾನ

ಕನ್ನಡ

ತ್ರಿಪುರಾಂತಯ್ಯನ ಮಗ ಆನಂದ ಸಿದ್ಧದೇವನ ಭಕ್ತಿಯ ಬಗ್ಗೆ ತಿಳಿಸುತ್ತದೆ. ಆನಂದ ಸಿದ್ಧದೇವನ ಭಕ್ತಿಗೆ ಮೆಚ್ಚಿ ಶಿವನು ಆತನ ಹತ್ತಿರ ಬಂದು ಪೂಜೆಯನ್ನು ಸ್ವೀಕರಿಸುತ್ತಿದ್ದನು. ಶಿವನು ಕಲ್ಲಿಗೂಸೆ ಬೆಟ್ಟದ ಹತ್ತಿರ ಬಂದು ದರ್ಶನ ಕೊಟ್ಟು ಸಿದ್ಧನಾಥನಿಗೆ ಆಶೀರ್ವದಿಸುತ್ತಿದ್ದನೆಂದು ತಿಳಿಸುತ್ತದೆ. ಕೊನೆಯಲ್ಲಿ ಸಿದ್ಧನಾಥನ ಮರಣದ ಬಗ್ಗೆ ತಿಳಿಸುತ್ತದೆ

ಇಪ್ರೊರಿ, 1984-87, ಸಂ. 175.

ಸಂ. 17

ಗ್ರಾಮದ ಈಶಾನ್ಯ ದಿಕ್ಕಿಗೆ ನದಿಯ ದಂಡೆಯ ಮೇಲೆ ಬೆಟ್ಟದ ಮೇಲೆ ಶಿಥಿಲವಾಗಿರುವ ದೇವಸ್ಥಾನದ ಹತ್ತಿರವಿರುವ ಕಲ್ಲಿನ ಮೇಲೆ (ನಕಾಶೆ HZe)

--

15-16ನೇ ಶತಮಾನ

ಕನ್ನಡ

ಮಹಾನಾಯಕ ಲಿಂಗಯ್ಯನ ಮಗ ಲಿಂಗಯ್ಯನ ಉಲ್ಲೇಖವಿದೆ.

ಇಪ್ರೊರಿ, 1983-84, ಸಂ. 80.

ಸಂ. 18

ಆನೆಗೊಂದಿಯಿಂದ ಗಂಗಾವತಿಗೆ ಹೋಗುವ ಮಾರ್ಗದ ಬಲಭಾಗದಲ್ಲಿ ಭತ್ತದ ಗದ್ದೆಯಲ್ಲಿರುವ ಕಲ್ಲಿನ ಮೇಲೆ (ನಕಾಶೆ HZg)

ವಿಜಯನಗರ, ಅಚ್ಯುತದೇವರಾಯ

ಶಕ 1455, ವಿಜಯ, ಜ್ಯೇಷ್ಠ ಶು. 15 = ಕ್ರಿ.ಶ. 1533, ಜೂನ್ 6

ಕನ್ನಡ

ಅನೆಗೊಂದಿಯ ತಿಮ್ಮರಸಯ್ಯನು ಅರಸನಿಗೆ ಪುಣ್ಯವಾಗಲೆಂದು ಮಹೇಶ ದೇವಸ್ಥಾನಕ್ಕೆ ಭೂಮಿ ದಾನಕೊಟ್ಟ ಉಲ್ಲೇಖವಿದೆ.
ಕ್ವಾಮಿಸೊ, VII, ಶಾಸನ ಸಂ. VII.

ಸಂ. 19

ಗ್ರಾಮದ ಹೊರಗೆ ಬಾಳೆ ತೋಟದಲ್ಲಿರುವ ಕಲ್ಲಿನ ಮೇಲೆ (ನಕಾಶೆ HZg?)
ವಿಜಯನಗರ, ಪ್ರೌಢ ಪ್ರತಾಪ ದೇವರಾಯ
ಶಕ 1358, ನಳ, ಫಾಲ್ಗುಣ ಶು. 1, ಮಂಗಳವಾರ = ಕ್ರಿ.ಶ. 1437, ಫೆಬ್ರವರಿ 6
ಕನ್ನಡ
ಭೈರವ ದೇವಸ್ಥಾನದ ನಿರ್ಮಾಣದ ಬಗ್ಗೆ ತಿಳಿಸುತ್ತದೆ.
ಇರಿಇಎ, 1958-59, ಸಂ. ಬಿ 681; ಕ್ವಾಮಿಸೊ VII, ಶಾಸನ ಸಂ.VI.

ಸಂ. 20

ಗ್ರಾಮದ ಈಶಾನ್ಯ ದಿಕ್ಕಿಗೆ ನದಿಯ ದಂಡೆಯ ಹತ್ತಿರ ಬಂಡೆಯ ಮೇಲೆ (ನಕಾಶೆ HZp)
--
ದುರ್ಮುಖಿ, ಫಾಲ್ಗುಣ ಶು..., ಆ(ದಿವಾರ)
ಕನ್ನಡ
ಬೆಯಿರಿಸೆಟ್ಟಿಯ ಮಗ ನಾಗಿಸೆಟ್ಟಿಯ ಹೆಂಡತಿ ವೀರ ತಿಮ್ಮಾಯಿಯ ಮರಣದ ಬಗ್ಗೆ ತಿಳಿಸುತ್ತದೆ. ವೀರ ತಿಮ್ಮಾಯಿಯು ಅವಳ ಗಂಡನ ಮರಣದ ನಂತರ ಅಗ್ನಿ ಪ್ರವೇಶಿಸಿದಳೆಂದು ತಿಳಿಸುತ್ತದೆ.
ವಿಪ್ರೊ.ರಿ, 1984-87, ಸಂ. 176.

ಸಂ. 21

ಗ್ರಾಮದ ಬಳಿಯ ಉತ್ತರ ದಿಕ್ಕಿನ ಬಾಗಿಲಿಗೆ ಹೊಂದಿಕೊಂಡಿರುವ ಕೋಟೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ (ನಕಾಶೆ HZr)
--
14ನೇ ಶತಮಾನ
ಕನ್ನಡ
ನಾಯಿದೇವರ ಕಂಬುಲಿಂಗನ ವೀರಯ್ಯನ (?) ಉಲ್ಲೇಖವಿದೆ.
ವಿಪ್ರೊ.ರಿ. 1984-87, ಸಂ. 177.

ಸಂ. 22

ರಂಗನಾಥ ದೇವಸ್ಥಾನದ ಹಿಂಭಾಗದಲ್ಲಿ ಜಗಲಿಯಲ್ಲಿ ಕಟ್ಟಿದ ಕಲ್ಲಿನ ಮೇಲೆ (ನಕಾಶೆ HZv)
ವಿಜಯನಗರ, -

ಶಕ 1512, ಖರ, ವೈಶಾಖ.... = ಕ್ರಿ.ಶ. 1591, ಏಪ್ರಿಲ್ (ಶಕ 1513)

ತೆಲುಗು

ಅಳಿಸಿಹೋಗಿದೆ. ಮಹಾಮಂಡಲೇಶ್ವರ ರಾಮರಾಜನ ಉಲ್ಲೇಖವಿದೆ. ದಾನದ ವಿವರಗಳು ನಾಶವಾಗಿವೆ.

ಆ್ಯರಿಇಎ, 1958-59, ಸಂ. ಬಿ 677.

ಸಂ. 23

ಜೈನ ದೇವಸ್ಥಾನದ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ (ನಕಾಶೆ HZv)

ವಿಜಯನಗರ, ಹರಿಹರ

.... ಚಿತ್ರಭಾನು, ವೈಶಾಖ ಶು. 3, ಸೋಮವಾರ = ಕ್ರಿ.ಶ. 1342, ಏಪ್ರಿಲ್ 8

ಸಂಸ್ಕೃತ, ಕನ್ನಡ

ಭಾಗಶಃ ಒಡೆದಿದೆ. ಹರಿಹರ ಅಧಿಕಾರಿಯಾದ ಬೈಚ ದಂಡನಾಥನ ಮಗ ಇರುಗಪ ದಂಡನಾಯಕನು ಚೈತ್ಯಾಲಯವನ್ನು ಕಟ್ಟಿಸಿದ ವಿಷಯವನ್ನು ನಮೂದಿಸುತ್ತದೆ. ಬಹುಶಃ ಚೈತ್ಯಾಲಯವನ್ನು ಹರಿಹರನ ಆಜ್ಞೆಯಮೇರೆಗೆ ಕಟ್ಟಲಾಗಿದೆ. ಈ ಚೈತ್ಯಾಲಯವನ್ನು ಕಟ್ಟಿದ ಊರಿನ ಹೆಸರು ನಾಶವಾಗಿದೆ. ಆದರೆ ಈ ಊರು ಕರ್ನಾಟ ಮಂಡಲದ ಕುಂತಲ ವಿಷಯದಲ್ಲಿದೆ ಎಂದು ಹೇಳಲಾಗಿದೆ. ಜೈನ ಗುರುಗಳ ವಂಶಾವಳಿಯನ್ನು ಸಹ ತಿಳಿಸುತ್ತದೆ.

ಆ್ಯರಿಇಎ, 1958-59, ಸಂ. ಬಿ 678.

ಸಂ. 24

ಗಣಪತಿ ದೇವಸ್ಥಾನದ ಹತ್ತಿರ ರಸ್ತೆ ಪಕ್ಕದಲ್ಲಿ ಬಿದ್ದಿರುವ ಕಲ್ಲಿನ ಮೇಲೆ (ನಕಾಶೆ HZv)

--

ಶಕ 1792 = ಕ್ರಿ.ಶ. 1870

ತೆಲುಗು

ರಾಜಾಧಿರಾಜ ರಾಜಪರಮೇಶ್ವರ ವೀರವೆಂಕಟ ಮಹಾರಾಯಲುವಿನ ಉಲ್ಲೇಖವಿದೆ.

ಆ್ಯರಿಇಎ, 1958-59, ಸಂ. ಬಿ 674.

ಸಂ. 25

-- (ನಕಾಶೆ HZv)

--

ಶಕ 1800 = ಕ್ರಿ.ಶ. 1878

ತೆಲುಗು

"ಶ್ರೀ ರಂಗಮ್ಮ ಅಮಗಾರು" ಎಂದು ಬರೆದಿದೆ.

ಸುಗಂಧಾ, ಸಂ. 34.

ಸಂ. 26

-- (ನಕಾಶೆ IIZv)

--

ಶಕ 1801 = ಕ್ರಿ.ಶ. 1879

ತೆಲುಗು

ಶ್ರೀ ನಂದಿಯಾಲ ಶ್ರೀ ಲಕ್ಷ್ಮೀದೇವಮ್ಮ ಅಮ್ಮಗಾರು ಅವರ ಉಲ್ಲೇಖವಿದೆ.

ಸುಗಂಧಾ. ಸಂ. 35.

ಸಂ. 27

ವೆಂಕಟರಾಮಗಾರಾಮಯ್ಯನ ಮನೆಯ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ (ನಕಾಶೆ IIZ)

--

ಶಕ 1887 (?)

ತೆಲುಗು

ರಾಜಾಧಿರಾಜ ರಾಜಪರಮೇಶ್ವರ ತಿರುಮಲರಾಯಯ್ಯನ ಉಲ್ಲೇಖವಿದೆ.

ಕ್ಷೇಶಾಇ. 1958-59, ಸಂ. ಬಿ 675.

ಸಂ. 28

ಅದೇ ಮನೆಯ ಹತ್ತಿರ ಬಿದ್ದಿರುವ ಮತ್ತೊಂದು ಕಲ್ಲಿನ ಮೇಲೆ (ನಕಾಶೆ IIZ)

--

ಶಕ ..... ಮಾಘ ಶು. ...., ಗ್ರಹಣ

ಕನ್ನಡ

ಹಾಳಾಗಿದೆ. ಮಹಾಮಂಡಳೇಶ್ವರ ರಾಮರಾಜ ಮತ್ತು ತಿಮ್ಮರಾಜರ ಉಲ್ಲೇಖವಿದೆ ಮತ್ತು ರಾಮರಾಜನಿಗೆ ಪುಣ್ಯವಾಗಲೆಂದು ತಿಮ್ಮರಾಜನು ದಾನ ಕೊಟ್ಟದ್ದನ್ನು ತಿಳಿಸುತ್ತದೆ.

ಕ್ಷೇಶಾಇ. 1958-59, ಸಂ. ಬಿ 676.

ಸಂ. 29

ಬಂಡೆಗಲ್ಲಿನ ಮೇಲೆ (ನಕಾಶೆ IVz)

--

೧೬ನೇ ಶತಮಾನ

--

ಬಲ್ಲ ಬಪ್ಪೆಯಾಕನ ಉಲ್ಲೇಖವಿದೆ.

ಸುಗಂಧಾ, ಸಂ. 16.

ಸಂ. 30

ಗ್ರಾಮದ ನೈರುತ್ಯ ದಿಕ್ಕಿಗಿರುವ ಬೆಟ್ಟದ ಬುಡದಲ್ಲಿರುವ ದೊಡ್ಡ ಗುಂಡಿನ ಮೇಲೆ (ನಕಾಶೆ NDj)

--

14ನೇ ಶತಮಾನ

ಕನ್ನಡ

ತಿಪ್ಪಣ್ಣ ಒಡೆಯರ ಅರಮನೆಯನ್ನು ಉಲ್ಲೇಖಿಸುತ್ತದೆ.

ವಿಪ್ರೋರಿ, 1984-87, ಸಂ. 178.

ಸಂ. 31

ಹುಚ್ಚಪ್ಪಯ್ಯ ಮಠದ ಪಶ್ಚಿಮಕ್ಕೆ ದೊಡ್ಡ ಗುಂಡಿನ ಮೇಲೆ (ನಕಾಶೆ NEl)

--

14-15ನೇ ಶತಮಾನ

ಕನ್ನಡ

ಬಯಣ್ಣನ ಭೂಮಿಯ ಬಗ್ಗೆ ತಿಳಿಸುತ್ತದೆ.

ವಿಪ್ರೋರಿ, 1984-87, ಸಂ. 179.

ಸಂ. 32

ಹುಚ್ಚಪ್ಪಯ್ಯ ಮಠದ ಈಶಾನ್ಯ ದಿಕ್ಕಿಗೆ ಬಂಡೆಯ ಮೇಲೆ (ನಕಾಶೆ NEl)

--

14-15ನೇ ಶತಮಾನ

ಸಂಸ್ಕೃತ, ಕನ್ನಡ

ಶಿವನಿಗೆ ನಮನಗಳನ್ನು ಉಲ್ಲೇಖಿಸುತ್ತದೆ.

ವಿಪ್ರೋರಿ, 1984-87, ಸಂ. 180.

ಸಂ. 33

ಹರಿಗೋಲು ಹಾಕುವ ಸ್ಥಳದಲ್ಲಿ ನದಿಯ ಮೇಲಿರುವ ಗುಂಡಿನ ಮೇಲೆ (ನಕಾಶೆ NDo)

ವಿಜಯನಗರ, ಕಂಪಭೂಪ

ಶಕ 1304 (ಚಂದ್ರ ಅನಲ ನಭ ವೇದ), ರುಧಿರೋದ್ಗಾರಿ = ಕ್ರಿ.ಶ. 1383 (ಶಕ 1305)

ಸಂಸ್ಕೃತ, ಕನ್ನಡ

(ಹರಿಹರನ ಮಗ) ಕಂಪಭೂಪನು ತುಂಗಭದ್ರಾ ನದಿಗೆ ದಾರಿಯನ್ನು ಮಾಡಿಸಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ.

ಕ್ವಾಜಮಿಸೊ, VII, ಶಾಸನ ಸಂ. IV; ಆ್ಯರಿಇಎ, 1958-59, ಸಂ. ಬಿ 682.

ಸಂ. 34

ಅದೇ ಸ್ಥಳದಲ್ಲಿ ಬಂಡೆಯ ಮೇಲೆ (ನಕಾಶೆ NDo)

--

16ನೇ ಶತಮಾನ

ಕನ್ನಡ

ತುಂಬ ಹಾಳಾಗಿದೆ.

ಆ್ಯರಿಇಎ, 1972-73, ಸಂ. ಬಿ 117.

ಸಂ. 35

ಅದೇ ಸ್ಥಳದಲ್ಲಿ ಗುಂಡಿನ ಮೇಲೆ (ನಕಾಶೆ NDt)

ವಿಜಯನಗರ, ಸದಾಶಿವರಾಯ

ಶಕ 1478, ಆನಂದ, ಚೈತ್ರ ಶು. 1, ಗು(ರುವಾರ) = ಕ್ರಿ.ಶ. 1556, ಮಾರ್ಚ್ 12 (ಅನಲ ಸಂವತ್ಸರ)

ಕನ್ನಡ

ಆನೆಗೊಂದಿಯ 14 ಮಿನುಗಾರರು ಮತ್ತು 300 ಅಂಬಿಗರು ಅಂಬಲಿಯ ಮಹಾಲಿಂಗ ಒಡೆಯನಿಗೆ ದಾನ ಮಾಡಿದ ವಿಷಯ ತಿಳಿಸುತ್ತದೆ.

ಕ್ವಾಜಮಿಸೊ, VII, ಶಾಸನ ಸಂ. VIII; ಆ್ಯರಿಇಎ, 1958-59, ಸಂ. ಬಿ 683; ವಿಪ್ರೊರಿ, 1983-84, ಸಂ. 76.

ಸಂ. 36

ಅದೇ ಸ್ಥಳದಲ್ಲಿ ಗುಂಡಿನ ಮೇಲೆ (ನಕಾಶೆ NDt)

--

ಶ್ರೀಮುಖ, ಜ್ಯೇಷ್ಠ ಶು. 5

ಕನ್ನಡ

ಆನೆಗೊಂದಿಯ ಅಂಬಿಗರಿಗೆ ಅಧಿಕಾರ ಕೊಟ್ಟ ವಿಷಯವನ್ನು ಉಲ್ಲೇಖಿಸಲಾಗಿದೆ. ತಿಮ್ಮರಾಜೆಯನು ಹಿಂದೆ ರಾಮಾಪುರ ಗ್ರಾಮದಲ್ಲಿ ಒಂದು ಗದ್ದೆಯನ್ನು ತೆರಿಗೆರಹಿತವಾಗಿ ಕೊಟ್ಟಿದ್ದನ್ನು ಮತ್ತು ಅದನ್ನು ಶ್ರೀರಂಗರಾಜನು ಮುಂದುವರಿಸಿದ್ದನ್ನು ತಿಳಿಸುತ್ತದೆ.

ವಿಪ್ರೊರಿ, 1983-84, ಸಂ. 77.

ಸಂ. 37

ಅದೇ ಸ್ಥಳದಲ್ಲಿ ಗುಂಡಿನ ಮೇಲೆ (ನಕಾಶೆ NDt)

--

15-16ನೇ ಶತಮಾನ

ಕನ್ನಡ

ಮಲರಾಯನು ಸೋಪಾನ(ಮೆಟ್ಟಿಲು)ಗಳನ್ನು ಮಾಡಿಸಿದ್ದನ್ನು ದಾಖಲಿಸಿದೆ.

ವಿಪ್ರೊರೀ, 1983-84, ಸಂ. 79.

ಸಂ. 38

ತುಂಗಭದ್ರಾ ನದಿಯಲ್ಲಿ 64 ಕಂಬಗಳ ಮಂಟಪದ ಹತ್ತಿರ ಗುಂಡಿನ ಮೇಲೆ (ನಕಾಶೆ NEd)

--

ಶಕ 12[47], ಕ್ರೋಧನ, ವೈಶಾಖ ಶು. 10, ಮಂಗಳವಾರ = ಕ್ರಿ.ಶ. 1325, ಏಪ್ರಿಲ್ 23.

ಕನ್ನಡ

ಅಳಿಸಿಹೋಗಿದೆ. ರಾಯರಾಜಗುರುವಿನ ಮತ್ತು ಸೋವಕ್ಕಳ ನಿಶಿಧಿಗಳ ಬಗ್ಗೆ ಉಲ್ಲೇಖಿಸುತ್ತದೆ.

ಕ್ವಾಜಮಿಸೊ, VII, ಶಾಸನ ಸಂ. II; ಆ್ಯರಿಇಎ, 1972-73, ಸಂ. ಬಿ 114.

ಸಂ. 39

ಚಿಂತಾಮಣಿ ಮಠದ ದಕ್ಷಿಣಕ್ಕೆ ಬಂಡೆಯ ಮೇಲೆ (ನಕಾಶೆ NEm)

ವಿಜಯನಗರ, ಹರಿಹರ (I)

ಶಕ 1271, ವಿರೋಧಿ, ಆಶ್ವಯುಜ ಬ. 13, ಗುರುವಾರ = ಕ್ರಿ.ಶ. 1349, ಅಕ್ಟೋಬರ್ 10, ಶನಿವಾರ (ಗುರುವಾರವಲ್ಲ)

ಕನ್ನಡ

ಹಾಳಾಗಿದೆ. ಅರಸನು ಭಾಸ್ಕರಕ್ಷೇತ್ರದ ಹಸ್ತಿನಾಪುರ (ಈಗಿನ ಆನೆಗೊಂದಿ)ಯಲ್ಲಿರುವ ಕಪಿಲೇಶ್ವರ ದೇವರಿಗೆ ಹೆಬ್ಬಾಳದಲ್ಲಿ ಭೂಮಿದಾನ ಮಾಡಿದ ವಿಷಯ ತಿಳಿಸುತ್ತದೆ.

ಆ್ಯರಿಇಎ, 1972-73, ಸಂ. ಬಿ 115; ವಿಪ್ರೊರೀ, 1983-84, ಸಂ. 74.

ಸಂ. 40

ಚಿಂತಾಮಣಿ ಮಠದಲ್ಲಿ ಕಂಬದ ಮೇಲೆ (ನಕಾಶೆ NEm)

--

ಶಕ .....

ಕನ್ನಡ

ತ್ರುಟಿತ. ಮೊದಲಿನ ಎರಡು ಸಾಲುಗಳ ಒಂದು ಭಾಗ ಮಾತ್ರ ಕಾಣುತ್ತದೆ.

ಆ್ಯರಿಇಎ, 1958-59, ಸಂ. ಬಿ 679.

ಸಂ. 41

ಅದೇ ಮಠದ ದಕ್ಷಿಣಕ್ಕೆ ಬಂಡೆಯ ಮೇಲೆ (ನಕಾಶೆ NEm)

--

14-15ನೇ ಶತಮಾನ

ಕನ್ನಡ

''ಕಾಸ್ಯಪ ರುದ್ರ,'' ಎಂದು ಬರೆದಿದೆ.

ವಿಪ್ರೊರೀ, 1983-84, ಸಂ. 75.

ಸಂ. 42

ಅದೇ ಮಠದ ಎದುರಿಗೆ ನದಿಯಲ್ಲಿರುವ ಗುಂಡಿನ ಮೇಲೆ (ನಕಾಶೆ NEm)

--

ಹೇಮಳಂಬಿ, ಪುಷ್ಯ, ಗುರುವಾರ (13ನೇ ಶತಮಾನ)

ಸಂಸ್ಕೃತ, ಕನ್ನಡ

ಪ್ರಧಾನ ಬುದ್ಧರಾಜನ ಹೆಂಡತಿ ಕಲುಬಾಯಿ ಸಮ್ಯಕ್ತವ್ರತದಿಂದ ಮರಣ ಹೊಂದಿದ ಬಗ್ಗೆ ತಿಳಿಸುತ್ತದೆ.

ಆ್ಯರಿಇಎ, 1958-59, ಸಂ. ಬಿ 680.

ಸಂ. 43

ಅದೇ ಮಠದ ಹತ್ತಿರ ತುಂಗಭದ್ರಾ ನದಿಯ ದಂಡೆಯ ಮೇಲಿರುವ ಗುಂಡಿನ ಮೇಲೆ (ನಕಾಶೆ NEm)

--

[ಪ್ರ]ಮಾದಿ, ಮಾರ್ಗಶಿರ ಶು. 1, ಆ(ದಿವಾರ) = ಕ್ರಿ.ಶ. 1699, ನವೆಂಬರ್ 12

ಕನ್ನಡ

ಅಪೂರ್ಣ ಮತ್ತು ತ್ರುಟಿತ. ಇಮ್ಮಡಿ ಕಪಿಲೇಶ್ವರದೇವರ ಉಲ್ಲೇಖವಿದೆ.

ಕ್ವಾಜಮಿಸೊ, VII, ಶಾಸನ ಸಂ. V; ಆ್ಯರಿಇಎ, 1972-73, ಸಂ. ಬಿ 118; ವಿಪ್ರೊರೀ, 1983-84, ಸಂ. 78.

ಸಂ. 44

ಕೋಟಿಲಿಂಗ ಸ್ಥಳದಲ್ಲಿ ನದಿಯ ಎಡದಂಡೆಯ ಮೇಲೆ ಗುಹೆಯ ಹತ್ತಿರ ಗುಂಡಿನ ಮೇಲೆ (ನಕಾಶೆ NGg)

--

15-16ನೇ ಶತಮಾನ

ಕನ್ನಡ

ಬೊಮ್ಮದೇವರ ಗವಿಯ ಬಗ್ಗೆ ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 39.

ಸಂ. 45

ಪಂಪಾಸರಸ್ಸಿನ ಹತ್ತಿರ ಲಕ್ಷ್ಮೀ ದೇವಸ್ಥಾನಕ್ಕೆ ಹತ್ತಿಹೋಗುವುದಕ್ಕೆ ಮೆಟ್ಟಿಲಾಗಿ ಇಟ್ಟಿರುವ ಕಲ್ಲಿನ ಮೇಲೆ (ನಕಾಶೆ II)

ಕಲ್ಯಾಣ ಚಾಲುಕ್ಯ, ಆಹವಮಲ್ಲ

ಶಕ 910, ಸರ್ವಧಾರಿ, ಮಾರ್ಗಶಿರ ಶು. 1 = ಕ್ರಿ.ಶ. 988, ನವೆಂಬರ್ 13

ಕನ್ನಡ

ಅರಸನು ಪ್ರಧಾನ ಮಂತ್ರಿ ಮಣ್ಣಮಯ್ಯನಿಗೆ ಭೂಮಿ ದಾನಮಾಡಿದ ದಾಖಲೆಯಿದೆ.

ಕ್ವಾಜಮಿಸೊ, VII, ಶಾಸನ ಸಂ. I.

ಸಂ. 46

ಪಾಳುಬಿದ್ದ ಶಾಣಾಪುರ ಗ್ರಾಮದ ಹತ್ತಿರ ತುಂಗಭದ್ರಾ ನದಿಗೆ ಕಟ್ಟಲಾದ ಅಣೆಕಟ್ಟಿನ ಮುಖ್ಯ ತೂಬಿನ ಹತ್ತಿರ ಕಲ್ಲಿನ ಮೇಲೆ

--

ವಿಶ್ವಾವಸು, ಮಾರ್ಗಶಿರ ಶು. 8

ಕನ್ನಡ

ನರಸನಾಯಕನು ಆರು ವರಹಗಳ ಮೌಲ್ಯದ ಭೂಮಿಯನ್ನು ಸಿದ್ಧದೇವರಿಗೆ ದಾನವಾಗಿ ಕೊಟ್ಟಿದ್ದನ್ನು ದಾಖಲಿಸುತ್ತದೆ.

ಕ್ವಾಜಮಿಸೊ, VII, ಶಾಸನ ಸಂ. X.

ಸಂ. 47

ಆಂಜನೇಯ ಗುಡ್ಡದ ಹತ್ತಿರ ಶಾಣಾಪುರಕ್ಕೆ ಹೋಗುವ ಮಾರ್ಗದಲ್ಲಿ ಎಡಕ್ಕೆ ಭತ್ತದ ಗದ್ದೆಯಲ್ಲಿನ ಬಂಡೆಯ ಮೇಲೆ

--

ಸ್ವಭಾನು, ಮಾರ್ಗಶಿರ 6, ಬುಧವಾರ

ಕನ್ನಡ

ಆನೆಗೊಂದಿಯ ನಾಗಣ್ಣದೇವನು ಆಂಜನಾದೇವಿಯ ಹನುಮಂತದೇವರ ಪೂಜೆಗೆ ರಾಮಾಪುರದಲ್ಲಿ ಹದಿನೆಂಟು ಕೊಳಗ ಭೂಮಿಯನ್ನು ದಾನವಾಗಿ ಕೊಟ್ಟದ್ದನ್ನು ದಾಖಲಿಸುತ್ತದೆ.

ಕ್ವಾಜಮಿಸೊ, VII, ಶಾಸನ ಸಂ. XI.

ಸಂ. 48

ತಾರಾ ಪರ್ವತದ ಹತ್ತಿರ ಬಿದ್ದಿರುವ ವೀರಗಲ್ಲಿನ ಮೇಲೆ

--

15ನೇ ಶತಮಾನ

ಕನ್ನಡ

ಬಿಲ್ಲ ಕಾಚಪ್ಪನು ಅರಳೆಯ ಮರವನ್ನು ನೆಟ್ಟ ವಿಷಯ ತಿಳಿಸುತ್ತದೆ.

ಆ್ಯರಿಇಎ, 1972-73, ಸಂ. ಬಿ 116.

ಸಂ. 49

ಮೈಲಾರ ದೇವಾಲಯದ ಪೂರ್ವಕ್ಕೆ ಏಳು ಹೆಡೆಗಳುಳ್ಳ ಸರ್ಪದ ಕಲ್ಲಿನ ಮೇಲೆ

ವಿಜಯನಗರ, ಪ್ರೌಢ ಪ್ರತಾಪ ದೇವರಾಯ

ಶಕ 1358, ನಳ = ಕ್ರಿ.ಶ. 1436, (ಅನಲ)

--

ತಿರುವೆಂಗಳನಾಥ ದೇವರಿಗೆ ಆನೆಗೊಂದಿಯಲ್ಲಿ ನಾಲ್ಕು ಕೊಳಗ ಗದ್ದೆಯನ್ನು ದಾನ ಮಾಡಿದ ವಿಷಯ ತಿಳಿಸುತ್ತದೆ.

ಸುಗಂಧಾ, ಸಂ. 9.

ಸಂ. 50

ಆನೆಗೊಂದಿ ರಾಜ ಮನೆತನ ಈಗಿನ ವಾರಸುದಾರರ ವಶದಲ್ಲಿರುವ ಬೆಳ್ಳಿ ಪಟ

--

ಶಕ 1579, ಹೇಮಳಂಬಿ, ವೈಶಾಖ ಶು. 12 = ಕ್ರಿ.ಶ. 1657, ಏಪ್ರಿಲ್ 15

--

ಶ್ರೀ ವೀರ ಶಿವರಾಜೇ ರಾಜನು ಆನೆಗೊಂದಿ ಸಂಸ್ಥಾನದಲ್ಲಿರುವ ತಾಲ್ಲೂಕುಗಳನ್ನು ರಾಜಶ್ರೀ ತಿರ್ಕೊಮಲ್ ಗೋಸ್ವಾಮಿಗೆ ದಾನ ಮಾಡಿದ ವಿಷಯ ತಿಳಿಸುತ್ತದೆ.

ಸುಗಂಧಾ, ಸಂ. 31.

ಸಂ. 51

ಆನೆಗೊಂದಿ ರಾಜಮನೆತನದ ಈಗಿನ ವಾರಸುದಾರರ ವಶದಲ್ಲಿರುವ ಮುದ್ರೆ

--

--

--

ಗವಿ ರಂಗನಾಥನು ಸಂಸ್ಥಾನದ ಪೋಷಕ ದೇವರೆಂಬ ವಿಷಯ ತಿಳಿಸುತ್ತದೆ.

ಸುಗಂಧಾ, ಸಂ. 37.

ಸಂ. 52

ಶ್ರೀ ಅಂಬಿಗ ತಾಯಪ್ಪನ ವಶದಲ್ಲಿರುವ ತಾಮ್ರ ಶಾಸನ

ವಿಜಯನಗರ, ಸದಾಶಿವರಾಯ

ಶಕ 1478, ಆನಂದ, ಚೈತ್ರ ಶು. 1 = ಕ್ರಿ.ಶ. 1556, ಮಾರ್ಚ್ 12, (ಅನಲ)

--

ಅಂಬಿಗರ ಮುಖ್ಯಸ್ಥರಾದ ನಾಗಯೋಗಿ ಮತ್ತು ಬಸವಯೋಗಿಯರಿಗೆ ಭೂಮಿದಾನ ಮಾಡಿದ ವಿಷಯ ತಿಳಿಸುತ್ತದೆ.

ಸುಗಂಧಾ, ಸಂ. 22.

ಸಂ. 53

ಅಂಬಿಗ ತಾಯಪ್ಪನ ವಶದಲ್ಲಿರುವ ಹಿತ್ತಾಳೆ ಪಟ

--

ಶಕ 1651 = ಕ್ರಿ.ಶ. 1729

--

ಅಂಬಿಗರ ಮನೆತನಕ್ಕೆ ಹಿಂದೆ ಭೂಮಿ ದಾನಮಾಡಿದ ವಿಷಯವನ್ನು ಮತ್ತು ಕತ್ತಿ ಬಿರುದನ್ನು ಕೊಟ್ಟ ವಿಷಯವನ್ನು ದೃಢೀಕರಿಸುತ್ತದೆ.

ಸುಗಂಧಾ, ಸಂ. 32.

ಬುಕ್ಕಸಾಗರ

ಸಂ. 54

ನದಿ ದಂಡೆಯ ಹತ್ತಿರದ ಕಾಲುವೆಯ ಪಕ್ಕದಲ್ಲಿರುವ ಗುಂಡಿನ ಮೇಲೆ (ನಕಾಶೆ J)

--

ಶಕ 1449, ಸರ್ವಜಿತು, ಚೈತ್ರ ಶು. 1 = ಕ್ರಿ.ಶ. 1528, ಮಾರ್ಚ್ 21

ಕನ್ನಡ

ರಾಮಸಾಗರದ ಅವಿಕಥವಿತರಸನು ಕಲ್ಲನ್ನು ಒಡೆಸಿ ಕಾಲುವೆಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಅಲ್ಲದೆ ಜಮುನಖಾನನ ಉಲ್ಲೇಖವಿದೆ.

ವಿಪ್ರೊರೀ, 1988-91, ಸಂ. 2.

ಸಂ. 55

ಈಗ ಕಮಲಾಪುರದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ತಾಮ್ರ ಪಟಗಳು (ನಕಾಶೆ J)

ಅರವೀಡು, ವೆಂಕಟಪತಿರಾಯ

ಶಕ 1534, ಪರಿಧಾವಿ, ಕಾರ್ತಿಕ ಶು. 12 = ಕ್ರಿ.ಶ. 1612, ಅಕ್ಟೋಬರ್ 26

ಸಂಸ್ಕೃತ ಮತ್ತು ಕನ್ನಡ, ನಂದಿ ನಾಗರಿ

ವೀರಶೈವ ಗುರು ಸಿದ್ಧ ಬಸವರಾಜದೇವನಿಗೆ ಜಂಗಮರ ಪೂಜೆ ಮತ್ತು ಭೋಜನಕ್ಕೆ ಗಂಗಾವತಿ ಸೀಮೆಯಲ್ಲಿನ ಕಲ್ಲುಗುಡಿ ಗ್ರಾಮವನ್ನು ದಾನಮಾಡಿದ ವಿಷಯ ತಿಳಿಸುತ್ತದೆ. ಈ ದಾನ ಸ್ವೀಕರಿಸಿದ ವ್ಯಕ್ತಿಯು ಬುಕ್ಕಸಾಗರದ ಹಂಪೆ ಮಠದ ಕರ್ತನಾಗಿದ್ದನೆಂದು ತಿಳಿಸುತ್ತದೆ.

ಆ್ಯರಿಇಎ, 1959-60, ಸಂ. ಎ 61.

ಹಂಪೆ

ಸಂ. 56

ತುಂಗಭದ್ರಾ ನದಿಗೆ ಕಟ್ಟಿದ ಹಳೆಯ ಅಣೆಕಟ್ಟಿನ (ವಿಜಯನಗರ ಅಣೆಕಟ್ಟು ಸಂ. 1) ಹತ್ತಿರ ತುರ್ತು ಕಾಲುವೆಯು ಉಗಮ ಸ್ಥಳದ ಹತ್ತಿರ ಬಂಡೆಗಲ್ಲಿನ ಮೇಲೆ (ನಕಾಶೆ M)

--

15ನೇ ಶತಮಾನ

ಕನ್ನಡ

ಅಣೆಕಟ್ಟು (ಕಟ್ಟೆ)ಯನ್ನು ಚಿಂತಾಯಕ ದೇವಣ್ಣನು ಕಟ್ಟಿಸಿದನು ಮತ್ತು (ವಿರೂಪಾಕ್ಷ ದೇವರ ಸೇವಕ) ಬೊಮ್ಮೋಜನು ಕಟ್ಟಿಸಿದನೆಂದು ದಾಖಲಿಸುತ್ತದೆ.

ವಿಪ್ರೊರೀ, 1984-87, ಸಂ. 1.

ಸಂ. 57

ಹಂಪೆಯ ನೈರುತ್ಯ ದಿಕ್ಕಿನಲ್ಲಿ 3 ಕಿ.ಮೀ. ದೂರದಲ್ಲಿ ತುರ್ತು ಕಾಲುವೆಯ ಬಲ ದಂಡೆಯ ಮೇಲಿರುವ ಗಂಗಮ್ಮನ ದೇವಸ್ಥಾನದಲ್ಲಿ ಕಂಬದ ಮೇಲೆ (ನಕಾಶೆ M)

ವಿಜಯನಗರ, ಅಚ್ಯುತರಾಯ

ದುರ್ಮುಖಿ, ಆಷಾಢ ಶು. 11, ಗು(ರುವಾರ) = ಕ್ರಿ.ಶ. 1536, ಜೂನ್ 29

ಕನ್ನಡ

ಅಚ್ಯುತರಾಯನಿಗೆ ಪುಣ್ಯವಾಗಲೆಂದು ಪೆನುಕೊಂಡೆಯ ವಿರುಪಣ್ಣನು ವಿರೂಪಾಕ್ಷ ದೇವರ ಸೇವೆಗೆ ಭೂಮಿ ದಾನಮಾಡಿದ್ದನ್ನು ದಾಖಲಿಸುತ್ತದೆ.

ವಿಪ್ರೊರೀ, 1984-87, ಸಂ. 2.

ಸಂ. 58

ವಿರೂಪಾಕ್ಷ ದೇವಸ್ಥಾನದ ವಾಯುವ್ಯ ದಿಕ್ಕಿಗೆ ನದಿಯ ದಂಡೆಯ ಮೇಲೆ ಶಿಥಿಲಗೊಂಡ ದೇವಸ್ಥಾನದಲ್ಲಿ ಗರ್ಭಗೃಹದ ಬಾಗಿಲಿನ ಹಣೆಪಟ್ಟಿಯ ಮೇಲೆ (ನಕಾಶೆ M)

--

ಶಕ 1445, ಚಿತ್ರಭಾನು, ಭಾದ್ರಪದ ಶು. 11, ಸೋಮವಾರ = ಕ್ರಿ.ಶ. 1552, ಸೆಪ್ಟೆಂಬರ್ 1

ಕನ್ನಡ

ವಿಶ್ವನಾಥರಾಹುತರ ಮಕ್ಕಳು ರಾಮಪ್ಪರಾಹುತ, ಗೋಪಮ್ಮ, ಮಣತಾಯಮ್ಮ, ತಿಮ್ಮಾಜಮ್ಮ ಮತ್ತು ಹನುಮಂತಪ್ಪ ಭಾಸ್ಕರ ಕ್ಷೇತ್ರದಲ್ಲಿ (ಹಂಪೆಯಲ್ಲಿ) ತುಂಗಭದ್ರಾ ದಂಡೆಯ ಮೇಲೆ ಮರಣ ಹೊಂದಿದ ವಿಷಯ ತಿಳಿಸುತ್ತದೆ. ರಾಮಪ್ಪರಾಹುತ ಮತ್ತು ಗೋಪಮ್ಮನವರ ಮಗನಾದ ಹರಿದಾಸರಾಹುತನು ಕಲ್ಲಿನ ದೇವಸ್ಥಾನ ಕಟ್ಟಿಸಿ ರಾಮಲಿಂಗದೇವರನ್ನು ಪ್ರತಿಷ್ಠಾಪಿಸಿ, ದೀಪ ಸ್ತಂಭವನ್ನು ನಿಲ್ಲಿಸಿ, ದೇಸ್ಥಾನದ ಸುತ್ತಲೂ ಮರಗಳ ತೋಪು ಮತ್ತು ಹೂವಿನ ತೋಟವನ್ನು ಬೆಳೆಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 3.

ಸಂ. 59

ವಿರೂಪಾಕ್ಷ ದೇವಸ್ಥಾನದ ವಾಯುವ್ಯಕ್ಕೆ ಮೇಲೆ ನಂದಿಯ ಶಿಲ್ಪವುಳ್ಳ ಚಿಕ್ಕ ಕಂಬದ ಮೇಲೆ (ನಕಾಶೆ M)

--

15-16ನೇ ಶತಮಾನ

ಕನ್ನಡ

ಭೂತೇಶ್ವರ ದೇವರ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 4.

ಸಂ. 60

ವಿರೂಪಾಕ್ಷ ದೇವಸ್ಥಾನದ ಪಶ್ಚಿಮಕ್ಕೆ ಬಾಳೆ ತೋಟದಲ್ಲಿ ಗುಂಡಿನ ಮೇಲೆ (ನಕಾಶೆ M)

--

15-16ನೇ ಶತಮಾನ

ಕನ್ನಡ

ಮಾದರಸಅಯ್ಯನು ವಿರೂಪಾಕ್ಷ ದೇವರಿಗೆ ಭೂಮಿದಾನ ಮಾಡಿದ ದಾಖಲೆಯಿದೆ.

ವಿಪ್ರೊರೀ, 1984-87, ಸಂ. 5.

ಸಂ. 61

ವಿರೂಪಾಕ್ಷ ದೇವಸ್ಥಾನದ ಪಶ್ಚಿಮಕ್ಕೆ ರಸ್ತೆ ಪಕ್ಕದಲ್ಲಿ ಗುಂಡಿನ ಮೇಲೆ (ನಕಾಶೆ M)

--

ವಿಕೃತ

ಕನ್ನಡ

ಕಾಡಬಸಪ್ಪನು ದಾರಿಯನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 6.

ಸಂ. 62

ವಿರೂಪಾಕ್ಷ ದೇವಸ್ಥಾನದ ವಾಯುವ್ಯ ದಿಕ್ಕಿಗೆ ನದಿಯ ದಂಡೆಯ ಮೇಲೆ ಸತಿಗಲ್ಲಿನ ಮೇಲೆ (ನಕಾಶೆ M)

--

15-16ನೇ ಶತಮಾನ

ಕನ್ನಡ

ವೀರಣನ ಮಗಳು ವೀರಾಯಮನ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 7.

ಸಂ. 63

ಕೃಷ್ಣ ದೇವಸ್ಥಾನದ ಪಶ್ಚಿಮಕ್ಕೆ ಮತ್ತು ಹಂಪಿ-ಕಮಲಾಪುರ ರಸ್ತೆಯ ಉತ್ತರಕ್ಕೆ ಗುಂಡಿನ ಮೇಲೆ (ನಕಾಶೆ M)

--

15-16ನೇ ಶತಮಾನ

ಕನ್ನಡ

ಚೆನ್ನಿಸೆಟ್ಟಿಯು ಚೆನ್ನವೊಡೆರು, ಬಸವಣ್ಣವೊಡೆರು ಮತ್ತು ಪರುವತದೇವರಿಗೆ ಕಂಚಿಗೆ ಕೊಟ್ಟ ದಾಖಲೆಯಿದೆ.

ವಿಪ್ರೊರೀ, 1983-84, ಸಂ. 36.

ಸಂ. 64

ಕಡಿರಾಮಪುರ-ಹಂಪಿ ರಸ್ತೆಯ ಪೂರ್ವಕ್ಕೆ, ತುರ್ತುಕಾಲುವೆಯ ಉತ್ತರಕ್ಕಿರುವ ವೈಷ್ಣವ ದೇವಸ್ಥಾನದ ಎದುರಿಗಿರುವ ಕಲ್ಲಿನ ಮುಂಭಾಗದಲ್ಲಿ (ನಕಾಶೆ M)

ವಿಜಯನಗರ, ಕೃಷ್ಣರಾಯ

ಶಕ 1445, ತಾರಣ = ಕ್ರಿ.ಶ. 1524 (ಶಕ 1446)

ಕನ್ನಡ

ತೆರಕಣಂಬಿಯ ವಿರೂಪಾಕ್ಷಭಟ್ಟನ ಮಗ ಗೋಪಿನಾಥ ದೀಕ್ಷಿತನು ಹಿರಿಯ ಕಾಲುವೆಯಲ್ಲಿ ಪ್ರತಿಷ್ಠಾಪಿಸಿದ ರಘುನಾಥದೇವರಿಗೆ ಪಂಪಾವಿರೂಪಾಕ್ಷನು ಪ್ರತಿದಿನ 5 ಪಡಿ ಅಕ್ಕಿ ಮತ್ತು ಕಾಲು ಪಡಿ ಎಣ್ಣೆಯನ್ನು ಕೊಡುವ ಕಟ್ಟಳೆಯನ್ನು ಮಾಡಿದನು. ಅರಸನು

ರಘುನಾಥದೇವರಿಗೆ ಪ್ರತಿದಿನ 20 ಪಡಿ ಅಕ್ಕಿ, 1 ಪಡಿ ತುಪ್ಪ ಮತ್ತು 1 ಪಡಿ ಎಣ್ಣೆಯನ್ನೂ ಮತ್ತು ಪ್ರತಿ ತಿಂಗಳು 1 ಗದ್ಯಾಣ ಅಥವಾ ಹೊನ್ನನ್ನೂ ಕೊಡುವ ಕಟ್ಟಳೆಯನ್ನು ಮಾಡಿದನು. ಗೋಪಿನಾಥ ದೀಕ್ಷಿತನು ನೆಳಲಹುಣಿಸೆಯ ಅಗ್ರಹಾರದಲ್ಲಿ 5 ಕೊಳಗ ಗದ್ದೆಯನ್ನು ದಾನವಾಗಿ ಕೊಟ್ಟನು. ಹಸ್ತಿನಾವತಿವಳಿತದ, ಅರಕೆರೆ ವೆಂಟೆಯ, ಪ್ರತಾಪದೇವರಾಯಪುರವೆಂದೂ ಕರೆಯಲಾಗುವ ಎಲ್ಲ ತೆರಿಗೆಯಿಂದ ಮುಕ್ತವಾದ ಯೆರಗುಡಿ ಅಗ್ರಹಾರದಲ್ಲಿ 10 ವ್ರಿತ್ತಿಗಳನ್ನು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 16.

ಸಂ. 65

ಅದೇ ಕಲ್ಲಿನ ಮೇಲೆ ಹಿಂಭಾಗದಲ್ಲಿ (ನಕಾಶೆ M)

--

ಶಕ 1447, ಪಾರ್ಥಿವ, ಕಾರ್ತಿಕ ಶು. 1 = ಕ್ರಿ.ಶ. 1525, ಅಕ್ಟೋಬರ್ 17

ಕನ್ನಡ

ಅಳಿಸಿಹೋಗಿದೆ. ನೆಳಲಹುಣಿಸೆಯ ಅಗ್ರಹಾರದ ಉಲ್ಲೇಖವಿದೆ.

ವಿಪ್ರೊರೀ, 1983-84, ಸಂ. 17.

ಸಂ. 66

ಅದೇ ಕಲ್ಲಿನ ಮೇಲೆ 3ನೇ ಮಗ್ಗಲಿಗೆ (ನಕಾಶೆ M)

--

ಸರ್ವಜಿತ, ಜ್ಯೇಷ್ಠ ಶು. 1

ಕನ್ನಡ

ಹಿರಿಯ ಕಾಲುವೆಯ ರಘುನಾಥದೇವರ ಸೇವೆಯಲ್ಲಿ ನಿರತರಾದ ಬ್ರಾಹ್ಮಣರಿಗೆ 10 ಕೊಳಗ ಗದ್ದೆಯನ್ನು ಕೊಟ್ಟದ್ದನ್ನು ದಾಖಲಿಸುತ್ತದೆ.

ವಿಪ್ರೊರೀ, 1983-84, ಸಂ. 18.

ಕಡಿರಾಮಪುರ

ಸಂ. 67

ತುರ್ತುಕಾಲುವೆಯ ದಕ್ಷಿಣಕ್ಕಿರುವ ರಘುನಾಥ ದೇವಸ್ಥಾನದ ಪಶ್ಚಿಮಕ್ಕೆ ಬೆಟ್ಟದ ಮೇಲೆ ಗುಹೆಯ ಬಂಡೆಯ ಮೇಲೆ (ನಕಾಶೆ M)

--

ಸ್ವ(ಭಾನು), ಮಾಘ ಬ. 2, ಆ(ದಿವಾರ) (15-16ನೇ ಶತಮಾನ)

ಕನ್ನಡ

ಚೆಂಚರ ಮಲ್ಲಿಕಾರ್ಜುನ ದೇವರು ನೆಳಲಪುಣಸೆಯುಗಿರಿಯ ಗುಹೆಯಲ್ಲಿ ಕಲ್ಲಿನ ಮೇಲೆ ಒಡಮುಮೂಡಿದ (ಪ್ರತ್ಯಕ್ಷನಾದ) ವಿಷಯ ತಿಳಿಸುತ್ತದೆ. ಗೌರಿಯ ಪತಿಯಾದ ಶ್ರೀ ಶೈಲ ಲಿಂಗ ಅದೇ ಗುಹೆಯ ಕಲ್ಲಿನ ಮೇಲೆ ಉದ್ಭವವಾಗಿ ಭೈರವಮೂರ್ತಿ ಅಯ್ಯನ ಕನಸಿನಲ್ಲಿ ಬಂದ ಘಟನೆಯನ್ನು ವಿವರಿಸಿದ ನಂತರ ಹೂವಿಗನು ಆ ಸ್ಥಳವನ್ನು ಪುಣ್ಯಕ್ಷೇತ್ರವನ್ನಾಗಿ ಪರಿವರ್ತಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 147.

ಸಂ. 68

ಅದೇ ಗುಹೆಯಲ್ಲಿ ಇನ್ನೊಂದು ಬಂಡೆಯ ಮೇಲೆ (ನಕಾಶೆ M)

--

15-16ನೇ ಶತಮಾನ

ಕನ್ನಡ

ಚೆಂಚರ ಮಲ್ಲಿಕಾರ್ಜುನದೇವರ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 148.

ಸಂ. 69

ಕಡಿರಾಮಪುರದ ಹತ್ತಿರ ಮುಸ್ಲಿಮರ ಗೋರಿಗಳ ಹತ್ತಿರ ಗುಂಡಿನ ಮೇಲೆ (ನಕಾಶೆ M)

ವಿಜಯನಗರ, ನರಸಿಂಹ

ಶಕ 1427, ಕ್ರೋಧನ, ವೈಶಾಖ ಶು. 10, ಶುಕ್ರವಾರ = ಕ್ರಿ.ಶ. 1505, ಏಪ್ರಿಲ್ 13

ಕನ್ನಡ

ಹಸ್ತಿನಾವತಿವಳಿತದ ಕಡೆರಾಮಪುರದಲ್ಲಿ ಕನ್ನೆಕಟೆಯ ಹತ್ತಿರ ಹರಳುತಿಪ್ಪೆ ಗುಡ್ಡದ ಸ್ಥಳದಲ್ಲಿ ಗೋರಿ (ಗುಮ್ಮಟ)ವನ್ನು ಕಟ್ಟಿದ (?) ಬಗ್ಗೆ ತಿಳಿಸುತ್ತದೆ. ತೋಟದಲ್ಲಿ ಒಂದು ಬಾವಿಯನ್ನು ಕಟ್ಟಿಸಿದ ವಿಷಯ ಮತ್ತು ಸೈದುಪಿರು ಅಲಿ, ಅಬು ಮತ್ತು ಹಾಸಾಧಸಾಮಿ ಎಂಬ ವ್ಯಕ್ತಿಗಳ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 149.

ಸಂ. 70

ಹಂಪೆಯ ನೈರುತ್ಯ ದಿಕ್ಕಿಗೆ 4 ಕಿ.ಮೀ. ದೂರದಲ್ಲಿರುವ ಪಾಳುಬಿದ್ದ ಸಿಂಗನಾಯಕನಹಳ್ಳಿಯ ಹತ್ತಿರ ಹೊಲದಲ್ಲಿರುವ ಬಂಡೆಗಲ್ಲಿನ ಮೇಲೆ (ನಕಾಶೆ M)

ವಿಜಯನಗರ, ಕೃಷ್ಣದೇವರಾಯ

ಶಕ 1431, ಶುಕ್ಲ, ಮಾಘ ಶು. 14 = ಕ್ರಿ.ಶ. 1510, ಜನವರಿ 24

ಕನ್ನಡ

ವಿಜಯನಗರ ಅರಸ ಕೃಷ್ಣದೇವರಾಯ ತನ್ನ ಪಟ್ಟಾಭಿಷೇಕದ ಸಮಯದಲ್ಲಿ ಮೇಲೆ ತಿಳಿಸಿದ ದಿನಾಂಕದಂದು ಪಟ್ಟವನ್ನು ಕಟ್ಟಿಕೊಂಡು ಸಿಂಹಾಸನದ ಮೇಲೆ ಕುಳಿತು ಸಿಂಗನಾಯಕನಹಳ್ಳಿಯನ್ನು ವಿರೂಪಾಕ್ಷ ದೇವರ ಸೇವೆಗೆಂದು ದಾನ ಮಾಡಿದ ವಿಷಯ ತಿಳಿಸುತ್ತದೆ.

ವಿಪ್ರೊರೀ, 1988-91, ಸಂ. 1.

ಸಂ. 71

ರಾಯ ಕಾಲುವೆಯ ದಂಡೆಯ ಮೇಲೆ 20ನೇ ಕಿ.ಮೀ. ಕಲ್ಲಿನ ಹತ್ತಿರ ಸಣ್ಣ ಬಂಡೆಗಲ್ಲಿನ ಕೆಳಗಿರುವ ಸಣ್ಣ ದೇವಸ್ಥಾನದ ಹತ್ತಿರವಿರುವ ಬಂಡೆಯ ಮೇಲೆ (ನಕಾಶೆ M)

--

15-16ನೇ ಶತಮಾನ

ಕನ್ನಡ

ಹಾಳಾಗಿದೆ. ಕ್ರಯ ಪತ್ರದ ಉಲ್ಲೇಖವಿದೆ. ಕಾಳಗಟ್ಟಿ, ಅಚುತಾಪುರ, ವಿರೂಪಾಪುರ, ತಿರುಮಲದೇವ, ಮಲಿದೇವ, ಹೊನ್ನಬೋವ, ಮುಮ್ಮಡಿಬೋವ ಮುಂತಾದವರ ಉಲ್ಲೇಖವಿದೆ.

ವಿಪ್ರೊರೀ, 1991-92, ಸಂ. 1.

ಸಂ. 72

ಅದೇ ಸ್ಥಳದಲ್ಲಿ ಕಾಲುವೆಯ ಎಡದಂಡೆಯ ಹತ್ತಿರ ಗುಂಡಿನ ಮೇಲೆ (ನಕಾಶೆ M)

--

15-16ನೇ ಶತಮಾನ

ಕನ್ನಡ

ಮಯಿಲಾರ ದೇವರ ಮಾನ್ಯದ (ಭೂಮಿಯ) ಪ್ರಸ್ತಾಪವಿದೆ.

ವಿಪ್ರೊರೀ, 1991-92, ಸಂ. 2.

ಸಂ. 73

ಕಡಿರಾಮಪುರದಲ್ಲಿ ಮುಸ್ಲಿಮ ಗೋರಿಗಳ ಹತ್ತಿರ ಮುಖ್ಯ ರಸ್ತೆಯ ಪೂರ್ವಕ್ಕೆ ಹೊಲದಲ್ಲಿಯ ಕಲ್ಲಿನ ಮೇಲೆ (ನಕಾಶೆ M)

--

15-16ನೇ ಶತಮಾನ

ಕನ್ನಡ

ಸುಲ್ತಾನ ಸಯೀದ ಪಿರಿಗೆ ಬಾಬಯನ ಗುಡಿ (ಗೋರಿ?)ಯ ಮೇರೆ ಕಲ್ಲಿನ ಬಗ್ಗೆ ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 150.

ಸಂ. 74

ಕಡಿರಾಮಪುರದ ದಕ್ಷಿಣಕ್ಕೆ ಮುಖ್ಯರಸ್ತೆಯ ಪಶ್ಚಿಮಕ್ಕೆ ಶ್ರೀ ವಾಸಪ್ಪನವರ ಕಬ್ಬಿನ ಗದ್ದೆಯಲ್ಲಿ ಮೇಲೆ ನಂದಿಯ ಉಬ್ಬು ಶಿಲ್ಪವುಳ್ಳ ಕಲ್ಲಿನ ಮೇಲೆ (ನಕಾಶೆ M)

ವಿಜಯನಗರ, ಹರಿಹರ

14ನೇ ಶತಮಾನ

ಕನ್ನಡ

ಅರಸನು ಶಿವರಾತ್ರೆ ವಿರ್ಪ:ಸ್ಯನಿಗೆ ದಾನವಾಗಿ ಕೊಟ್ಟ ಭೂಮಿಯನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1984-87, ಸಂ. 151.

ಸಂ. 75

ಕಡಿರಾಮಪುರದ ನೈರುತ್ಯಕ್ಕೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಶಿಥಿಲವಾದ ಅನಂತಶಯನ ದೇವಸ್ಥಾನದ ಹತ್ತಿರ ಬಂಡೆಗಲ್ಲಿನ ಮೇಲೆ (ನಕಾಶೆ M)

ವಿಜಯನಗರ, ಕೃಷ್ಣರಾಯ

ಶಕ 1435, ಶ್ರೀಮುಖಿ, ಚೈತ್ರ ಶು. 5 = ಕ್ರಿ.ಶ. 1513, ಮಾರ್ಚ್ 12, ಶನಿವಾರ

ಕನ್ನಡ

ಅರಸನು ತನ್ನ ತಂದೆ ನರಸನಾಯಕವೊಡೆಯ ಮತ್ತು ತಾಯಿ ನಾಗಾಜದೇವಿಯವರಿಗೆ ಪುಣ್ಯವಾಗಲೆಂದು ಪ್ರಸನ್ನ ವಿರೂಪಾಕ್ಷದೇವರ ಪೂಜೆಗೆ ಕನ್ನಕಿಯಕಟೆ ಗ್ರಾಮವನ್ನು ದಾನ ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 152.

ಹಂಪೆ

ಸಂ. 76

ನದಿ ದಂಡೆಯ ಮೇಲೆ ವಿಠಲ ದೇವಸ್ಥಾನದ ಈಶಾನ್ಯ ದಿಕ್ಕಿಗೆ ವೈಷ್ಣವ ದೇವಸ್ಥಾನದ ಪೂರ್ವ ಗೋಡೆಯ ಮೇಲೆ (ನಕಾಶೆ NCm-n)

--

15-16ನೇ ಶತಮಾನ

ಕನ್ನಡ

''ಬಂಕಾಪುರದ ಶಂಕರನಾರಾಯಣ'' ಎಂದು ಬರೆಯಲಾಗಿದೆ.

ವಿಪ್ರೊರೀ, 1983-84, ಸಂ. 57.

ಸಂ. 77

ವಿಠಲ ದೇವಸ್ಥಾನದ ವಾಯುವ್ಯ ದಿಕ್ಕಿಗಿರುವ ತಿರುಮಂಗೈ ಆಳ್ವಾರ್ ದೇವಸ್ಥಾನದ ಪೂರ್ವ ಗೋಡೆಯ ಮೇಲೆ (ನಕಾಶೆ NCv)

ವಿಜಯನಗರ, ಸದಾಶಿವದೇವ

ಶಕ 1483, ರೌದ್ರಿ, ಫಾಲ್ಗುಣ ಶು. 5 = ಕ್ರಿ.ಶ. 1561, ಫೆಬ್ರವರಿ 19 (ಶಕ 1482)

ತೆಲುಗು

ಓಬುಳರಾಜುವಿನ ಮಗ ಕುರುಚೇಟಿ ಶ್ರೀರಂಗರಾಜು ಮತ್ತು ಇನ್ನೊಬ್ಬ ವ್ಯಕ್ತಿಯ (ಹೆಸರು ಅಳಿಸಿದೆ) ಮಧ್ಯೆ ಆದ ಒಪ್ಪಂದದ ದಾಖಲೆ. ಈ ಒಪ್ಪಂದದ ಪ್ರಕಾರ ಎರಡನೆಯ ವ್ಯಕ್ತಿಯು ಒಂದು ನಿರ್ದಿಷ್ಟ ಪ್ರಮಾಣದ ಭೂಮಿಯನ್ನು ಸಮತಲ ಮಾಡಿ ಕೃಷಿಗೆ ಯೋಗ್ಯವನ್ನಾಗಿ ಮಾಡುತ್ತಾನೆ. ಅಲ್ಲದೆ ಪ್ರತಿವರ್ಷ ಒಂದು ಘಟ್ಟಿ ವರಹವನ್ನು ವಿಠಲೇಶ್ವರ ದೇವರ ಭಂಡಾರಕ್ಕೆ ಮತ್ತು ಬೆಳೆಯಲ್ಲಿ ಕಾಲುಭಾಗವನ್ನು ದಾನಿಗೆ ಕೊಡಬೇಕೆಂಬ ನಿಯಮವನ್ನು ವಿಧಿಸುತ್ತಾನೆ. ಪ್ರಥಮ ಏಕಾದಶಿ ದಿನದಂದು ತಿರುಮಂಗೈ ಆಳ್ವಾರ ದೇವಸ್ಥಾನಕ್ಕೆ ತೋಟವನ್ನು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 50; ಆ್ಯರಿಸೌಇಎ, 1904, ಸಂ. 15; ಸೌಇಇ, IV, ಸಂ. 279; XVI, ಸಂ. 25.

ಸಂ. 78

ಅದೇ ದೇವಸ್ಥಾನದ ಪೂರ್ವ ದಿಕ್ಕಿನ ಮತ್ತೊಂದು ಗೋಡೆಯ ಮೇಲೆ (ನಕಾಶೆ NCv)

ವಿಜಯನಗರ, ಸದಾಶಿವದೇವ

ಶಕ 1478, ನಳ, ಆಷಾಢ ಶು. 12, ಗು(ರುವಾರ) = ಕ್ರಿ.ಶ. 1556, ಶುಕ್ರವಾರ (ಗುರುವಾರವಲ್ಲ, ಅನಲ ಸಂವತ್ಸರ)

ತೆಲುಗು

ಆತ್ರೇಯ ಗೋತ್ರದ ಮಹಾಮಂಡಲೇಶ್ವರ ರಾಮರಾಜು ಕೊನೇಟಯ್ಯದೇವ ಮಹಾರಾಜುವಿನ ಮಗ ಅವುಬಲರಾಜು, ವಿಠಲೇಶ್ವರ ದೇವಸ್ಥಾನದ ವಾಯುವ್ಯ ದಿಕ್ಕಿಗೆ, ಪ್ರಾಕಾರದ ಹೊರಗೆ, ತಿರುಮಂಗಯಾಳ್ವಾರ ದೇವರಿಗೆ ಗರ್ಭಗೃಹ, ಶುಕನಾಸಿ, ಅಂತರಾಳಿಕ, ರಂಗಮಂಟಪಗಳನ್ನೊಳಗೊಂಡ ದೇವಸ್ಥಾನವನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಅಲ್ಲದೆ ಅದೇ ವ್ಯಕ್ತಿ ದೇವರ ಸೇವೆಗೆ ಕೊಪ್ಪಳ ಸೀಮೆಯಲ್ಲಿನ ಅಬ್ಬಿಗೆರೆ, ಯಿಲಿಕಂಟ್ಟಿ ಸೀಮೆಯಲ್ಲಿನ ಕೆಚ್ಚಿನದೋಣಿ ಮತ್ತು ವಿಠಲಾಪುರ ಎಂಬ ಮೂರು ಗ್ರಾಮಗಳನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 51; ಸೌಇಇ, IV, ನಂ. 280.

ಸಂ. 79

ತಳವಾರಘಟ್ಟದ ಹತ್ತಿರದ ಮಂಟಪದ ಕಂಬದ ಮೇಲೆ (ನಕಾಶೆ NDy)

--

15-16ನೇ ಶತಮಾನ

ಕನ್ನಡ

ಚೆಮ್ಮುರಿಸೆಟ್ಟಿಯ ಮಗ ಮಾರಪಸೆಟ್ಟಿಯು 100 ಪ್ರತಾಪ ಗದ್ಯಾಣಕ್ಕೆ ಒಂದು ವೃತ್ತಿಯನ್ನು ಕೊಂಡು ಅದನ್ನು ಬಸವರಾಜ ದೇವರಿಗೆ ದಾನವಾಗಿ ಕೊಟ್ಟಿದ್ದನ್ನು ದಾಖಲಿಸುತ್ತದೆ.

ವಿಪ್ರೊರೀ, 1984-87, ಸಂ. 114.

ಸಂ. 80

ಅದೇ ಮಂಟಪದ ಎದುರಿಗೆ ಮೇಲೆ ನದಿಯ ಶಿಲ್ಪವುಳ್ಳ ಕಲ್ಲಿನ ಮೇಲೆ (ನಕಾಶೆ NDy)

--

15-16ನೇ ಶತಮಾನ

ಕನ್ನಡ
ಸಿಂಧಘಟ್ಟದ ಎರಳಯನಾಯಕನು ನಂಜಯದೇವರಿಗೆ ಭೂಮಿ ದಾನಮಾಡಿದ್ದನ್ನು ತಿಳಿಸುತ್ತದೆ.
ವಿಪ್ರೊರೀ, 1984-87, ಸಂ. 115.

ಸಂ. 81

ವಿರೂಪಾಕ್ಷ ದೇವಸ್ಥಾನದ ವಾಯುವ್ಯ ದಿಕ್ಕಿಗೆ ನದಿಯ ದಂಡೆಯ ಮೇಲೆ ಹಳೆಯ ಸ್ನಾನಘಟ್ಟದ ಹತ್ತಿರ ಒಂದು ಮಂಟಪದ ಎದುರಿಗೆ ಬಂಡೆಯ ಮೇಲೆ (ನಕಾಶೆ NFq)
--
ವಿಜಯ, ಚೈತ್ರ ಶು. 5
ತೆಲುಗು
ಬೋಜಸೆಟ್ಟಿಯ ಮಗ ಸಿರಿಗಿಸೆಟ್ಟಿಯ ಹೆಂಡತಿ ಮಾಟಮ್ಮನು ಹಂಪೆಯಲ್ಲಿ ಉಯ್ಯಾಲೆಗಾಗಿ ಕಂಬವನ್ನು ನಿಲ್ಲಿಸಿದ್ದನ್ನು ತಿಳಿಸುತ್ತದೆ.
ವಿಪ್ರೊರೀ, 1983-84, ಸಂ. 73.

ಸಂ. 82

ಅದೇ ಸ್ಥಳದಲ್ಲಿ ವಿದ್ಯಾರಣ್ಯ ಮಂಟಪದ ಪಶ್ಚಿಮಕ್ಕೆ ಒಂದು ಸಣ್ಣ ಗುಡಿಯ ಗೋಡೆಯ ಮೇಲೆ (ನಕಾಶೆ NFq)
--
15-16ನೇ ಶತಮಾನ
ಕನ್ನಡ
ಕಾಳಹಸ್ತಿಯ ರಾಮಭಟ್ಟನ ಮಗ ಈಶ್ವರತೀರ್ಥನ ಉಲ್ಲೇಖವಿದೆ.
ವಿಪ್ರೊರೀ, 1984-87, ಸಂ. 8.

ಸಂ. 83

ಅದೇ ಸ್ಥಳದಲ್ಲಿ ವಿದ್ಯಾರಣ್ಯ ಮಂಟಪದಲ್ಲಿ ಗುಂಡಿನ ಮೇಲೆ (ನಕಾಶೆ NFq)
--
15-16ನೇ ಶತಮಾನ
ಕನ್ನಡ ಮತ್ತು ಸಂಸ್ಕೃತ, ನಾಗರಿ
ಶ್ರೀ ನೀಲಕಂಠ ಸರಸ್ವತಿ ಶ್ರೀಪಾದರು ವಿದ್ಯಾರಣ್ಯ ಮಂಟಪವನ್ನು ಕಟ್ಟಿಸಿದ ವಿಷಯ ತಿಳಿಸುತ್ತದೆ.
ವಿಪ್ರೊರೀ, 1984-87, ಸಂ. 9.

ಸಂ. 84

ಅದೇ ಸ್ನಾನಘಟ್ಟದಲ್ಲಿ ಒಂದು ಮಂಟಪದಲ್ಲಿ ಕಂಬದ ಮೇಲೆ (ನಕಾಶೆ NFq)
--

ಶಕ 1425, ಈಶ್ವರ = ಕ್ರಿ.ಶ. 1517 (ಶಕ 1439)

ಕನ್ನಡ

ಹುಲಿಗೆಯ ದೇವಯ್ಯನ ಮಂಟಪವೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 10.

ಸಂ. 85

ಅದೇ ಸ್ನಾನಘಟ್ಟದಲ್ಲಿ ನದಿಯಲ್ಲಿ ಗುಂಡಿನ ಮೇಲೆ (ನಕಾಶೆ NFq)

--

15-16ನೇ ಶತಮಾನ

ಕನ್ನಡ

ಚಾಮುಂಡೇಶ್ವರ ಲಿಂಗದ ಉಲ್ಲೇಖವಿದೆ.

ವಿಪ್ರೊರೀ, 1984 87, ಸಂ. 11.

ಸಂ. 86

ಅದೇ ಸ್ನಾನಘಟ್ಟದಲ್ಲಿ ನದಿಯಲ್ಲಿ ಗುಂಡಿನ ಮೇಲೆ (ನಕಾಶೆ NFq)

--

15-16ನೇ ಶತಮಾನ

ಕನ್ನಡ, ನಾಗರಿ

ರಾಮ[ಚಂ]ದ್ರದೇವರ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 12.

ಸಂ. 87

ಅದೇ ಸ್ನಾನಘಟ್ಟದಲ್ಲಿ ಶಿಲ್ಪಗಳಿರುವ ಬಂಡೆಯ ಮೇಲೆ (ನಕಾಶೆ NFq)

--

15-16ನೇ ಶತಮಾನ

ಕನ್ನಡ

ವಿರೂಪಾಕ್ಷದೇವರ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 13.

ಸಂ. 88

ಅದೇ ಬಂಡೆಯ ಮೇಲೆ ಲಿಂಗ ಮತ್ತು ನಂದಿಯ ಶಿಲ್ಪಗಳ ಮೇಲೆ (ನಕಾಶೆ NFq)

--

15-16ನೇ ಶತಮಾನ
ಕನ್ನಡ
ವಿರೂಪಾಕ್ಷದೇವರ ಸನ್ನಿಧಿ ಮತ್ತು ಗಂಗಾಧರಲಿಂಗದ ಉಲ್ಲೇಖವಿದೆ.
ವಿಪ್ರೊರಿೀ, 1984-87, ಸಂ. 14.

ಸಂ. 89

ಅದೇ ಶಾಸನದ ಕೆಳಗೆ (ನಕಾಶೆ NFq)
--
15-16ನೇ ಶತಮಾನ
ಸಂಸ್ಕೃತ, ನಾಗರಿ
ವೀರಭದ್ರಲಿಂಗ ಮತ್ತು ವಿರೂಪಾಕ್ಷದೇವರ ಉಲ್ಲೇಖವಿದೆ.
ವಿಪ್ರೊರಿೀ, 1984-87, ಸಂ. 15.

ಸಂ. 90

ಅದೇ ಬಂಡೆಯ ಮೇಲೆ ಒಬ್ಬ ಭಕ್ತೆಯ ಶಿಲ್ಪದ ಬದಿಗಳಲ್ಲಿ (ನಕಾಶೆ NFq)
--
15-16ನೇ ಶತಮಾನ
ತೆಲುಗು
ವೀರಭದ್ರಲಿಂಗದ ಉಲ್ಲೇಖವಿದೆ.
ವಿಪ್ರೊರಿೀ, 1984-87, ಸಂ. 16.

ಸಂ. 91

ಅದೇ ಸ್ನಾನಘಟ್ಟದ ಮತ್ತೊಂದು ಬಂಡೆಯ ಮೇಲೆ (ನಕಾಶೆ NFr)
--
15-16ನೇ ಶತಮಾನ
ಕನ್ನಡ
ಅಳಿಸಿಹೋಗಿದೆ. ...ನೇಶ್ವರ ದೇವರ ಬಗ್ಗೆ ತಿಳಿಸುತ್ತದೆ.
ವಿಪ್ರೊರಿೀ, 1984-87, ಸಂ. 17.

ಸಂ. 92

ಅದೇ ಸ್ನಾನಘಟ್ಟದಲ್ಲಿ ನದಿಯಲ್ಲಿ ಒಂದು ಗುಂಡಿನ ಮೇಲೆ (ನಕಾಶೆ NFr)
--

ಶಕ 1454, ಮಾಘ ಶು. 13, ಶುಕ್ರವಾರ = ಕ್ರಿ.ಶ. 1533, ಫೆಬ್ರವರಿ 7

ಕನ್ನಡ

ಬ್ರಾಹ್ಮಣಪಲ್ಲಿಯ ತಿಮ್ಮಯ್ಯನು ನಾಗಭೂಷಣ ಲಿಂಗವನ್ನು ಮಾಡಿಸಿದನೆಂದು ತಿಳಿಸುತ್ತದೆ.

ವಿಪ್ರೊರಿ, 1984-87, ಸಂ. 18.

ಸಂ. 93

ಅದೇ ಬಂಡೆಯ ಮೇಲೆ (ನಕಾಶೆ NFr)

--

15-16ನೇ ಶತಮಾನ

ಕನ್ನಡ

ಅಳಿಸಿಹೋಗಿದೆ. ದಮೂರ ಗ್ರಾಮದ ಉಲ್ಲೇಖವಿದೆ.

ವಿಪ್ರೊರಿ, 1984-87, ಸಂ. 19.

ಸಂ. 94

ಅದೇ ಸ್ಥಳದಲ್ಲಿ ಒಂದು ಗುಂಡಿನ ಮೇಲೆ (ನಕಾಶೆ NFr)

--

15-16ನೇ ಶತಮಾನ

ಕನ್ನಡ

ವಿರೂಪಾಕ್ಷ ದೇವರ ಪಾದಗಳ ಉಲ್ಲೇಖವಿದೆ. ಅಲ್ಲದೆ ಈ ಸ್ಥಳಕ್ಕೆ ಬಂದು ಪಾದಗಳನ್ನು ಪೂಜೆ ಮಾಡದವರಿಗೆ ಶಾಪವನ್ನು ವಿಧಿಸಿದ ವಿಷಯವನ್ನು ತಿಳಿಸುತ್ತದೆ.

ವಿಪ್ರೊರಿ, 1984 87, ಸಂ. 20.

ಸಂ. 95

ಅದೇ ಸ್ಥಳದಲ್ಲಿ ಇನ್ನೊಂದು ಗುಂಡಿನ ಮೇಲೆ (ನಕಾಶೆ NFr)

--

15-16ನೇ ಶತಮಾನ

ಕನ್ನಡ

ಕಾಶ್ಯಪಗೋತ್ರದ ಹೊನ್ನಪ ಮತ್ತು ವಿರೂಪಾಕ್ಷದೇವರ ಬಗ್ಗೆ ತಿಳಿಸುತ್ತದೆ.

ವಿಪ್ರೊರಿ, 1984-87, ಸಂ. 21.

ಸಂ. 96

ಅದೇ ಗುಂಡಿನ ಹತ್ತಿರ ಮತ್ತೊಂದು ಗುಂಡಿನ ಮೇಲೆ (ನಕಾಶೆ NFr)

--

15-16ನೇ ಶತಮಾನ

ಕನ್ನಡ

ಅಳಿಸಿಹೋಗಿದೆ. ತಿಮ್ಮನ ಉಲ್ಲೇಖವಿದೆ.

ವಿಪ್ರೊರಿೀ, 1984-87, ಸಂ. 22.

ಸಂ. 97

ವಿರೂಪಾಕ್ಷ ದೇವಸ್ಥಾನದ ಉತ್ತರಕ್ಕೆ ದುರ್ಗಾ ಗುಡಿಯ ಬಲಗಡೆ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ NFw)

-, ಕಲಿದೇವರಸ

ಶಕ 1121, ಸಿದ್ಧಾರ್ಥಿ = ಕ್ರಿ.ಶ. 1199

ಕನ್ನಡ

ಪಂಪಾತೀರ್ಥವು ಬಲ್ಲಕುಂದೆನಾಡಿಗೆ ಸೇರಿದ ದೊರವದಿನಾಡಿನಲ್ಲಿತ್ತೆಂಬುದನ್ನು ತಿಳಿಸುತ್ತದೆ. ಕುರುಗೋಡು ಬಲ್ಲಕುಂದೆನಾಡಿನ ಮುಖ್ಯ ಪಟ್ಟಣವಾಗಿತ್ತು. ಕಲಿದೇವರಸನು ಕುರುಗೋಡಿನಲ್ಲಿ ಆಳುತ್ತಿದ್ದು, ಅವನ ಸಾಮಂತ ಮಾದೆಯನಾಯಕನು ಮತಂಗ ಪರ್ವತವನ್ನು ಆಳುತ್ತಿದ್ದನು. ಚೌಡಯ್ಯನೆಂಬುವನು ಪಂಪಾದೇವಿಗೆ ಕಳಸವನ್ನು ಮಾಡಿಸಿ ಕೊಟ್ಟು, ಪಂಪಾ, ಬ್ರಹ್ಮೇಶ ಮತ್ತು ಭೈರವದೇವರ ದೇವಸ್ಥಾನಗಳಿಗೆ ಸುಣ್ಣ ಬಳಿಸಿ, ಘಂಟೆ, ಅಡ್ಡಣಿಗೆ, ಆರತಿ, ಧೂಪಘಟ, ಪರ್ಯಣ, ಕಲಶ ಮುಂತಾದವುಗಳನ್ನು ದಾನ ಮಾಡಿದ ವಿಷಯ ತಿಳಿಸುತ್ತದೆ. ಅದೇ ವ್ಯಕ್ತಿ ವಿರೂಪಾಕ್ಷ, ಹಂಪಾದೇವಿ ಮತ್ತು ಭೈರವ ದೇವರ ಸೇವೆಗೆ ಭೂಮಿ ದಾನ ಮಾಡಿದ ವಿಷಯ ಮತ್ತು ವಿರೂಪಾಕ್ಷ ದೇವರ ಬಲಕ್ಕೆ ಇರುವ ಸತ್ರಸಾಲೆಯಲ್ಲಿ ಬ್ರಾಹ್ಮಣರ ಭೋಜನಕ್ಕೆ ವ್ಯವಸ್ಥೆ ಮಾಡಿದ ವಿಷಯ ಮತ್ತು ಹೆಗ್ಗಡೆ ರೇಚಯ್ಯನು ಪ್ರತಿಷ್ಠಾಪಿಸಿದ ಇಮ್ಮಡಿ ರಾಚಮಲ್ಲೇಶ್ವರ ದೇವರಿಗೆ ಭೂಮಿದಾನ ಕೊಟ್ಟ ವಿಷಯ ತಿಳಿಸುತ್ತದೆ. ಈ ದಾನದಲ್ಲಿ ಈ ದೇವಸ್ಥಾನಗಳ ಜೀರ್ಣೋದ್ಧಾರಕ್ಕೂ ಅವಕಾಶ ಮಾಡಲಾಯಿತೆಂದೂ ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 31; ಸೌಇಇ, IV, ಸಂ. 260.

ಸಂ. 98

ವಿರೂಪಾಕ್ಷ ದೇವಸ್ಥಾನದಲ್ಲಿ ಉತ್ತರ ದಿಕ್ಕಿನ ಬಾಗಿಲಿನಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ NFw)

ಹೊಯ್ಸಳ, ಸೋಮೇಶ್ವರದೇವ

ಶಕ 1159, ದುರ್ಮುಖಿ, ಪುಷ್ಯ ಬ. 11, ಏಕಾದಶಿ, ಗುರುವಾರ, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1236, ಡಿಸೆಂಬರ್ 25, ಗುರುವಾರ (ಶಕ 1158)

ಸಂಸ್ಕೃತ, ಕನ್ನಡ

ಅಳಿಸಿಹೋಗಿದೆ. ಅರಸನು ವಿರೂಪಾಕ್ಷ ದೇವಸ್ಥಾನಕ್ಕೆ ಮತ್ತು ದೇವಸ್ಥಾನದ ಸತ್ರದಲ್ಲಿ ಬ್ರಾಹ್ಮಣರ ಭೋಜನಕ್ಕೆ ಹಣದ ಆದಾಯವನ್ನು ದಾನವಾಗಿ ಕೊಟ್ಟ ವಿಷಯ ತಿಳಿಸುತ್ತದೆ.

ಆ್ಯರಿಇಎ, 1934-35, ಸಂ. ಬಿ 355.

ಸಂ. 99

ಅದೇ ಸ್ಥಳದಲ್ಲಿ ನಿಲ್ಲಿಸಿದ ಇನ್ನೊಂದು ಕಲ್ಲಿನ ಮೇಲೆ (ನಕಾಶೆ NFw)

ವಿಜಯನಗರ, ಹರಿಹರ

ಶಕ 1301, ಸಿದ್ಧಾರ್ಥಿ, ಜ್ಯೇಷ್ಠ, ಮಂಗಳವಾರ, ಚಂದ್ರ ಗ್ರಹಣ = ಕ್ರಿ.ಶ. 1379.

ಸಂಸ್ಕೃತ, ಕನ್ನಡ

ಅರಸನ ಆಜ್ಞೆಯ ಮೇರೆಗೆ ಮುದ್ದ ದಂಡೇಶನು ವಿರೂಪಾಕ್ಷದೇವರ ದೇವಸ್ಥಾನಕ್ಕೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1934-35, ಸಂ. ಬಿ 356.

ಸಂ. 100

ಅದೇ ಬಾಗಿಲಿನ ಹತ್ತಿರ ಪ್ರಾಕಾರದಲ್ಲಿಯ ಕಂಬದ ಮೇಲೆ (ನಕಾಶೆ NFw)

--

15-16ನೇ ಶತಮಾನ

ಕನ್ನಡ

"ಶ್ರೀ ರಾಯಣರಾಜ" ಎಂದು ಬರೆದಿದೆ.

ವಿಪ್ರೊರೀ, 1983-84, ಸಂ. 37.

ಸಂ. 101

ಅದೇ ದೇವಸ್ಥಾನದಲ್ಲಿ ಮುಖ್ಯ ಗುಡಿಯ ಉತ್ತರದ ಗೋಡೆಯ ಅಧಿಷ್ಠಾನದ ಮೇಲೆ (ನಕಾಶೆ NFw)

--

15-16ನೇ ಶತಮಾನ

ಕನ್ನಡ

"ಶ್ರೀ ಸಾಳುವ ಮನ್ನ(ತ್ರ)ರಿ ನರಸಯ್ಯ" (ಸಾಳುವ ಮಂತ್ರಿ ನರಸಯ್ಯ) ಎಂದು ಬರೆದಿದೆ.

ಫಿಲಿಯೋಜಾ, 1986, ಪು. 161-162.

ಸಂ. 102

ಅದೇ ದೇವಸ್ಥಾನದ ಮುಖ್ಯ ಗುಡಿಯ ದಕ್ಷಿಣ ದ್ವಾರದ ಎರಡೂ ಭಾಗಗಳಲ್ಲಿ (ನಕಾಶೆ NFw)

ವಿಜಯನಗರ, ಕೃಷ್ಣರಾಯ ಮಹಾರಾಯ

ಶಕ 1435, ಶ್ರೀಮುಖ, ಆಷಾಢ, ಶು. 5 = ಕ್ರಿ.ಶ. 1513, ಜೂನ್ 8, ಬುಧವಾರ

ಕನ್ನಡ

ಅರಸನು ತನ್ನ ತಂದೆ ನರಸಣನಾಯಕ ಒಡೆಯ ಮತ್ತು ತಾಯಿ ನಾಗಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ವಿರೂಪಾಕ್ಷ ದೇವರ ಪಕ್ಷೋತ್ಸಾಹ, ಮಾಸೋತ್ಸಾಹ ಮತ್ತು ಸಂವತ್ಸರೋತ್ಸಾಹಗಳಿಗೆ ಮತ್ತು ಪ್ರತಿ ನಿತ್ಯದ ಪೂಜೆಗೆ ಚನ್ನಿನಾಯಕನಹಳ್ಳಿ, ಕಾಳಗಟ್ಟಿ ದಣಾಯಕಪುರ, ರಾಮಚಂದ್ರಪುರ, ಕಂಚುಮಂತಿನಕುಪೆ, ಅಯೋದಿ, ಹೊನ್ನಾಪುರ, ಮಂಡನೂರು, ದಮ್ಮಾರು, ಭಯಿರದೇವನಹಳ್ಳಿ, ಕಲುಕಂಭ, ಗೋನಹಾಳ, ಗುಂಡೆಗನೂರು, ಪಾಡಿರಾಳ ಮತ್ತು ಮುದಗೆರೆ ಗ್ರಾಮಗಳನ್ನು ದಾನ ಮಾಡಿದನು. ಅಲ್ಲದೆ ಅಮೂಲ್ಯ ಮಣಿಗಳಿಂದ ಅಲಂಕೃತಗೊಂಡ ಚಿನ್ನದ ಒಡವೆಗಳನ್ನು ಚಿನ್ನದ ತಟ್ಟೆ ಮತ್ತು ಬೆಳ್ಳಿಯ ಮತ್ತು ಚಿನ್ನದ ಆರತಿಗಳನ್ನು ದಾನವಾಗಿ ಕೊಟ್ಟನು.

ಆ್ಯರಿಸೌಇಎ, 1922-23, ಸಂ. 1922ರ 714; ಆ್ಯರಿಇಎ., 1934-35, ನಂ. ಬಿ 354; ಸೌಇಇ, IX ii, ಸಂ. 493.

ಸಂ. 103

ಅದೇ ದೇವಸ್ಥಾನದ ರಂಗಮಂಟಪದ ಪೂರ್ವ ಗೋಡೆಯ ಕಲ್ಲಿನ ಮೇಲೆ (ನಕಾಶೆ NFw)

ವಿಜಯನಗರ, (ಕೃಷ್ಣದೇವರಾಯ)

ಶಕ 1432, ಪ್ರಮೋದೂತ, ಕಾರ್ತಿಕ ಶು. 15 = ಕ್ರಿ.ಶ. 1510, ಅಕ್ಟೋಬರ್ 17

ಕನ್ನಡ, ನಾಗರಿ

ನರಸಣನಾಯಕನ ತಾಯಿ ಬುಕ್ಕಾಜಮ್ಮ ಮುದ್ದ[ನ್ನಯ]ಹಳ್ಳಿಯಲ್ಲಿ ಭೂಮಿಯನ್ನು ಕೊಂಡು ವಿರೂಪಾಕ್ಷದೇವರ ದಿನನಿತ್ಯದ ಸೇವೆಗೆ ಹಂಪೆಯ ತಿರುಮಲಭಟ್ಟರ ಮಗ ಸಾಯಿಭಟ್ಟರಿಗೆ ದಾನವಾಗಿ ಕೊಟ್ಟಳು.

ಆ್ಯರಿಇಎ, 1964-65, ಸಂ. ಬಿ 398.

ಸಂ. 104

ಅದೇ ದೇವಸ್ಥಾನದಲ್ಲಿ ಮಹಾರಂಗಮಂಟಪದ ಎದುರಿಗೆ ನಿಲ್ಲಿಸಿದ ಕಲ್ಲಿನ ಮೇಲೆ (ನಕಾಶೆ NFw)

ವಿಜಯನಗರ, ಕೃಷ್ಣರಾಯ

ಶಕ 1430 (ಮುಗಿದ ಮೇಲೆ), ಶುಕ್ಲ, ಮಾಘ ಶು. 14 = ಕ್ರಿ.ಶ. 1510, ಜನವರಿ 24

ಸಂಸ್ಕೃತ, ಕನ್ನಡ; ಕನ್ನಡ

ವಿಜಯನಗರ ಅರಸರ ವಂಶಾವಳಿಯನ್ನು ಕೃಷ್ಣದೇವರಾಯನವರೆಗೆ ತಿಳಿಸುತ್ತದೆ. ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ ಸಿಂಗೆನಾಯಕನಹಳ್ಳಿಯನ್ನು ವಿರೂಪಾಕ್ಷ ದೇವರ ದೇವಸ್ಥಾನಕ್ಕೆ ದಾನ ಕೊಟ್ಟಿದ್ದನ್ನು, ಮಹಾರಂಗಮಂಟಪ ಮತ್ತು ಅದರ ಎದುರಿಗೆ ಗೋಪುರವನ್ನು ಕಟ್ಟಿಸಿ ಮತ್ತು ಅದರ ಎದುರಿಗೆ ದೊಡ್ಡ ಗೋಪುರವನ್ನು ಜೀರ್ಣೋದ್ಧಾರ ಮಾಡಿ ಒಂಬತ್ತು ರತ್ನಗಳಿಂದ ಕೂಡಿದ ಚಿನ್ನದ ಕಮಲ, ಒಂದು ನಾಗಾಭರಣ, ಒಂದು ಚಿನ್ನದ ಪಾತ್ರೆ, ಮತ್ತು 24 ಬೆಳ್ಳಿಯ ದೀಪಗಳನ್ನು ದಾನವಾಗಿ ಕೊಟ್ಟನು.

ಆ್ಯರಿಇಎ, 1889, ಸಂ. 29, ಎಇ, I, ಪು. 361-371; ಸೌಇಇ, IV, ಸಂ. 258.

ಸಂ. 105

ಅದೇ ದೇವಸ್ಥಾನದಲ್ಲಿ ಕೃಷ್ಣದೇವರಾಯ ಗೋಪುರದ ದಕ್ಷಿಣಕ್ಕೆ ಪ್ರಾಕಾರದ ಗೋಡೆಯ ಮೇಲೆ (ನಕಾಶೆ NFw)

--

ವಿರೋಧಿ, ಭಾದ್ರಪದ, ಶು. 1 ಗು(ರುವಾರ) = ಕ್ರಿ.ಶ. 1529, ಆಗಸ್ಟ್ 5

ಕನ್ನಡ

ಕನ್ನಿಸೆಟ್ಟಿ, ಪಿಚಾರಿಸೆಟ್ಟಿ ಮತ್ತು ಇತರರು ವೊಳಕೋಟೆಯಲ್ಲಿ ರೆಮ್ಮುಜಡಿ (ರೆಮ್ಮುದಿಡ್ಡಿ)ಯಲ್ಲಿ ಒಂದು ಖಂಡುಗ ಭೂಮಿಯನ್ನು ತೆಗೆದುಕೊಂಡು ಅದರಲ್ಲಿ ರಾಮಚಂದ್ರ ದೇವಸ್ಥಾನದ ಭಾಗವನ್ನು ಕಳೆದು ಉಳಿದ ಭಾಗವನ್ನು ವಿರೂಪಾಕ್ಷದೇವರಿಗೆ ದಾನವಾಗಿ ಕೊಟ್ಟರು.

ವಿಪ್ರೊರೀ, 1984-87, ಸಂ. 23.

ಸಂ. 106

ಅದೇ ದೇವಸ್ಥಾನದ ದೊಡ್ಡ ಗೋಪುರದ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ NFw)

ವಿಜಯನಗರ, ಕೃಷ್ಣದೇವರಾಯ

ಶಕ 1430 (ಮುಗಿದಮೇಲೆ) ಶುಕ್ಲ, ಮಾಘ ಶು. 14 = ಕ್ರಿ.ಶ. 1510, ಜನವರಿ 24

ಸಂಸ್ಕೃತ, ಕನ್ನಡ; ಕನ್ನಡ

ಶಾಸನ ಸಂ. 104ರ ಪ್ರತಿ.

ಆ್ಯರಿಸೌಇಎ, 1889, ಸಂ. 30; ಸೌಇಇ, IV, ಸಂ. 259.

ಸಂ. 107

ಅದೇ ದೇವಸ್ಥಾನದ ಹತ್ತಿರ ಹೇಮಕೂಟ ದೇವಸ್ಥಾನಗಳ ಇಳಿಜಾರಾದ ಬಂಡೆಯ ಮೇಲೆ (ನಕಾಶೆ NFw)

--

ಶಕ 1328, ವ್ಯಯ, ಶ್ರಾವಣ ಬ. 8, ಶುಕ್ರವಾರ = ಕ್ರಿ.ಶ. 1406, ಆಗಸ್ಟ್ 6

ಕನ್ನಡ

ಅಪೂರ್ಣವಾಗಿದೆ. ಕಾಶ್ಯಪ ಗೋತ್ರ ಮತ್ತು ಋಕ್‌ಶಾಖೆಯ ಸೋಮದಣ್ಣಾಯಕನ ಮಗ ಕಾಚಪ್ಪನು ವಿರೂಪಾಕ್ಷದೇವರ ನಿತ್ಯದ ಮತ್ತು ವಿಶೇಷ ಪೂಜೆಯ ಸೇವೆಗೆ ಭೂಮಿ (?) ದಾನಮಾಡಿದನೆಂದು ತೋರುತ್ತದೆ.

ಆ್ಯರಿಸೌಇಎ, 1922-23, ಸಂ. 1922ರ 700; ಆ್ಯರಿಇಎ, 1975-76, ಸಂ. ಬಿ 107; ವಿಪ್ರೊರೀ, 1983-84, ಸಂ. 13.

ಸಂ. 108

ಅದೇ ಬಂಡೆಯ ಮೇಲೆ ಅದೇ ಸ್ಥಳದಲ್ಲಿ (ನಕಾಶೆ NFw)

ವಿಜಯನಗರ, -

ಖರ, ಪುಷ್ಯ ಶು... (15ನೇ ಶತಮಾನ)

ಕನ್ನಡ

ಹಾಳಾಗಿದೆ. ವೀರಣ ನಾಯಕನು ತನ್ನ ತಂದೆ ಸಂಗಮೇಶನಾಯಕನಿಗೆ ಪುಣ್ಯವಾಗಲೆಂದು ವಿರೂಪಾಕ್ಷ ದೇವರಿಗೆ ಎರಡು ಹರಿವಾಣ ನೈವೇದ್ಯ ಮಾಡುವುದಕ್ಕೆ ಭೂಮಿಯನ್ನು ವಿರೂಪಾಕ್ಷ ದೇವರ ಸ್ಥಾನಿಕರಾದ ಲಿಂಗಣಾರಾಧ್ಯರಿಗೆ ಕೃಷ್ಣರಾಯರ ಸಮಕ್ಷಮದಲ್ಲಿ ಕೊಟ್ಟನು.

ಆ್ಯರಿಇಎ, 1975-76; ಸಂ. ಬಿ 108; ವಿಪ್ರೊರಿ, 1983-84, ಸಂ. 38.

ಸಂ. 109

108ನೇ ಶಾಸನವೇ ಮುಂದುವರಿದಿದೆ (ನಕಾಶೆ NFw)

--

15ನೇ ಶತಮಾನ

ಕನ್ನಡ

ಬಹಳ ಹಾಳಾಗಿದೆ. ಶಾಸನದ ಉದ್ದೇಶ ಸ್ಪಷ್ಟವಾಗಿಲ್ಲ.

ಆ್ಯರಿಇಎ, 1975-76, ಸಂ. ಬಿ 109.

ಸಂ. 110

ಅದೇ ಸ್ಥಳದಲ್ಲಿ ಎರಡಂತಸ್ತಿನ ದ್ವಾರದ ಹತ್ತಿರ ದೀಪಸ್ತಂಭದ ಮೇಲೆ (ನಕಾಶೆ NFw)

--

ಶಕ 1350, ವೈಶಾಖ, ಪೂರ್ಣಿಮ, ಸುರಗುರುದಿವಸ = ಕ್ರಿ.ಶ. 1428, ಏಪ್ರಿಲ್ 29

ಸಂಸ್ಕೃತ, ಕನ್ನಡ

ಮಾಧವಮಾತ್ಯನ ಮಗ ಶಶಿಧರನು ದೀಪಸ್ತಂಭವನ್ನು ನಿಲ್ಲಿಸಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922ರ 699; ವಿಪ್ರೊರಿ, 1984-87, ಸಂ. 24.

ಸಂ. 111

ಅದೇ ಬಾಗಿಲಿನ ಹತ್ತಿರ ಇನ್ನೊಂದು ಭಾಗದಲ್ಲಿ ಸಣ್ಣ ದೇವಸ್ಥಾನದ ಮಂಟಪದಲ್ಲಿ ನೆಲದ ಬಂಡೆಯ ಮೇಲೆ (ನಕಾಶೆ NFw)

--

15-16ನೇ ಶತಮಾನ

ಕನ್ನಡ

"ವೈಶ್ಯ" ಎಂದು ಬರೆದಿದೆ.

ವಿಪ್ರೊರಿ, 1984-87, ಸಂ. 25.

ಸಂ. 112

ಹೇಮಕೂಟದಲ್ಲಿ ಒಂದು ದೇವಸ್ಥಾನದ ಮುಂದೆ ಬಂಡೆಯ ಮೇಲೆ (ನಕಾಶೆ NFw)

--

ಶಕ 1416, ಆನಂದ, ಶ್ರಾವಣ ಬ. 10, ಆ(ದಿವಾರ) = ಕ್ರಿ.ಶ. 1494, ಜುಲೈ 27, ಭಾನುವಾರ

ತೆಲುಗು

ತುಂಗಭದ್ರಾ ನದಿ ದಂಡೆಯ ಮೇಲೆ ಭಾಸ್ಕರ ಕ್ಷೇತ್ರದಲ್ಲಿರುವ ಪಂಪಾ ವಿರೂಪಾಕ್ಷ ದೇವರು, ಯಜುಶಾಖೆ ಮತ್ತು ಭಾರದ್ವಾಜ ಗೋತ್ರದ ಸೂರಪರಾಜು ಅನ್ನಯ್ಯನ ಮಗ ಅನ್ನಯ್ಯನ ಆಯಸ್ಸು, ಆರೋಗ್ಯ ಮತ್ತು ಐಶ್ವರ್ಯ ವೃದ್ಧಿಸಲಿ ಎಂದು ಹಾರೈಸುತ್ತದೆ.

ಆ್ಯರಿಸೌಇಎ. 1889, ಸಂ. 42; ಸೌಇಇ. IV, ಸಂ. 271.

ಸಂ. 113

ಅದೇ ಸ್ಥಳದಲ್ಲಿ ತ್ರಿಕೂಟ ದೇವಸ್ಥಾನದಲ್ಲಿ ಕಂಬದ ಮೇಲೆ (ನಕಾಶೆ NFw)

--

14ನೇ ಶತಮಾನ

ಕನ್ನಡ

ಸಂಗಮೇಶ್ವರ ದೇವರ ಭಕ್ತನಾದ ಮುಮ್ಮಡಿ ಸಿಂಗೆಯನಾಯಕನ ಮಗ ವೀರ ಕಂಪಿಲದೇವನು ತನ್ನ ತಾಯಿ ಮಾದನಾ(ಯ)ಕಿತಿ, (ತನ್ನ ತಂದೆ) ಸಿಂಗೆಯ ನಾಯಕ ಮತ್ತು ಪೆರುಮೆಯ ನಾಯಕನ ನೆನಪಿಗಾಗಿ ಲಿಂಗಗಳನ್ನು ಪ್ರತಿಷ್ಠಾಪಿಸಿದನೆಂದು ತಿಳಿಸುತ್ತದೆ.

ಆ್ಯರಿಇಎ. 1934-35, ಸಂ. ಬಿ 353; ವಿಪ್ರೊರಿ., 1983-84, ಸಂ. 1.

ಸಂ. 114

ಕಮಲಾಪುರ-ಹೊಸಪೇಟೆ ರಸ್ತೆ ಮತ್ತು ವಿರೂಪಾಕ್ಷ ಬಜಾರ ಸೇರುವ ಸ್ಥಳದಲ್ಲಿ ಉತ್ತರಕ್ಕೆ ಇರುವ ಮಂಟಪಗಳ ಸಾಲಿನ ಒಂದು ಮಂಟಪದ ಎದುರಿಗೆ ನಿಲ್ಲಿಸಿದ ಕಲ್ಲಿನ ಮೇಲೆ (ನಕಾಶೆ NFq)

--

15-16ನೇ ಶತಮಾನ

ಕನ್ನಡ

ಮಹಾಮಂತಿನ ಮಠದ ಮಂಟಪದ ಉಲ್ಲೇಖವಿದೆ.

ವಿಪ್ರೊರಿ., 1984-87, ಸಂ. 32.

ಸಂ. 115

ಕೋಟಲಿಂಗದ ಹತ್ತಿರ ರಘುನಂದನ ತೀರ್ಥ ವೃಂದಾವನದ ಎದುರಿಗೆ ಬಂಡೆಯ ಮೇಲೆ (ನಕಾಶೆ NGl)

--

14-15ನೇ ಶತಮಾನ

ಕನ್ನಡ

ಧರ್ಮಭೂಷಣ ಭಟ್ಟಾರಕದೇವರ ಪಾದದ ಉಲ್ಲೇಖವಿದೆ.

ವಿಪ್ರೊರಿ., 1984-87, ಸಂ. 40.

ಸಂ. 116

ಅದೇ ಶಾಸನದ ಹತ್ತಿರ ಇನ್ನೊಂದು ಬಂಡೆಯ ಮೇಲೆ (ನಕಾಶೆ NGh)

--

ಹೇಮಳಂಬಿ, ಆಷಾಡ, ಸಂಕ್ರಾಂತಿ

ಕನ್ನಡ

ಮಯಿಲಾಪುರಿಯ ಹಗರಿದೇವನ ಪಾದದ ಉಲ್ಲೇಖವಿದೆ.

ಏಪ್ರೊರೀ, 1984-87, ಸಂ. 41.

ಸಂ. 117

ತುಂಗಭದ್ರಾ ನದಿಯ ಹತ್ತಿರ ಕೋಟಿಲಿಂಗ ಸ್ಥಳದಲ್ಲಿಯ ದೇವಸ್ಥಾನದಲ್ಲಿ ನಾಮಾಂಕಿತವುಳ್ಳ ಶಿಲ್ಪ (1)ರ ಮೇಲೆ (ನಕಾಶೆ NGm-n)

--

--

ಕನ್ನಡ

''ರಾಯಸ್ತ ರಾಮಚಂದ್ರ ದೀಕ್ಷಿತರು'' ಎಂದು ಬರೆದಿದೆ.

ಆ್ಯರಿಇಎ, 1950-51, ಸಂ. ಬಿ 208; 1957-58, ಸಂ. ಬಿ 194.

ಸಂ. 118

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ (2)ರ ಮೇಲೆ (ನಕಾಶೆ NGm-n)

--

--

ಕನ್ನಡ

''ಸಿಂಗಮ ಸಂಗ್ಯರಮ'' ಎಂದು ಬರೆದಿದೆ.

ಆ್ಯರಿಇಎ, 1950-51, ಸಂ. 209; 1957-58, ಸಂ. ಬಿ 196.

ಸಂ. 119

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ (3)ರ ಮೇಲೆ (ನಕಾಶೆ NGm-n)

--

--

ಕನ್ನಡ

''ಮಂಗರಸರು'' ಎಂದು ಬರೆದಿದೆ.

ಆರ್‍ಇಎ, 1950-51, ಸಂ. ಬಿ 210; 1957-58, ಸಂ. ಬಿ 196.

ಸಂ. 120

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ(4)ರ ಮೇಲೆ (ನಕಾಶೆ NGm-n)

--

--

ಕನ್ನಡ

''ಹಿರಿ ನಾಗರಸರು'' ಎಂದು ಬರೆದಿದೆ.

ಆರ್‍ಇಎ, 1950-51, ಸಂ. ಬಿ 211; 1957-58, ಸಂ. ಬಿ 196.

ಸಂ. 121

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ(5)ರ ಮೇಲೆ (ನಕಾಶೆ NGm-n)

--

--

ಕನ್ನಡ

''ಚಿಕ್ಕ ನಾಗರಸರು'' ಎಂದು ಬರೆದಿದೆ.

ಆರ್‍ಇಎ, 1950-51, ಸಂ. ಬಿ 212; 1957-58, ಸಂ. ಬಿ 196.

ಸಂ. 122

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ (6)ರ ಮೇಲೆ (ನಕಾಶೆ NGm-n)

--

--

ಕನ್ನಡ

''ಕಾಮರಸರು'' ಎಂದು ಬರೆದಿದೆ.

ಆರ್‍ಇಎ, 1950-51, ಸಂ. ಬಿ 213; 1957-58, ಸಂ. ಬಿ 196.

ಸಂ. 123

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ (7)ರ ಮೇಲೆ (ನಕಾಶೆ NGm-n)

--

--

ಕನ್ನಡ

"ರಾಯಸ್ತ ರಾಮಚಂದ್ರ ದೀಕ್ಷಿತರ ನಾಗಪ್ಪನು" ಎಂದು ಬರೆದಿದೆ.

ಆರಿಇಎ, 1950-51, ಸಂ. ಬಿ 214; 1957-58, ಸಂ. ಬಿ 192.

ಸಂ. 124

ಅದೇ ಸ್ಥಳದಲ್ಲಿ ನಾಮಾಂಕಿತ ಶಿಲ್ಪ (8)ರ ಮೇಲೆ (ನಕಾಶೆ NGm-n)

--

--

ಕನ್ನಡ

"ಸೋಮಮ್ಮ" ಎಂದು ಬರೆದಿದೆ.

ಆರಿಇಎ, 1950-51, ಸಂ. ಬಿ 215; 1957-58, ಸಂ. ಬಿ 195.

ಸಂ. 125

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ (9)ರ ಮೇಲೆ (ನಕಾಶೆ NGm-n)

--

--

ಕನ್ನಡ

"ತಿಂಮಂಮ" ಎಂದು ಬರೆದಿದೆ.

ಆರಿಇಎ, 1950-51, ಸಂ. ಬಿ 216; 1957-58, ಸಂ. ಬಿ 195.

ಸಂ. 126

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ (10)ರ ಮೇಲೆ (ನಕಾಶೆ NGm-n)

--

--

ಕನ್ನಡ

"ತಿಂಮಂಮನು" ಎಂದು ಬರೆದಿದೆ.

ಆರಿಇಎ, 1950-51, ಸಂ. ಬಿ 217; 1957-58, ಸಂ. ಬಿ 195.

ಸಂ. 127

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ (11)ರ ಮೇಲೆ (ನಕಾಶೆ NGm-n)

--

--

ಕನ್ನಡ

''ಸೋಮಂಮನು'' ಎಂದು ಬರೆದಿದೆ.

ಆರಿಇಎ, 1950-51, ಸಂ. ಬಿ 218; 1957-58, ಸಂ. ಬಿ 195.

ಸಂ. 128

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ (12)ರ ಮೇಲೆ (ನಕಾಶೆ NGm-n)

--

--

ಕನ್ನಡ

''ರಾಯಸ್ತ ರಾಮಚಂದ್ರ ದೀಕ್ಷಿತರ ಮಗ ನಾಗಪ್ಪನು'' ಎಂದು ಬರೆದಿದೆ.

ಆರಿಇಎ, 1950-51, ಸಂ. ಬಿ 219; 1957-58, ಸಂ. ಬಿ 193.

ಸಂ. 129

ಅದೇ ಸ್ಥಳದಲ್ಲಿ ಇನ್ನೊಂದು ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ (1)ರ ಮೇಲೆ (ನಕಾಶೆ NGm-n)

--

--

ನಾಗರಿ

''ಕೇಸೈವ'' ಎಂದು ಬರೆದಿದೆ.

ಆರಿಇಎ, 1950-51, ಸಂ. ಬಿ 220.

ಸಂ. 130

ಅದೇ ದೇವಸ್ಥಾನದಲ್ಲಿ ನಾಮಾಂಕಿತ ಶಿಲ್ಪ (2)ರ ಮೇಲೆ (ನಕಾಶೆ NGm-n)

--

--

ನಾಗರಿ

ಹಾಳಾಗಿದೆ.

ಆರಿಇಎ, 1950-51, ಸಂ. ಬಿ 221.

ಸಂ. 131

ಕೋದಂಡರಾಮ ದೇವಸ್ಥಾನದ ಎದುರಿಗೆ ತುಂಗಭದ್ರಾ ನದಿಯ ದಂಡೆಯ ಮೇಲೆ ಸಣ್ಣ ಸೀತಾ ದೇವಸ್ಥಾನದ ದಕ್ಷಿಣಕ್ಕಿರುವ ಗುಂಡಿನ ಮೇಲೆ (ನಕಾಶೆ NGn?)

ವಿಜಯನಗರ, ಕೃಷ್ಣರಾಯ

ಶಕ 1436, ಭವ = ಕ್ರಿ.ಶ. 1514

ಸಂಸ್ಕೃತ, ನಾಗರಿ

ಶೇಷದೀಕ್ಷಿತನು ಶಂಕರದೇವರಿಗೆ (ಶಿವನಿಗೆ) ವೃಷಭವನ್ನು ಕೊಟ್ಟನೆಂದು ತಿಳಿಸುತ್ತದೆ.

ಜಏಸೊಇ, VII, ಪು. 76-77.

ಸಂ. 132

ಕೋಟಿಲಿಂಗ ಸ್ಥಳದಲ್ಲಿ ಬಂಡೆಯ ಮೇಲೆ (ನಕಾಶೆ NGn)

--

ಪ್ಲವ, ಫಾಲ್ಗುಣ ಶು. 15, ಶುಕ್ರವಾರ

ಕನ್ನಡ

ದೇವರಸ ಪಂಡಿತರ ಮಗ ಔಬಳಪನ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 42.

ಸಂ. 133

ಅದೇ ಸ್ಥಳದಲ್ಲಿ ಗುಂಡಿನ ಮೇಲೆ (ನಕಾಶೆ NGn)

--

--

ಕನ್ನಡ

ಕೋಟಿಶಂಕರನ ಭಕ್ತ ಚಂದಣನು (ಇಲ್ಲಿಗೆ) ಬಂದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 43.

ಸಂ. 134

ಅದೇ ಬಂಡೆಯ ಮೇಲೆ (ನಕಾಶೆ NGn)

--

--

ಕನ್ನಡ

ವೀರಯನ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 44.

ಸಂ. 135

ಅದೇ ಬಂಡೆಯ ಇನ್ನೊಂದು ಬದಿಗೆ (ನಕಾಶೆ NGn)

--

15-16ನೇ ಶತಮಾನ

ಕನ್ನಡ

ಪ್ರಾತಪಾಟಿ ಬಸವಯ್ಯನ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 45.

ಸಂ. 136

ಅದೇ ಶಾಸನದ ಹತ್ತಿರ ಇನ್ನೊಂದು ಗುಂಡಿನ ಮೇಲೆ (ನಕಾಶೆ NGn)

--

--

ನಾಗರಿ, ಸಂಸ್ಕೃತ

ಮೋನಪನ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 46.

ಸಂ. 137

ಅದೇ ಸ್ಥಳದಲ್ಲಿ ಇನ್ನೊಂದು ಗುಂಡಿನ ಮೇಲೆ (ನಕಾಶೆ NGn)

--

15-16ನೇ ಶತಮಾನ

ಕನ್ನಡ

ತುಂಬ ಹಾಳಾಗಿದೆ. ಒಬ್ಬ ವ್ಯಕ್ತಿಯ ಹೆಸರನ್ನು ಸೂಚಿಸುತ್ತದೆ.

ವಿಪ್ರೊರೀ, 1984-87, ಸಂ. 47.

ಸಂ. 138

ಅದೇ ಸ್ಥಳದಲ್ಲಿ 108 ಲಿಂಗಗಳುಳ್ಳ ಗುಂಡಿನ ಹತ್ತಿರ (ಪಶ್ಚಿಮಕ್ಕೆ) ಇನ್ನೊಂದು ಗುಂಡಿನ ಮೇಲೆ (ನಕಾಶೆ NGn)

--

15-16ನೇ ಶತಮಾನ
ಸಂಸ್ಕೃತ, ಕನ್ನಡ
ಕೋಟಿಶಂಕರನ 108 ಲಿಂಗಗಳಿಗೆ ನಮನಗಳನ್ನು ದಾಖಲಿಸುತ್ತದೆ.
ವಿಪ್ರೊರೀ, 1984-87, ಸಂ. 48.

ಸಂ. 139

ಅದೇ ಗುಂಡಿನ ಹತ್ತಿರ ಲಿಂಗಗಳ ದೊಡ್ಡ ಸಮೂಹವನ್ನು ಹೊಂದಿರುವ ಇನ್ನೊಂದು ಗುಂಡಿನ ಮೇಲೆ (ನಕಾಶೆ NGn)
--
15-16ನೇ ಶತಮಾನ
ಸಂಸ್ಕೃತ, ಕನ್ನಡ
ಕೋಟಿಶಂಕರನ ಸಾವಿರ ಲಿಂಗಗಳಿಗೆ ನಮನಗಳನ್ನು ದಾಖಲಿಸುತ್ತದೆ.
ವಿಪ್ರೊರೀ, 1984 87, ಸಂ. 49.

ಸಂ. 140

ಅದೇ ಬಂಡೆಯ ಮೇಲೆ (ನಕಾಶೆ NGn)
--
15-16ನೇ ಶತಮಾನ
ಕನ್ನಡ
''ಕೋಟಿಶಂಕರ'' ಎಂದು ಬರೆದಿದೆ.
ಆ್ಯರಿಇಎ, 1950-51, ಸಂ. ಬಿ 222; ವಿಪ್ರೊರೀ, 1984-87, ಸಂ. 50.

ಸಂ. 141

ಅದೇ ಸ್ಥಳದಲ್ಲಿ ಇನ್ನೊಂದು ಗುಂಡಿನ ಮೇಲೆ (ನಕಾಶೆ NGn)
--
--
ಕನ್ನಡ
ಚೌಡಪದಾಸನ ಮಗ ಸಂಕಣದಾಸನ ಉಲ್ಲೇಖವಿದೆ.
ವಿಪ್ರೊರೀ, 1984-87, ಸಂ. 51.

ಸಂ. 142

ಅದೇ ಸ್ಥಳದಲ್ಲಿ ಬಂಡೆಯ ಮೇಲೆ (ನಕಾಶೆ NGn)
--

--

ಕನ್ನಡ

ಹಾರಿತಗೋತ್ರದ ಮತ್ತು ಕೋಟಿಶಾನ್ವಯದ ನಾಗಪ್ಪಾರಾಧ್ಯ, ಗೋಪಮ್ಮ ಮತ್ತು ಕೇಶವರ ಉಲ್ಲೇಖವಿದೆ.

ಆೄರಿಇಎ, 1957-58, ಸಂ. ಬಿ 197; ವಿಪ್ರೊರೀ, 1984-87, ಸಂ. 52.

ಸಂ. 143

ಅದೇ ಬಂಡೆಯ ಮೇಲೆ (ನಕಾಶೆ NGn)

--

--

ತೆಲುಗು

''ಚಿನಭಂಡಾರಂ ದೇಮರಸು'' ಎಂದು ಬರೆದಿದೆ.

ವಿಪ್ರೊರೀ, 1984-87, ಸಂ. 53.

ಸಂ. 144

ಅದೇ ಬಂಡೆಯ ಮೇಲೆ (ನಕಾಶೆ NGn)

--

15-16ನೇ ಶತಮಾನ

ಕನ್ನಡ

ವಿಠಲದೇವರನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1984-87, ಸಂ. 54.

ಸಂ. 145

ಅದೇ ಬಂಡೆಯ ಮೇಲೆ (ನಕಾಶೆ NGn)

--

15-16ನೇ ಶತಮಾನ

ಕನ್ನಡ

''ತಿಂಮಪ'' ಎಂದು ಬರೆದಿದೆ.

ವಿಪ್ರೊರೀ, 1984-87, ಸಂ. 55.

ಸಂ. 146

ಅದೇ ಬಂಡೆಯ ಮೇಲೆ (ನಕಾಶೆ NGn)

--

15-16ನೇ ಶತಮಾನ
ಕನ್ನಡ
ವಿರೂಪಾಕ್ಷ ದೇವರನ್ನು ಉಲ್ಲೇಖಿಸುತ್ತದೆ.
ವಿಪ್ರೊರೀ, 1984-87, ಸಂ. 56.

ಸಂ. 147

ಅದೇ ಬಂಡೆಯ ಮೇಲೆ (ನಕಾಶೆ NGn)
--
15-16ನೇ ಶತಮಾನ
ಕನ್ನಡ
ರಾಮಚಂದ್ರದೇವರನ್ನು ಉಲ್ಲೇಖಿಸುತ್ತದೆ.
ವಿಪ್ರೊರೀ, 1984-87, ಸಂ. 57.

ಸಂ. 148

ಅದೇ ಸ್ಥಳದಲ್ಲಿ ನೆಲದ ಬಂಡೆಯ ಮೇಲೆ (ನಕಾಶೆ NGn)
--
15-16ನೇ ಶತಮಾನ
ಕನ್ನಡ
ಕೋಟಿಶಂಕರ ದೇವರಿಗೆ ದಾನ ಕೊಟ್ಟ ವಿಷಯ ತಿಳಿಸುತ್ತದೆ. ತಿಪರಸನು ಸಿಂಘಾರಪುರ ಕೋಟೆಯ ಒಳಗೆ 5 ಕೊಳಗ ಗದ್ದೆ ಮತ್ತು ಕೇಶವಜೀಯನು ನಿಂಬಾಪುರ ಕೋಟೆಯ ಹೊರಗೆ 2 ಕೊಳಗ ಗದ್ದೆಯನ್ನು ದಾನವಾಗಿ ಕೊಟ್ಟದ್ದನ್ನು ತಿಳಿಸುತ್ತದೆ.
ವಿಪ್ರೊರೀ, 1983-84, ಸಂ. 60.

ಸಂ. 149

ಅದೇ ಸ್ಥಳದಲ್ಲಿ ಯಜ್ಞಕುಂಡವಿರುವ ಮಂಟಪದಲ್ಲಿ (ನಕಾಶೆ NGn)
--
--
ಕನ್ನಡ, ನಾಗರಿ
ಕೋಟಿಕಾನ್ವಯ (ಕೌಶಿಕಾನ್ವಯ)ದ ನಾಗಪನ ಉಲ್ಲೇಖವಿದೆ.
ಆರಿಇಎ, 1957-58, ಸಂ. ಬಿ 198.

ಸಂ. 150

ಅದೇ ಸ್ಥಳದಲ್ಲಿ ನೆಲದ ಬಂಡೆಯ ಮೇಲೆ (ನಕಾಶೆ NGn-s)
--

ಶಕ .. 67, (ಬ.. ರಿತು ವಾರಿಧಿ), ಕಾರ್ತ್ತಿಕ ಬ. 8 (15ನೇ ಶತಮಾನ)

ಕನ್ನಡ

ಹಾಳಾಗಿದೆ ಮತ್ತು ಅಳಿಸಿಹೋಗಿದೆ. ದಿನಾಂಕದ ಭಾಗಮಾತ್ರ ಉಳಿದಿದೆ.

ಆ್ಯರಿಇಎ, 1975-76, ಸಂ. ಬಿ 100.

ಸಂ. 151

ಅದೇ ಸ್ಥಳದಲ್ಲಿ ನೆಲದ ಬಂಡೆಯ ಮೇಲೆ (ನಕಾಶೆ NGn-s)

--

ಶೋಭಕೃತ, ಕಾರ್ತ್ತಿಕ ಬ. 8, ಸೋಮವಾರ = ಕ್ರಿ.ಶ. 1482, ನವೆಂಬರ್ 4, ಸೋಮವಾರ

ಕನ್ನಡ

ಹಾಳಾಗಿದೆ. ಸಾಳುವ ತಿಮ್ಮರಸ ಮತ್ತು ಲಕ್ಷುಮಯರ ಉಲ್ಲೇಖವಿದೆ.

ಆ್ಯರಿಇಎ, 1975-76, ಸಂ. ಬಿ 101.

ಸಂ. 152

ನದಿಯ ದಂಡೆಯ ಹತ್ತಿರ ನರಸಿಂಹ ದೇವಸ್ಥಾನದ ಎದುರಿಗೆ ಇಳಿಜಾರಾದ ಬಂಡೆಯ ಮೇಲೆ (ನಕಾಶೆ NGt)

ವಿಜಯನಗರ, ಬುಕ್ಕರಾಯನ ಮಗ ವೀರಹರಿಹರರಾಯ

ಶಕ 1308, ಕ್ಷಯ, ಮಾಘ ಶು. 5, ಗು(ರುವಾರ) = ಕ್ರಿ.ಶ. 1386, ಜನವರಿ 30

ಕನ್ನಡ

ಬಯಿರಿಸೆಟ್ಟಿಯ ಮಗ ಸುಂಕದ ಹಿರಿಯ ತಮ್ಮನು ಪಂಪಾಕ್ಷೇತ್ರದಲ್ಲಿ ನರಸಿಂಹ ದೇವಸ್ಥಾನದ ಪಶ್ಚಿಮ ದಿಕ್ಕಿಗೆ ಕ್ಷೇತ್ರಪಾಲ ಮತ್ತು ಸಂನುಜನಾಥರನ್ನು ಪ್ರತಿಷ್ಠಾಪಿಸಿದ್ದನ್ನು ಮತ್ತು ಶಿವಾಲಯವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1975-76, ಸಂ. ಬಿ 99; ವಿಪ್ರೊರೀ, 1983-84, ಸಂ. 11.

ಸಂ. 153

ಅದೇ ದೇವಸ್ಥಾನದ ಪ್ರಾಕಾರದೊಳಗೆ ಪೂರ್ವಕ್ಕಿರುವ ಬಂಡೆಯ ಮೇಲೆ (ನಕಾಶೆ NGt)

ವಿಜಯನಗರ, ಹರಿಹರ (II)

ಶಕ 1301, ಸಿದ್ಧಾರ್ಥಿ, ಆಷಾಢ ಶು. 10, ಶನಿವಾರ = ಕ್ರಿ.ಶ. 1379, ಜೂನ್ 25

ಕನ್ನಡ

ಚಿಕ್ಕ ಒಡೆಯ, ಸಾಯಣ ಆಯ್ಯ ಮತ್ತು ಅಕ್ಷುದನಾಥ ಒಡೆಯರು ಆಡಳಿತ ನಡೆಸುತ್ತಿರುವ ಸಮಯದಲ್ಲಿ ನಲಾನು ಚಕ್ರವರ್ತಿ ಆಯ್ಯನು ನರಸಿಂಹ ದೇವರಿಗೆ ಮಂಟಪವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 58.

ಸಂ. 154

ಅದೇ ಶಾಸನದ ಪಕ್ಕದಲ್ಲಿ (ನಕಾಶೆ NGt)

--

ಶಕ 1301, ಸಿದ್ಧಾರ್ಥಿ, ಆಷಾಢ ಶು. 10, ಶನಿವಾರ = ಕ್ರಿ.ಶ. 1379, ಜೂನ್ 25

ಕನ್ನಡ

ನಲಾನುಚಕ್ರವರ್ತಿ ಅಯ್ಯನ ತಂದೆ ಸೀರೆಗಾರಿ (?) ಪಂಪಾ ದಂಡೆಯ ಮೇಲಿರುವ ನರಸಿಂಹದೇವರು ಪಸನ್ನವಾದ ಕಾಲಕ್ಕೆ ನಮನಗಳನ್ನು ಸಲ್ಲಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 59.

ಸಂ. 155

ಅದೇ ದೇವಸ್ಥಾನದ ಪ್ರಾಕಾರದೊಳಗೆ ಪೂರ್ವಕ್ಕಿರುವ ಇನ್ನೊಂದು ಬಂಡೆಯ ಮೇಲೆ (ನಕಾಶೆ NGt)

--

ವಿಕೃತಿ, ಭಾದ್ರಪದ ಬ. 10, ಸೋ(ಮವಾರ) = ಕ್ರಿ.ಶ. 1410, ಆಗಸ್ಟ್ 27

ಕನ್ನಡ

ಕೇಶವನಾಯಕ ಮತ್ತು ಗಂಗವನಾಯಕಿತಿಯರ ಮಗ ನಾಗೆಯನಾಯಕನು ಗೋಪಿನಾಥ ಮತ್ತು ಮಹಾಲಕ್ಷ್ಮಿದೇವರಿಗೆ ಮಂಟಪ ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 60.

ಸಂ. 156

ಅದೇ ಶಾಸನದ ಪಕ್ಕದಲ್ಲಿ (ನಕಾಶೆ NGt)

--

ವಿಕೃತಿ, ಭಾದ್ರಪದ ಬ. 10

ಕನ್ನಡ

ಹಾಳಾಗಿದೆ. ಗೋಪಿನಾಥ ಮತ್ತು ಮಹಾಲಕ್ಷ್ಮೀ ದೇವರ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 61.

ಸಂ. 157

ಅದೇ ದೇವಸ್ಥಾನದ ಪ್ರಾಕಾರದಲ್ಲಿ ಬಿದ್ದಿರುವ ದೀಪಸ್ತಂಭದ ಮೇಲೆ (ನಕಾಶೆ NGt)

--

ವ್ಯಯ, ಶ್ರಾವಣ ಶು. 5, ಮಂಗಳವಾರ = ಕ್ರಿ.ಶ. 1406, ಜುಲೈ 20

ಕನ್ನಡ

ಕೇಶವನಾಯಕ ಮತ್ತು ಗಂಗವನಾಯಕಿತಿಯರ ಮಗ ನಾಗೆಯನಾಯಕನು ಗೋಪಿನಾಥದೇವರಿಗೆ ಶಿವಾಲಯ ಕಟ್ಟಿಸಿದ ವಿಷಯ ತಿಳಿಸುತ್ತದೆ.

ವಿಪ್ರೊರಿೀ, 1984-87, ಸಂ. 62.

ಸಂ. 158

ಅದೇ ದೇವಸ್ಥಾನದ ಮುಂದೆ ಇರುವ ಕಲ್ಲಿನ ಮೇಲೆ (ನಕಾಶೆ NGt)

--

15-16ನೇ ಶತಮಾನ

ಕನ್ನಡ

ಹಾಳಾಗಿದೆ. ಮೊದಲನೇ ಸಾಲಿನಲ್ಲಿ ಕಲಿಯುಗ ಎಂದು ಬರೆದಿದೆ. ಬಹುಶಃ ನರಸಿಂ[ಹ*] ದೇವರಿಗೆ ದಾನಕೊಟ್ಟ ವಿಷಯದ ದಾಖಲೆ ಇರಬಹುದು.

ಆ್ಯರಿಇಎ, 1975-76, ಸಂ. ಬಿ 110; ವಿಪ್ರೊರಿೀ, 1984-87, ಸಂ. 63.

ಸಂ. 159

ಅದೇ ದೇವಸ್ಥಾನದ ಪಶ್ಚಿಮಕ್ಕಿರುವ ಬಂಡೆಯ ಮೇಲೆ (ನಕಾಶೆ NGt)

--

15-16ನೇ ಶತಮಾನ

ತೆಲುಗು

ರಾಮರಾಜು ತಿರುಮಲರಾಯನ ಉಲ್ಲೇಖವಿದೆ.

ವಿಪ್ರೊರಿೀ, 1984-87, ಸಂ. 64.

ಸಂ. 160

ಅದೇ ದೇವಸ್ಥಾನದ ದಕ್ಷಿಣಕ್ಕಿರುವ ಬಂಡೆಯ ಮೇಲೆ (ನಕಾಶೆ NGt)

--

15-16ನೇ ಶತಮಾನ

ಕನ್ನಡ

ಭವನಾಸಿಯ ತೀರ್ಥದ ಉಲ್ಲೇಖವಿದೆ.

ವಿಪ್ರೊರಿೀ, 1983-84, ಸಂ. 58.

ಸಂ. 161

ಅದೇ ಬಂಡೆಯ ಮೇಲೆ (ನಕಾಶೆ NGt)

--

15-16ನೇ ಶತಮಾನ

ಕನ್ನಡ

ಚಂದಪನು ನರಸಿಂಹದೇವರಿಗೆ ಸೇವೆ ಸಲ್ಲಿಸಿದ್ದನ್ನು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 59.

ಸಂ. 162

ಅದೇ ದೇವಸ್ಥಾನದ ಹತ್ತಿರವಿರುವ ಕೊಂಡದ ದಂಡೆಯಲ್ಲಿ ಬಂಡೆಯ ಮೇಲೆ (ನಕಾಶೆ NGt)

--

ಶಕ 1321; ಪ್ರಮಾದಿ, ಮಾಘ ಶು. 15 = ಕ್ರಿ.ಶ. 1400, ಜನವರಿ 12

ಕನ್ನಡ

ತುಂಗಭದ್ರಾ ನದಿಯ ದಂಡೆಯ ಮೇಲೆ ಭಾಸ್ಕರ ಕ್ಷೇತ್ರದಲ್ಲಿರುವ ಪಂಪಾಸರಸ್ಸಿನ ಹತ್ತಿರ ಕೇಶವನಾಯಕನ ಮಗ ನಾಗೆಯನಾಯಕನು ಅವನ ತಂದೆಯ ಹೆಸರಿನಲ್ಲಿ ನೀರಿನ ಕೊಂಡ(ಕುಂಡ)ವನ್ನು ಮಾಡಿಸಿ ಅದನ್ನು ನರಸಿಂಹ ದೇವರಿಗೆ ಸಮರ್ಪಿಸಿದನೆಂದು ತಿಳಿಸುತ್ತದೆ. ಅಲ್ಲದೆ ಅವನು ತನ್ನ ತಂದೆ ಕೇಶವನಾಯಕ, ತಾಯಿ ಗಂಗಾದೇವಿ ಮತ್ತು ಮಗ ಗೋಪನ ಹೆಸರಿನಲ್ಲಿ ಕೊಂಡದ ತೀರದಲ್ಲಿ ದೇವರನ್ನು ಪ್ರತಿಷ್ಠಾಪಿಸಿದನೆಂದು ತಿಳಿಸುತ್ತದೆ. ಈ ಎರಡೂ ಧರ್ಮಗಳನ್ನು ನರಸಿಂಹದೇವರಿಗೆ ಸಮರ್ಪಿಸಿದನು.

ವಿಪ್ರೊರೀ, 1983-84, ಸಂ. 12.

ಸಂ. 163

ಕೋದಂಡರಾಮ ದೇವಸ್ಥಾನದ ಪಶ್ಚಿಮಕ್ಕೆ ನದಿಯಲ್ಲಿ ಗಣೇಶ ಮತ್ತು ಹನುಮಂತನ ಶಿಲ್ಪಗಳಿರುವ ಗುಂಡಿನ ಮೇಲೆ (ನಕಾಶೆ NGw)

--

15-16ನೇ ಶತಮಾನ

ಕನ್ನಡ; ಕನ್ನಡ, ನಾಗರಿ

(ಗುಂಡಿನ ಮೇಲೆ ಶಿಲ್ಪಗಳನ್ನು ಕೆತ್ತಿದ ಕೆಲಸವು) ದೇವಣ್ಣನ ಮಗ ಲಖಣ್ಣನದು ಮತ್ತು ಇವರಿಬ್ಬರೂ ವಾರಣಾಸಿಯವರೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 65.

ಸಂ. 164

ಅದೇ ದೇವಸ್ಥಾನದ ಪಶ್ಚಿಮಕ್ಕೆ ಮಂಟಪದ ಮುಂದೆ ನೆಲಕ್ಕೆ ಹಾಕಿದ ಕಲ್ಲಿನ ಮೇಲೆ (ನಕಾಶೆ NGw)

--

15-16ನೇ ಶತಮಾನ

ಕನ್ನಡ

''ಕಟಿಗೆ ಲಿಂಗಪ್ಪ'' ಎಂದು ಬರೆದಿದೆ.

ವಿಪ್ರೊರೀ, 1984-87, ಸಂ. 66.

ಸಂ. 165

ಅದೇ ದೇವಸ್ಥಾನದ ಪಶ್ಚಿಮಕ್ಕೆ ಮಂಟಪದ ಹಿಂಭಾಗದಲ್ಲಿ ದೊಡ್ಡ ಗುಂಡಿನ ಮೇಲೆ (ನಕಾಶೆ NGw)

--

15-16ನೇ ಶತಮಾನ

ಕನ್ನಡ

ವಿಶ್ವಪತಿಯ ವೃಂದಾವನದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 67.

ಸಂ. 166

ಅದೇ ದೇವಸ್ಥಾನದ ಹಿಂಭಾಗದ ಮಂಟಪದಲ್ಲಿ ಬಂಡೆಯ ಮೇಲೆ (ನಕಾಶೆ NGw)

--

--

ಕನ್ನಡ

ನರಸಪನ ಅಣ್ಣ ಗೋಪಾಲಕೃಷ್ಣದಾಸನ ಉಲ್ಲೇಖವಿದೆ.

ಆ್ಯರಿಇಎ, 1957-58, ಸಂ. ಬಿ 199; ವಿಪ್ರೊರೀ, 1984-87, ಸಂ. 70.

ಸಂ. 167

ಅದೇ ಮಂಟಪದಲ್ಲಿ (ನಕಾಶೆ NGw)

--

ವಿಕಾರಿ, ಮಾಘ ಶು. 10

ಸಂಸ್ಕೃತ, ನಾಗರಿ

ಹಾಳಾಗಿದೆ. ಶ್ರೀನಿವಾಸ ಮತ್ತು ಇತರ ವ್ಯಕ್ತಿಗಳ ಹೆಸರುಗಳನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1957-58, ಸಂ. ಬಿ 200.

ಸಂ. 168

ಅದೇ ಮಂಟಪದಲ್ಲಿ (ನಕಾಶೆ NGw)

--

ವಿಕಾರಿ, ಮಾಘ ಶು. 10

ಕನ್ನಡ

ಭೀಮೇಶನ ಮಗ ನರಸಪನು ದೇವರಿಗೆ ಸಲ್ಲಿಸಿದ ಸೇವೆಯ ಬಗ್ಗೆ ತಿಳಿಸುತ್ತದೆ. ನರಸಪನು ಬಹುಶಃ ವಿಠಲೇಶದೇವರ ಭಕ್ತನಾಗಿದ್ದಿರಬೇಕು.

ಆ್ಯರಿಇಎ, 1957-58, ಸಂ. ಬಿ 201; ವಿಪ್ರೊರೀ, 1984-87, ಸಂ. 69.

ಸಂ. 169

ಅದೇ ದೇವಸ್ಥಾನದ ಹತ್ತಿರ ಶಿಥಿಲವಾದ ವಿಷ್ಣು ದೇವಸ್ಥಾನದಲ್ಲಿ ದ್ವಾರದ ಎರಡು ಬದಿಗೆ (ನಕಾಶೆ NGx)

ವಿಜಯನಗರ, ಸದಾಶಿವದೇವ ಮಹಾರಾಯ

ಶಕ 1478, ನಳ, ಕಾರ್ತಿಕ ಶು. 12, ಶು(ಕ್ರವಾರ) = ಕ್ರಿ.ಶ. 1556, ಅಕ್ಟೋಬರ್ 15, ಗುರುವಾರ (ಶುಕ್ರವಾರವಲ್ಲ)

ತೆಲುಗು, ಸಂಸ್ಕೃತ; ತೆಲುಗು

ಕೋದಂಡ ಋಷಿ ಗೋತ್ರದ ಅಪ್ಪಿಸೆಟ್ಟಿಯ ಮೊಮ್ಮಗ ಮತ್ತು ಪಾಪಿಸೆಟ್ಟಿ ಮತ್ತು ಪಾಟಮ್ಮನವರ ಮಗ ತಿರುಮಲಸೆಟ್ಟಿಯು ಚಕ್ರತೀರ್ಥದಲ್ಲಿ ನೆಲೆಸಿದ ವೆಂಕಟೇಶನಿಗೆ ಸಲ್ಲಿಸಿದ ನಮನಗಳನ್ನು ದಾಖಲಿಸುತ್ತದೆ. ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ ಮತ್ತು ಕೋದಂಡರಾಮ ಅವತಾರಗಳನ್ನು ಸ್ತುತಿಸುವ ಅಷ್ಟಕವೂ ಇದೆ.

ಆ್ಯರಿಸೌಇಎ, 1922-23, 1922ರ ಸಂ. 701; ಸೌಇಇ, XVI, ಸಂ. 217.

ಸಂ. 170

ಹಸ್ತಗಿರಿ ರಂಗನಾಥ ದೇವಸ್ಥಾನದ ಎದುರು ಗುಂಡಿನ ಮೇಲೆ (ನಕಾಶೆ NGx)

ವಿಜಯನಗರ, ಸದಾಶಿವರಾಯ

ಶಕ 1481, ಸಿದ್ಧಾರ್ಥಿ, ಪುಷ್ಯ ಶು. 12, ಸ್ಥಿರವಾರ = ಕ್ರಿ.ಶ. 1560, ಜನವರಿ, 12

ಸಂಸ್ಕೃತ, ತೆಲುಗು; ತೆಲುಗು

ಮೂರ್ತಿರಾಜು ವಿಠಲರಾಜು ತನ್ನ ತಂದೆ ಮೂರ್ತಿರಾಜು ಮತ್ತು ತಾಯಿ ತಿರುಮಲಮ್ಮನವರಿಗೆ ಪುಣ್ಯವಾಗಲೆಂದು ಪ್ರಾತ ವಿಠಲ ದೇವರಿಗೆ ಒಂದು ಗ್ರಾಮವನ್ನು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 71.

ಸಂ. 171

ಕೋದಂಡರಾಮ ದೇವಸ್ಥಾನದ ಹತ್ತಿರ ಕಲ್ಲಿನ ತೊಟ್ಟಿಯ ಮೇಲೆ (ನಕಾಶೆ NGw)

--

ವಿಶು, ಭಾದ್ರಪದ ಬ. 11, ಬುಧವಾರ (15-16ನೇ ಶತಮಾನ)

ತೆಲುಗು

ಹಾಳಾಗಿದೆ. ಲಕ್ಷ್ಮಯ್ಯನು ಬಾವಿಯನ್ನು ಕಟ್ಟಿಸಿ ತೋಟವನ್ನು ಬೆಳೆಸಿ, ಅರವಟ್ಟಿಗೆಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, 1922ರ ಸಂ. 702; ವಿಪ್ರೊರೀ, 1984-87, ಸಂ. 68.

ಸಂ. 172

ವಿಠಲ ದೇವಸ್ಥಾನದ ಉತ್ತರ ದಿಕ್ಕಿನ ಗೋಪುರದ ಮೇಲೆ (ನಕಾಶೆ NCv)

ವಿಜಯನಗರ, ಅಚ್ಯುತರಾಯ ಮಹಾರಾಯ

(i) ಶಕ 1480, ಕಾಳಯುಕ್ತಿ, ಫಾಲ್ಗುಣ ಶು. 15 = ಕ್ರಿ.ಶ. 1559, ಫೆಬ್ರವರಿ 22;

(ii) ಶಕ 1460, ವಿಳಂಬಿ, ಭಾದ್ರಪದ (ಬ.) 10 = ಕ್ರಿ.ಶ. 1538, ಸೆಪ್ಟೆಂಬರ್ 18, ಬುಧವಾರ

ಕನ್ನಡ

ಉದ್ದಿ ತಿಮ್ಮಪ್ಪನಾಯಕನ ಮಗ ಚಪರದ ರಾಘವಪ್ಪ ನಾಯಕ ಮತ್ತು ಆತನ ಸಹೋದರ ಅರಸನಿಗೆ ಪುಣ್ಯವಾಗಲೆಂದು ವಿಠಲೇಶ್ವರ ದೇವಸ್ಥಾನದ ಉತ್ತರ ದಿಕ್ಕಿನ ಗೋಪುರದ ಕಳಶಗಳನ್ನು ಪ್ರತಿಷ್ಠಾಪಿಸಿದರು.

ಆ್ಯರಿಸೌಇಎ, 1922-23, ಸಂ. 1922ರ 704; ಸೌಇಇ, IX ii, ಸಂ. 589; ಫಿಲಿಯೋಜಾ, 1988, ಸಂ. XIV.

ಸಂ. 173

ಅದೇ ದೇವಸ್ಥಾನದಲ್ಲಿ ವಾಯುವ್ಯ ದಿಕ್ಕಿನ ಗುಡಿಯ ದಕ್ಷಿಣ ಅಧಿಷ್ಠಾನದ ಮೇಲೆ (ನಕಾಶೆ NCv)

ಸಾಳುವ; ನರಸಿಂಗರಾಯದೇವ (II)

ಶಕ 1451, ವಿರೋಧಿ, ವೈಶಾಖ ಶು. 15, ಗು(ರುವಾರ) = ಕ್ರಿ.ಶ. 1529, ಏಪ್ರಿಲ್ 23

ಕನ್ನಡ

ಸಾಳುವ ನರಸಯ್ಯನು ಆದಿನಾರಾಯಣದೇವರಿಗೆ ನಿತ್ಯದ ಪೂಜೆಗೆ ಅಕ್ಕಿ, ತುಪ್ಪ, ಮುಂತಾದವುಗಳನ್ನು ಮತ್ತು ದೀಪಗಳನ್ನು ದಾನಮಾಡಿದ ವಿಷಯ ತಿಳಿಸುತ್ತದೆ. ಅಲ್ಲದೆ ಬೆಸವಾಡದ ರಾಯನಾಯಕನ ಮಗ ಸಾಳುವ ನರಸಯ್ಯನು ದೇವಸ್ಥಾನವನ್ನು ಕಟ್ಟಿಸಿದನೆಂದೂ ತಿಳಿಸುತ್ತದೆ.

ಫಿಲಿಯೋಜಾ, 1988, ಸಂ. IV.

ಸಂ. 174

ಅದೇ ದೇವಸ್ಥಾನದ ರಂಗಮಂಟಪದ ಪೂರ್ವದಿಕ್ಕಿನ ಗೋಡೆಯ ಮೇಲೆ (ನಕಾಶೆ NHa)

ವಿಜಯನಗರ, ಸದಾಶಿವದೇವ

ಶಕ 1486, ರಕ್ತಾಕ್ಷಿ, ಮಾರ್ಗಶಿರ ಬ. 10 = ಕ್ರಿ.ಶ. 1564, ನವಂಬರ್ 28

ಕನ್ನಡ

ಶ್ರೀನಿವಾಸಾಚಾರ್ಯ ಅಯ್ಯ ಕೊಪಣ ಸೀಮೆಯಲ್ಲಿ ಮುದುಬೆಯ್ಯಹಳ್ಳಿ ಮತ್ತು ಮುಕುಂದಿ ಅಗ್ರಹಾರಗಳನ್ನು (ವಿಠಲ)ದೇವರ ಸೇವೆಗೆಂದು ದಾನವಾಗಿ ಕೊಟ್ಟದ್ದನ್ನು ತಿಳಿಸುತ್ತದೆ. ಜಗ್ಗರಾಜ ರಾಮರಾಜನು ರಾಚೂರ ಸೀಮೆಯ ತಳಮರೆ ಗ್ರಾಮವನ್ನು ಮತ್ತು ಅದವಾನಿ ವಳಿತದ ಕವತಾಳ ಸೀಮೆಯ ಯೀಚಲಹಾಳ ಗ್ರಾಮವನ್ನು, ಮಾರ್ಗಶಿರ ಮಾಸದಲ್ಲಿ ನಡೆಯುವ ದೇವರ ರಥೋತ್ಸವಕ್ಕೆ ದಾನ ಮಾಡಿದನು. ಕೊನೇರಿ ತಿಮ್ಮರಾಜನ ಮಗ ಕೊಂಡರಾಜನು ಅದೇ ಉತ್ಸವಕ್ಕೆ ಕುರುಗೋಡಿನ ಹತ್ತಿರವಿರುವ ಹಿರಿಯಬಾಗಿಲ ಗ್ರಾಮ ಬೋಳಕೋಟೆ ಮತ್ತು ಮಾವುಹಳಿ ಗ್ರಾಮಗಳನ್ನು ದಾನ ಮಾಡಿದನು. ಅಲ್ಲದೆ ವಿಠಲ ಮತ್ತು ತಿರುಮಂಗಿ ಆಳ್ವಾರ ದೇವರ ಸೇವೆಗೆ ಅನೇಕ ವ್ಯಕ್ತಿಗಳು ಭೂಮಿ ದಾನ ಮಾಡಿದ್ದನ್ನೂ ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 43; ಸೌಇಇ, IV, ನಂ. 272; ಫಿಲಿಯೋಜಾ, 1988, ಸಂ. XXIV.

ಸಂ. 175

ಅದೇ ದೇವಸ್ಥಾನದಲ್ಲಿ ರಂಗಮಂಟಪದ ಪೂರ್ವ ದಿಕ್ಕಿನ ಬಾಗಿಲಿನ ದಕ್ಷಿಣದ ತೋಳಿನ ಮೇಲೆ (ನಕಾಶೆ NIIa)

ವಿಜಯನಗರ, ಕೃಷ್ಣರಾಯ

ಶಕ 1435, ಶ್ರೀಮುಖ, ಚೈತ್ರ ಶು. 5, ಶುಕ್ರವಾರ = ಕ್ರಿ.ಶ. 1513, ಮಾರ್ಚ್ 11

ಕನ್ನಡ

ಅರಸನು ತನ್ನ ತಂದೆ ನರಸಣನಾಯಕವೊಡೆಯ ಮತ್ತು ತಾಯಿ ನಾಗಾಜಿದೇವಿ ಅಮ್ಮನವರಿಗೆ ಪುಣ್ಯವಾಗಲೆಂದು, ಹೊಸಊರ ಮಾಗಣಿಯ ಹರಿಹರಪುರ, ವಿರುಪಾಪುರ ಮತ್ತು ಗೋಪಿಸೆಟಿಯಹಳ್ಳಿ ಎಂಬ ಮೂರು ಗ್ರಾಮಗಳನ್ನು ಮತ್ತು ಗೋರಿಯ ಕೆಳಗಿನ ಗದ್ದೆಯನ್ನು ವಿಠಲದೇವರಿಗೆ ದಾನ ಕೊಟ್ಟ ವಿಷಯದ ದಾಖಲೆ ಇದೆ. ಕೃಷ್ಣರಾಯನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು ವಿಠಲದೇವಸ್ಥಾನದ ಗೋಪುರವನ್ನು ಕಟ್ಟಿಸಿ, ಒಂದು ಚಿನ್ನದ ತಟ್ಟೆ ಮತ್ತು 25 ಬೆಳ್ಳಿಯ ಆರತಿಗಳನ್ನು ಕೊಟ್ಟರು.

ಆ್ಯರಿಸೌಇಎ, 1889, ಸಂ. 44; ಸೌಇಇ, IV, ಸಂ. 273; ಫಿಲಿಯೋಜಾ, 1988, ಸಂ. I.

ಸಂ. 176

ಅದೇ ದೇವಸ್ಥಾನದಲ್ಲಿ ಗುಡಿಯೊಳಗೆ ಹೋಗುವ ದ್ವಾರದ ಬಲಕ್ಕೆ ನೆಟ್ಟ ಕಲ್ಲಿನ ಮೇಲೆ (ನಕಾಶೆ NIIa)

ವಿಜಯನಗರ, ಅಚ್ಯುತದೇವ

ಶಕ 1452, ಮನ್ಮಥ, ಆಶ್ವೀಜ ಬ. 7, ಸೋಮವಾರ = ಕ್ರಿ.ಶ. 1535, ಅಕ್ಟೋಬರ್ 18, ಸೋಮವಾರ (ಶಕ 1457)

ಕನ್ನಡ

ಚಿಕ್ಕ ತಿಮ್ಮಪ್ಪನು ತನ್ನ ತಂದೆ ಮತ್ತು ತಾಯಿಯವರಿಗೆ ಪುಣ್ಯವಾಗಲೆಂದು ವಿಠಲ ದೇವರ ಮುಂದೆ ದೀಪ ಉರಿಸಲು ಹಣದ ಕಾಣಿಕೆ ಕೊಟ್ಟನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 45; ಸೌಇಇ, IV, ಸಂ. 274; ಫಿಲಿಯೋಜಾ, 1988, ಸಂ. XI.

ಸಂ. 177

ಅದೇ ದೇವಸ್ಥಾನದಲ್ಲಿ ರಂಗಮಂಟಪದ ಪೂರ್ವ ಮತ್ತು ಉತ್ತರ ಗೋಡೆಗಳ ಮೇಲೆ (ನಕಾಶೆ NIIa)

ವಿಜಯನಗರ, ಸದಾಶಿವ

ಶಕ 1483, ದುರ್ಮತಿ, ಜ್ಯೇಷ್ಠ ಶು. 5, ಸೋಮವಾರ = ಕ್ರಿ.ಶ. 1561, ಮೇ 19, ಸೋಮವಾರ

ಕನ್ನಡ

ಅರವೀಟಿ ರಾಮರಾಜು ಕೊಂಡಯ್ಯದೇವ ಮಹಾಅರಸುವಿನ ಮೊಮ್ಮಗ, ಕೊನೇಟಯ್ಯದೇವ ಮಹಾಅರಸುವಿನ ಮಗ ಕೊನೇಟಿಕೊಂಡರಾಜಯ್ಯದೇವ ಮಹಾಅರಸು ತನ್ನ ತಂದೆಗೆ ಪುಣ್ಯವಾಗಲೆಂದು ಹಣ ಮತ್ತು ಭೂಮಿಯನ್ನು ವಿಠಲದೇವರ ಸೇವೆಗೆಂದು ದಾನ ಮಾಡಿದ ವಿಷಯ ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 46; ಸೌಇಇ, IV, ಸಂ. 275; ಫಿಲಿಯೋಜಾ, 1988, ಸಂ. XXIII.

ಸಂ. 178

ಅದೇ ರಂಗಮಂಟಪದ ದಕ್ಷಿಣ ಗೋಡೆಯ ಮೇಲೆ (ನಕಾಶೆ NIIa)

ವಿಜಯನಗರ, ಕೃಷ್ಣರಾಯ

ಶಕ 1435, ಶ್ರೀಮುಖ, ಚೈತ್ರ ಶು. 5 = ಕ್ರಿ.ಶ. 1513, ಮಾರ್ಚ್ 12

ಕನ್ನಡ

ಅರಸನು ತನ್ನ ತಂದೆ ನರಸಣನಾಯಕವೊಡೆಯ ಮತ್ತು ತಾಯಿ ನಾಗಾಜ ಅಮ್ಮನವರಿಗೆ ಪುಣ್ಯವಾಗಲೆಂದು ಅನೇಕ ಗ್ರಾಮಗಳನ್ನು ಮತ್ತು ನದಿ ದಾಟಲು ಹರಿಗೋಲನ್ನು ದೇವರ ಸೇವೆಗೆ ಬಿಟ್ಟನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 48; ಸೌಇಇ, IV, ಸಂ. 277; ಫಿಲಿಯೋಜಾ, 1988, ಸಂ. III.

ಸಂ. 179

ಅದೇ ರಂಗಮಂಟಪದ ದಕ್ಷಿಣ ಬಾಗಿಲಿನ ಪಶ್ಚಿಮ ತೋಳಿನ ಮೇಲೆ (ನಕಾಶೆ NIIa)

ವಿಜಯನಗರ, ಕೃಷ್ಣರಾಯ

ಶಕ 1435, ಶ್ರೀಮುಖ, ಚೈತ್ರ ಶು. 5, (ಶುಕ್ರವಾರ) = ಕ್ರಿ.ಶ. 1513, ಮಾರ್ಚ್ 11

ಕನ್ನಡ

ಶಾಸನ ಸಂ. 175ರ ಪ್ರತಿ

ಆ್ಯರಿಸೌಇಎ, 1889, ಸಂ. 49; ಸೌಇಇ, IV, ಸಂ. 278; ಫಿಲಿಯೋಜಾ, 1988, ಸಂ. I.

ಸಂ. 180

ಅದೇ ದೇವಸ್ಥಾನದಲ್ಲಿ ಮುಖ್ಯ ಗುಡಿಯ ಪಶ್ಚಿಮಕ್ಕೆ ಶಿಥಿಲವಾದ ಮಂಟಪದ ದ್ವಾರದ ಎಡಕ್ಕೆ (ನಕಾಶೆ NHa)

ವಿಜಯನಗರ, ಸದಾಶಿವರಾಯ ಮಹಾರಾಯ

ಶಕ 1466 (ಮುಗಿದ ಮೇಲೆ), ಕ್ರೋಧಿ, ಮಾಘ ಬ. 13, ಹಸ್ತ, ಮಂಗಳವಾರ = ಕ್ರಿ.ಶ. 1545, ಫೆಬ್ರವರಿ 10

ತೆಲುಗು

ಕಂದನವೊಲಿನ ಕಂದಾಲ ಶ್ರೀರಂಗಾಚಾರ್ಯರ ಶಿಷ್ಯ ಮತ್ತು ಜಂಬುಲದಿನ್ನೆಯ ಶ್ರೀರಂಗರಾಜುವಿನ ಮಗ ಮಹಾಮಂಡಲೇಶ್ವರ ಚಿಕ್ಕರಾಜು ವಿಠಲೇಶ್ವರ ದೇವರ ದೇವಸ್ಥಾನದಲ್ಲಿರುವ ಲಕ್ಷ್ಮೀನಾರಾಯಣ ದೇವರ ಭಂಡಾರಕ್ಕೆ ದೇವರ ನಿತ್ಯ ಪೂಜೆಗೆಂದು ಗುಡ್ಡಂ ಗಂಗಾವತಿ ಸೀಮೆಯ ಕೆರೆಹಳ್ಳಿಯಲ್ಲಿ 2 ವೃತ್ತಿಗಳನ್ನು 75 ಘಟ್ಟಿ ವರಹಗಳಿಗೆ ಕೊಂಡು ಅದನ್ನು ಅಚ್ಯುತರಾಯ ಸಮುದ್ರಂ ಎಂದು ನಾಮಕರಣ ಮಾಡಿ ದಾನವಾಗಿ ಕೊಟ್ಟನೆಂದು ಹೇಳುತ್ತದೆ.

ಆ್ಯರಿಸೌಇಎ, 1922-23, 1922ರ ಸಂ. 703; ಸೌಇಇ, XVI, ಸಂ. 141; ಫಿಲಿಯೋಜಾ, 1988, ಸಂ. XVII.

ಸಂ. 181

ಅದೇ ದೇವಸ್ಥಾನದಲ್ಲಿ ಮುಖ್ಯ ಗುಡಿಯ ಉತ್ತರ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NHa)

ವಿಜಯನಗರ, ಅಚ್ಯುತದೇವರಾಯ

ಶಕ 1455, ವಿಜಯ, ಮಾರ್ಗಶಿರ, ಶು. 11, ಗುರುವಾರ = ಕ್ರಿ.ಶ. 1533, ನವೆಂಬರ್ 27, ಗುರುವಾರ

ಕನ್ನಡ ಮತ್ತು ಸಂಸ್ಕೃತ; ಕನ್ನಡ

ವಿಠಲೇಶ್ವರ ದೇವರ ಸನ್ನಿಧಿಯಲ್ಲಿ ರಾಜನು ಸುವರ್ಣಮೇರು ದಾನಮಾಡಿದ ಸಂದರ್ಭದಲ್ಲಿ ತಿರುಮಲಮ್ಮನು ಹಾಡಿದ ಸಂಸ್ಕೃತ ಪದ್ಯವನ್ನು ದಾಖಲಿಸುತ್ತದೆ.

ಆೖರಿಇಎ, 1903-04, 1904ರ ಸಂ. 9; 1922-23, 1922ರ ಸಂ. 708; ಸೌಇಇ, IX ii, ಸಂ. 557; XVII, ಸಂ. 10; ಫಿಲಿಯೋಜಾ, 1988, ಸಂ. VIII.

ಸಂ. 182

ಅದೇ ದೇವಸ್ಥಾನದ ಮುಖ್ಯ ಗುಡಿಯ ಉತ್ತರ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NHa)

ವಿಜಯನಗರ, ಅಚ್ಯುತರಾಯ

ಶಕ 1456, ಜಯ, ಶ್ರಾವಣ ಶು. 12, ಬು(ಧವಾರ) = ಕ್ರಿ.ಶ. 1534, ಜುಲೈ 22, ಬುಧವಾರ

ಕನ್ನಡ

ಗಂಧದ ತಿಪ್ಪಸೆಟ್ಟಿಯು ಅರಸನಿಗೆ ಪುಣ್ಯವಾಗಲೆಂದು ತಿರುಕ್ಕಚ್ಚಿನಂಬಿ ಸಹಿತ 12 ಆಳ್ವಾರರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಅವುಗಳ ಪೂಜೆಗೆ ಚಿನ್ನದ ಕಾಣಿಕೆಯನ್ನು ಕೊಟ್ಟನು.

ಆೖರಿಎ, 1903-04, 1904ರ ಸಂ. 10; ಸೌಇಇ, IX ii, ಸಂ. 566; XVII, ಸಂ. 11; ಫಿಲಿಯೋಜಾ, 1988, ಸಂ. IX.

ಸಂ. 183

ಅದೇ ದೇವಸ್ಥಾನದಲ್ಲಿ ಮುಖ್ಯ ಗುಡಿಯ ಉತ್ತರ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NHa)

ವಿಜಯನಗರ, ಸದಾಶಿವದೇವ

ಶಕ 1485, ರುಧಿರೋದ್ಗಾರಿ, ಶ್ರಾವಣ ಬ. 2 = ಕ್ರಿ.ಶ. 1563, ಆಗಸ್ಟ್ 5, ಗುರುವಾರ

ಕನ್ನಡ

ವಿಠಲ ದೇವರನ್ನು ಪ್ರತಿದಿನ ಸಂಗೀತ ವಾದ್ಯದೊಂದಿಗೆ ಕಳಿಸುವುದಕ್ಕೆ ಮತ್ತು ದೇವರ ಬೆಳಗಿನ ಸೇವೆಗೆ ನಮ್ಮಾಳ್ವಾರು ವಿಠಲದೇವರ ಭಂಡಾರಕ್ಕೆ ಭೂದಾನ ಮಾಡಿದರು.

ಆೖರಿಎ, 1903-04, 1904ರ ಸಂ. 11; ಸೌಇಇ, IX ii, ಸಂ. 678; XVII, ಸಂ. 12; ಫಿಲಿಯೋಜಾ, 1988, ಸಂ. XXIII.

ಸಂ. 184

ಅದೇ ಗುಡಿಯ ಮುಂದಿನ ಮಂಟಪದ ಉತ್ತರ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NHa)

ವಿಜಯನಗರ, ಸದಾಶಿವದೇವ

ಶಕ 1476, ಆನಂದ, ನಿಜ ಆಷಾಢ ಶು. 12, ಗುರುವಾರ = ಕ್ರಿ.ಶ. 1554, ಜುಲೈ 12, ಗುರುವಾರ

ಕನ್ನಡ

ಅರವೀಟಿ ರಾಮರಾಜ ಕೊಂಡಯದೇವನ ಮೊಮ್ಮಗ, ಕೊನೇಟಯನ ಮಗ ಉದಗಿರಿ ತಿಮ್ಮರಾಜನು ವಿಠಲದೇವರ ಉಯ್ಯಾಲೆ ಉತ್ಸವಕ್ಕೆ ಮಂಟಪವನ್ನು ಕಟ್ಟಿಸಿದನು. ಅಲ್ಲದೆ ಗುತ್ತಿಯ ಸೀಮೆಯಲ್ಲಿ ಪುಲಿಯೇರು ಮಾಗಣಿಯ ಕೊಂಡಕುಂದಿಯ ಉಪನಗರವಾದ ತಿರುಮಲಾಪುರವನ್ನು ಪ್ರಥಮ ಏಕಾದಶಿ ಮತ್ತು ದ್ವಾದಶಿಯಂದು ದೇವರನ್ನು ಉಯ್ಯಾಲೆಯಲ್ಲಿಡಲು ಮತ್ತು ಆ ದಿನಗಳಲ್ಲಿ ದೇವರ ಸೇವೆಗೆಂದು ದಾನ ಮಾಡಿದರು.

ಆೖರಿಇಎ, 1903-04, 1904ರ ಸಂ. 13; ಸೌಇಇ, IX ii, ಸಂ. 653; XVII, ಸಂ. 14; ಫಿಲಿಯೋಜಾ, 1988, ಸಂ. XIX.

ಸಂ. 185

ಅದೇ ಮಂಟಪದ ಉತ್ತರ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NIIa)

ವಿಜಯನಗರ, ಸದಾಶಿವದೇವ

ಶಕ 1476, ನಿಜ ಆಷಾಢ ಬ. 2, ಸೋ(ಮವಾರ) = ಕ್ರಿ.ಶ. 1554, ಜುಲೈ 16, ಸೋಮವಾರ

ಕನ್ನಡ

ಮುಸಲಿಮಡುವಿನ ರಾಮರಾಜ ತಿಮ್ಮರಾಜಯನ ಮಗನೂ ಮತ್ತು ಅರಸನ ಅಧೀನ ಅಧಿಕಾರಿಯೂ ಆದವನು (ಹೆಸರು ಇಲ್ಲ) ಅನಂತಪುರವೆಂಬ ಗ್ರಾಮವನ್ನು ಮತ್ತು ಮರುಕೊಂಬನಹಳ್ಳಿ ಮತ್ತು ಇತರ ಹಳ್ಳಿಗಳಲ್ಲಿ ಪ್ರತಿ ಪೊನ್ನಿಗೆ 300 ವರಹಗಳನ್ನು ಕೊಡುವ ಕೆಲವು ವ್ರಿತ್ತಿಗಳನ್ನು ವಿಠಲದೇವರ ಸೇವೆಗೆ ದಾನ ಮಾಡಿದನು. ಅಳಿಯ ರಾಮಪಯ್ಯದೇವ ಮಹಾಅರಸುವಿನ ಅಜ್ಞೆಯಮೇರೆಗೆ ಈ ಶಾಸನವನ್ನು ಬರೆಯಲಾಗಿದೆ.

ಆ್ಯರಿಎ, 1903-04, 1904ರ ಸಂ. 14; ಸೌಇಇ, IX ii, ಸಂ. 654; XVII, ಸಂ. 15; ಫಿಲಿಯೋಜಾ, 1988, ಸಂ. XX.

ಸಂ. 186

ಅದೇ ದೇವಸ್ಥಾನದ ಮುಖ್ಯ ಗುಡಿಯ ಪಶ್ಚಿಮ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NHa)

ವಿಜಯನಗರ, ಅಚ್ಯುತರಾಯ

ಶಕ 1453, ಖರ, ಮಾಘ ಬ. 10 = ಕ್ರಿ.ಶ. 1532, ಜನವರಿ 31, ಬುಧವಾರ

ಕನ್ನಡ

ಭಾರದ್ವಾಜಗೋತ್ರ, ಆಶ್ವಲಾಯನ ಸೂತ್ರದ ವೇದಮಾರ್ಗ ಪ್ರತಿಷ್ಠಾಚಾರ್ಯ ತಾಳಪಾಕ ತಿರುಮಲಯ್ಯನು ಹೆಪೆ, ಚೆಲುವನಹಾಳು ಮತ್ತು ಆನೆಗನಹಾಳು ಗ್ರಾಮಗಳನ್ನು ವಿಠಲದೇವರ ಸೇವೆಗೆ ದಾನವಾಗಿ ಕೊಟ್ಟನು.

ಆ್ಯರಿಎ, 1903-04, 1904ರ ಸಂ. 8; ಸೌಇಇ, IX ii, ಸಂ. 543; XVII, ಸಂ. 9; ಫಿಲಿಯೋಜಾ, 1988, ಸಂ. VI.

ಸಂ. 187

ಅದೇ ಗುಡಿಯ ಪಶ್ಚಿಮ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NHa)

ವಿಜಯನಗರ, ಸದಾಶಿವರಾಯ

ಶಕ 1480, ಕಾಳಯುಕ್ತಿ, ಫಾಲ್ಗುಣ ಶು. 15 = ಕ್ರಿ.ಶ. 1559, ಫೈಬ್ರವರಿ; 22, ಬುಧವಾರ

ಕನ್ನಡ

ವಿಠಲದೇವರನ್ನು ಪರಾಂಕುಶ ಮಂಟಪಕ್ಕೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲು ಬೇಕಾಗುವ ವೆಚ್ಚವನ್ನು ಭರಿಸಲು ನಮ್ಮಾಳುವಾರರು ತಮ್ಮ ವಶದಲ್ಲಿದ್ದ ತೋಟವನ್ನು ಇನ್ನೊಂದು ತೋಟಕ್ಕೆ ಬದಲಾಯಿಸಿದರು.

ಆ್ಯರಿಎ, 1903-04, 1904ರ ಸಂ. 7; ಆ್ಯರಿಸೌಇಎ, 1922-23, 1922ರ ಸಂ. 705; ಸೌಇಇ, IX ii, ಸಂ. 668 ಮತ್ತು 669; XVII, ಸಂ. 8; ಫಿಲಿಯೋಜಾ, 1988, ಸಂ. XXI.

ಸಂ. 188

ಅದೇ ಗುಡಿಯಲ್ಲಿ ದಕ್ಷಿಣ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NIIa)

ವಿಜಯನಗರ, ಅಚ್ಯುತದೇವರಾಯ

ಶಕ 1453, ಖರ, ಜ್ಯೇಷ್ಠ ಶು. 15 = ಕ್ರಿ.ಶ. 1531, ಮೇ 30, ಮಂಗಳವಾರ

ಕನ್ನಡ

ಅರಸನು ವಿಠಲದೇವರ ಸೇವೆಗೆ ಒಂದು ಗ್ರಾಮವನ್ನು ದಾನಮಾಡಿದ ವಿಷಯ ತಿಳಿಸುತ್ತದೆ.

ಆ್ಯರಿಎ. 1903-04, 1904ರ ಸಂ. 3; ಸೌಇಇ. IX ii, ಸಂ. 534; XVII, ಸಂ. 3; ಫಿಲಿಯೋಜಾ. 1988, ಸಂ. V.

ಸಂ. 189

ಅದೇ ಗುಡಿಯ ದಕ್ಷಿಣ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NIIa)

ವಿಜಯನಗರ, ಅಚ್ಯುತದೇವರಾಯ

ಶಕ 1456, ಜಯ, ಪುಷ್ಯ ಶು. 6, ಗುರುವಾರ = ಕ್ರಿ.ಶ. 1534, ಡಿಸೆಂಬರ್ 10, ಗುರುವಾರ

ಕನ್ನಡ

ತಿರುವೆಂಗಳ ನಾಯಕನ ಮಗ ವರದಪ್ಪ ನಾಯಕನು ಅರಸ ಮತ್ತು ಚಿಕ್ಕರಾಯನಿಗೆ ಪುಣ್ಯವಾಗಲೆಂದು ವಿಠಲೇಶ್ವರ ದೇವಸ್ಥಾನದ ಭಂಡಾರಕ್ಕೆ ನಿತ್ಯ ಪೂಜೆಗಾಗಿ ಹಣದ ಕಾಣಿಕೆ ಕೊಟ್ಟನು.

ಆ್ಯರಿಎ. 1903-04, 1904ರ ಸಂ. 4; ಸೌಇಇ. IX ii, ಸಂ. 570; XVII, ಸಂ. 4; ಫಿಲಿಯೋಜಾ. 1988, ಸಂ. X.

ಸಂ. 190

ಅದೇ ಗುಡಿಯ ದಕ್ಷಿಣ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NIIa)

ವಿಜಯನಗರ, ಅಚ್ಯುತದೇವರಾಯ

ಶಕ 1458, ದುರ್ಮುಖಿ, ಜ್ಯೇಷ್ಠ ಶು. 11, ಬು(ಧವಾರ) = ಕ್ರಿ.ಶ. 1536, ಮೇ 31, ಬುಧವಾರ

ಕನ್ನಡ

ಓರಿಯ ತಿರುಮಲನಾಯಕನು ಅರಸನಿಗೆ ಮತ್ತು ಚಿಕ್ಕರಾಯನಿಗೆ ಪುಣ್ಯವಾಗಲೆಂದು ವಿಠಲದೇವರ ನಿತ್ಯ ಪೂಜೆಗೆ 200 ವರಹಗಳನ್ನು ದೇವಸ್ಥಾನದ ಭಂಡಾರಕ್ಕೆ ದಾನ ಮಾಡಿದನು.

ಆ್ಯರಿಎ. 1903-04, 1904ರ ಸಂ. 5; ಸೌಇಇ. IX ii, ಸಂ. 574; XVII, ಸಂ. 5; ಫಿಲಿಯೋಜಾ. 1988, ಸಂ. XII.

ಸಂ. 191

ಅದೇ ಗುಡಿಯ ದಕ್ಷಿಣ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NIIa)

ವಿಜಯನಗರ, ಅಚ್ಯುತದೇವರಾಯ

ಶಕ 1458, ದುರ್ಮುಖಿ, ಜ್ಯೇಷ್ಠ ಶು. 11, ಬು(ಧವಾರ) = ಕ್ರಿ.ಶ. 1536, ಮೇ 31, ಬುಧವಾರ

ಕನ್ನಡ

ಅರಸನ ಆಜ್ಞೆಯ ಮೇರೆಗೆ ತಿರುಮಲನಾಯಕನು ದಾನಮಾಡಿದ ವಿಷಯ ತಿಳಿಸುತ್ತದೆ.

ಆರಿಎ, 1903-04, 1904ರ ಸಂ. 5-ಎ; ಸೌಇಇ, IX ii, ಸಂ. 575; XVII, ಸಂ. 6.

ಸಂ. 192

ಅದೇ ಗುಡಿಯ ದಕ್ಷಿಣ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NIIa)

ವಿಜಯನಗರ, ಸದಾಶಿವದೇವ ಮಹಾರಾಯ

ಶಕ 1465, ಶೋಭಕೃತ, ಭಾದ್ರಪದ ಶು. 12 = ಕ್ರಿ.ಶ. 1543, ಸೆಪ್ಟೆಂಬರ್ 10, ಸೋಮವಾರ

ಕನ್ನಡ

ಶಠಮರ್ಷಣ ಗೋತ್ರ ಆಪಸ್ತಂಭ ಸೂತ್ರ ಮತ್ತು ಯಜುಶ್ಶಾಖೆಯ ತಿರುಮಲ ಅಪ್ಪಕು ತಾತಾಚಾರ್ಯನ ಮಗ ತಿರುವೆಂಗಳಾಚಾರ್ಯನು ಒಂದೆ ರಾಜನಿಂದ ದಾನವಾಗಿ ಸ್ವೀಕರಿಸಿದ ಕೆಕಲಕೋಟೆ ಸೀಮೆಯಲ್ಲಿರುವ ನಿಟೂರ ಗ್ರಾಮ, ಮತ್ತು ಆನೆಗೊಂದಿಯಲ್ಲಿ ಭೂಮಿ ಮತ್ತು ತೋಟಗಳನ್ನು ವಿಠಲದೇವರಿಗೆ ದಾನವಾಗಿ ಕೊಟ್ಟನು.

ಆರಿಎ, 1903-04, 1904ರ ಸಂ. 6; ಆರಿಸೌಎ, 1922-23, 1922ರ ಸಂ. 707; ಸೌಇಇ, IX ii, ಸಂ. 607; XVII, ಸಂ. 7; ಫಿಲಿಯೋಜಾ, 1988, ಸಂ. XVI.

ಸಂ. 193

ಅದೇ ಗುಡಿಯ ದಕ್ಷಿಣ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NIIa)

ವಿಜಯನಗರ, ಸದಾಶಿವದೇವ ಮಹಾರಾಯ

ಶಕ 1485, ರುಧಿ(ರೋದ್ಗಾರಿ) = ಕ್ರಿ.ಶ. 1563-64

ಕನ್ನಡ

ಅಪೂರ್ಣವಾಗಿದೆ.

ಆರಿಇಎ, 1922-23, 1922ರ ಸಂ. 706; ಸೌಇಇ, IX ii, ಸಂ. 679.

ಸಂ. 194

ಅದೇ ಗುಡಿಯ ಮುಂದಿನ ಮಂಟಪದ ದಕ್ಷಿಣ ದಿಕ್ಕಿನ ಅಧಿಷ್ಠಾನದ ಮೇಲೆ (ನಕಾಶೆ NIIa)

ವಿಜಯನಗರ, ಸದಾಶಿವ

ಶಕ 1466, ಕ್ರೋಧಿ, ಫಾಲ್ಗುಣ ಶು. 1 = ಕ್ರಿ.ಶ. 1545, ಫೆಬ್ರವರಿ 12, ಗುರುವಾರ

ಕನ್ನಡ

ಕೊನೇಟಿ ತಿಮ್ಮರಾಜನು, ತನ್ನ ತಂದೆ ಕೊಂಡರಾಜನಿಗೆ ಪುಣ್ಯವಾಗಲೆಂದು ರಪಡೂರಿನ ಸುಂಕದ ಆದಾಯವನ್ನು ವಿಠಲದೇವರ ರಥಸಪ್ತಮಿಯ ಪೂಜೆಗೆ ದಾನವಾಗಿ ಕೊಟ್ಟನು.

ಆರಿಎ, 1903-04, 1904ರ ಸಂ. 12; ಸೌಇಇ, IX ii, ಸಂ. 616; XVII, ಸಂ. 13; ಫಿಲಿಯೋಜಾ, 1988, ಸಂ. XVIII.

ಸಂ. ೧೯೫

ಅದೇ ದೇವಸ್ಥಾನದ ಪ್ರಾಕಾರ ದಕ್ಷಿಣ ಗೋಡೆಯ ಮೇಲೆ (ನಕಾಶೆ NIIa)

ವಿಜಯನಗರ -

-

ಕನ್ನಡ

ಶಿಲ್ಪಿಯ ಹೆಸರು ಬೆಟ್ಟದಯ್ಯ ನಾಯಕರಿಗಾಗಿ ಮತ್ತು ಜಂಗಾಲಯದ ಕೃಷ್ಣಯ್ಯ ಇವರು ದೇವರಿಗೆ ದಾನವಿತ್ತ ಕಲ್ಲನ್ನು ತಿಳಿಸುತ್ತದೆ.

ಪ್ರಾಇವಾವ. 1922-23, 1922ರ ಸಂ. 709; ದಭಾಇಶಾ. IX ii, ಸಂ. 713.

ಸಂ. ೧೯೬

ಅದೇ ದೇವಸ್ಥಾನದ ಹಿಂಭಾಗದಲ್ಲಿ ಬಿದ್ದಿರುವ ಕಲ್ಲಿನ ಮೇಲೆ (ನಕಾಶೆ NIIa)

--

ಶಕ ೧೪೫೪, ನಂದನ, (ವೈಶಾಖ), (ಶುದ್ಧ) ೧೧, ೭, ಗುರುವಾರ, ಪೂರ್ವ ಫಲ್ಗುಣಿ ನಕ್ಷತ್ರ, ಧ್ರುವಯೋಗ, (ವಣಿಜ್), ಬವ ಕರಣ = ಕ್ರಿ.ಶ. 1532, ಏಪ್ರಿಲ್ 19, ಶುಕ್ರವಾರ (ಗುರುವಾರ ಅಲ್ಲ)

ಸಂಸ್ಕೃತ, ನಾಗರಿ

(ಮರಿಯ್ದ ಗುರು) ಸ್ವಸ್ತಿಶ್ರೀ ಯೋಗಿನಂದನ ಕಲಶ (ಮೂರ್ತಿ)ಯನ್ನು ವಿಠಲ (ದೇವಸ್ಥಾನದ) ಅಂಗಳದಲ್ಲಿ ಪ್ರತಿಷ್ಠಾಪಿಸಿದರೆಂದು ತಿಳಿಸುತ್ತದೆ.

ಪ್ರಾಇವಾವ. 1922-23, 1922ರ ಸಂ. 710; ಫಿಲಿಯೋಜಾ. 1966, ಸಂ. VII.

ಸಂ. ೧೯೭

ಅದೇ ದೇವಸ್ಥಾನದಲ್ಲಿ, ಮೂರು ಕಂಬಗಳ ಮಂಟಪದ ಉತ್ತರ ದಕ್ಷಿಣ ಗೋಡೆಯ ಮೇಲೆ (ನಕಾಶೆ NIIa)

ವಿಜಯನಗರ, ಕೃಷ್ಣರಾಯ ಮಹಾರಾಯ

ಶಕ 1438, ಧಾತು = ಕ್ರಿ.ಶ. 1516-17

ಕನ್ನಡ

ಅರಸರು ವಿಠಲದೇವರಿಗೆ ಮೂರು ಕಂಬಗಳ ಮಂಟಪವನ್ನು ಕಟ್ಟಿಸಿದಂತೆ ತಿಳಿಸುತ್ತದೆ.

ಪ್ರಾಇವಾವ. 1922-23, 1922ರ ಸಂ. 711; ದಭಾಇಶಾ. IX ii, ಸಂ. 502; ಫಿಲಿಯೋಜಾ. 1966, ಸಂ. II.

ಸಂ. ೧೯೮

ಅದೇ ಗೋಡೆಯ ಮೇಲೆ (ನಕಾಶೆ NIIa)

ವಿಜಯನಗರ, ಕೃಷ್ಣರಾಯ ಮಹಾರಾಯ

ಶಕ 1438 (ಮಾಘ ಶುದ್ಧ), ಧಾತು = ಕ್ರಿ.ಶ. 1516

ತೆಲುಗು
ಅರಸನು ವಿಠಲದೇವರಿಗೆ ಮೂರು ಕಲಶಗಳ ಮಂಟಪವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.
ಆರಿಇಎ, 1922-23, 1922ರ ಸಂ. 712; ಸೌಇಇ. XVI, ಸಂ. 56; ಹಂಪಿಶಾಸನ, 1988, ಸಂ. II.

ಸಂ. 199

ಅದೇ ಗೋಡೆಯ ಮೇಲೆ (ನಕಾಶೆ NIIa)
ವಿಜಯನಗರ, ಕೃಷ್ಣರಾಯ ಮಹಾರಾಯ
ಶಕ 1438 (ಹೋಗಿದ ವರುಷ), ಧಾತು = ಕ್ರಿ.ಶ. 1516
ತೆಲುಗು
ರಾಜನು ವಿಠಲದೇವರಿಗೆ ಮೂರು ಕಲಶಗಳ ಮಂಟಪವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.
ಆರಿಇಎ, 1922-23, 1922ರ ಸಂ. 713; ಹಂಪಿಶಾಸನ, 1988, ಸಂ. II.

ಸಂ. 200

ಅದೇ ದೇವಸ್ಥಾನದಲ್ಲಿ ಪೂರ್ವದಿಕ್ಕಿನ ಗೋಪುರದ ಬಳಿ (ನಕಾಶೆ NIIb)
ವಿಜಯನಗರ, ಅಚ್ಯುತದೇವ ಮಹಾರಾಯ
ಶಕ 1459, ವಿಳಂಬಿ, ಅಧಿಕ ಜ್ಯೇಷ್ಠ ಶು. 11, ಸೋಮವಾರ = ಕ್ರಿ.ಶ. 1538, ಮೇ 13, ಸೋಮವಾರ
ಕನ್ನಡ
ಉಪ್ಪಿಯ ತಿಮ್ಮಪ್ಪ ನಾಯಕನ ಮಗ ಓಬಯ ತಿಮ್ಮಪ್ಪ ನಾಯಕನು ವಿಠಲ ದೇವಸ್ಥಾನದ ಪೂರ್ವ ಗೋಪುರದ ಮೇಲೆ ಕಲಶಗಳನ್ನಿಡಲು ಚಿನ್ನದ ಪಾತ್ರೆಗಳನ್ನು ದಾನವಾಗಿ ಕೊಟ್ಟನೆಂದು ತಿಳಿಸುತ್ತದೆ.
ಆರಿಇ, 1903-04, 1904ರ ಸಂ. 2; ಸೌಇಇ. IX ii, ಸಂ. 586; XVII, ಸಂ. 2; ಹಂಪಿಶಾಸನ, 1988, ಸಂ. XVIII.

ಸಂ. 201

ಅದೇ ದೇವಸ್ಥಾನದ ಪೂರ್ವ ಗೋಪುರದ ಎದುರಿಗೆ ಬಿದ್ದಿರುವ ಕಲ್ಲಿನ ಮೇಲೆ (ನಕಾಶೆ NIIb)
--
16ನೇ ಶತಮಾನ
ತೆಲುಗು
ಮಹಾಮಂಡಲೇಶ್ವರ ರಾಮರಾಜ ಕೊಂಡರಾಜಯ್ಯದೇವ ಮಹಾರಾಜರ ಮಗ ಶ್ರೀರಂಗಯ್ಯನು (ವಿಠಲದೇವರಿಗೆ) ಭೂದಾನ ಮಾಡಿದನೆಂದು ತಿಳಿಸುತ್ತದೆ.
ಆರಿಸೌಇಎ, 1889, ಸಂ. 47; ಸೌಇಇ. IV, ಸಂ. 276.

ಸಂ. 202

ಅದೇ ದೇವಸ್ಥಾನದಲ್ಲಿ ದಕ್ಷಿಣ ಗೋಪುರದ ಬಳಿ (ನಕಾಶೆ NIIa)
ವಿಜಯನಗರ, ಅಚ್ಯುತ

ಶಕ 1461, ವಿಕಾರಿ, ಭಾದ್ರಪದ ಶು. 12; [illegible] = ಕ್ರಿ.ಶ. 1539, ಆಗಸ್ಟ್ 26, ಮಂಗಳವಾರ

ಸಂಸ್ಕೃತ, ಕನ್ನಡ

ಅರಸನು ಬ್ರಾಹ್ಮಣರಿಗೆ ಆನಂದನಿಧಿ ದಾನಮಾಡಿದನೆಂದು ತಿಳಿಸುತ್ತದೆ.

[illegible] 1889, ಸಂ. 27; 1903-04, [illegible] ಸಂ. 1; ಸೌಇಇ. IV, ಸಂ. 258; XVI, ಸಂ. 118; XVII, ಸಂ. 1; ಫಿಲಿಯೋಜಾ, 1988, ಸಂ. XV.

ಸಂ. 203

ಅದೇ ಗೋಪುರದ ಎಡಭಾಗದಲ್ಲಿ (ನಕಾಶೆ N11a)

ವಿಜಯನಗರ, ಅಚ್ಯುತ

ಶಕ 1461, ವಿಕಾರಿ, ಭಾದ್ರಪದ ಶು. 12; [illegible] = ಕ್ರಿ.ಶ. 1539, ಆಗಸ್ಟ್ 26, ಮಂಗಳವಾರ

ಸಂಸ್ಕೃತ, ನಾಗರಿ

ಅರಸನು ಬ್ರಾಹ್ಮಣರಿಗೆ ಆನಂದನಿಧಿ ದಾನಮಾಡಿದ ಬಗ್ಗೆ ತಿಳಿಸುತ್ತದೆ.

[illegible] 1889, ಸಂ. 28; ಸೌಇಇ. IV, ಸಂ. 257; ಫಿಲಿಯೋಜಾ, 1988, ಸಂ. XV.

ಸಂ. 204

ಅದೇ ದೇವಸ್ಥಾನದ ಹತ್ತಿರ ಶಿಥಿಲವಾದ ಗುಡಿಯ ಗೋಡೆಯ ಮೇಲೆ (ನಕಾಶೆ N11b)

ವಿಜಯನಗರ, ಸದಾಶಿವದೇವ ಮಹಾರಾಯ

ಶಕ 1474, ಪರಿಧಾವಿ, ಫಾಲ್ಗುಣ ಶು. 1, ಸೋಮ(ಮಂಗಳ) = ಕ್ರಿ.ಶ. 1553, ಫೆಬ್ರವರಿ 13

ಕನ್ನಡ

[illegible]

[illegible] 1975-76, ಸಂ. ಬಿ 47; ಐಎಆರ್, 1983-84, ಸಂ. 21.

ಸಂ. 205

ವಿಠಲ ದೇವಸ್ಥಾನದ ಹತ್ತಿರ ಶಿಥಿಲವಾದ ದೇವಸ್ಥಾನದ ಪಕ್ಕದಲ್ಲಿ ನೆಲದ ಕಲ್ಲಿನ ಮೇಲೆ (ನಕಾಶೆ N11a-b)

ವಿಜಯನಗರ, ಸದಾಶಿವದೇವ ಮಹಾರಾಯ

ಶಕ 1481, ಸಿದ್ಧಾರ್ಥಿ, ಕಾರ್ತಿಕ ಶು. 12, ಬುಧವಾರ = ಕ್ರಿ.ಶ. 1559, ನವೆಂಬರ್ 11

ತೆಲುಗು

ಲಕ್ಷ್ಮಮ್ಮಗಾರಿಯ ಮೊಮ್ಮಗ, ತಿಮ್ಮಯ್ಯಂಗಾರುವಿನ ಮಗ ತಾತಾಚಾರಿ ತಿರುಮಲೆಯ್ಯನು ಶಠಕೋಪರ್, ಆಳ್ವಾರ್ ಸೂಕ್ತ, ಮತ್ತು ರಾಮಾನುಜರ ಶ್ರೀ ಪಾದರಥಯ್ಯ ಚಕ್ರವರ್ತಿಗಳ ಮೊಮ್ಮಗ, ಚಿನ್ನ ತಾತಾಚಾರ್ಯರ ಮಗ ಚಕ್ರವರ್ತಿಗಳಿಗೆ ಮನೆಯ ನಿವೇಶನವನ್ನು ದಾನ ಮಾಡಿದರೆಂದು ತಿಳಿಸುತ್ತದೆ. ಅಲ್ಲದೆ ಸ್ವಾಮಿಗಳಾದ ತಾತಾ ತಿರುಮಲೆಯ್ಯನು ಶ್ರೀ ವಿಠಲನಲ್ಲಿ ಮಂಟಪದಿರುವವರೆ ದೇವಸ್ಥಾನ ಕಟ್ಟಿಸಿದರೆಂದು ತಿಳಿಸುತ್ತದೆ. ಕುರಿಗೇಟಿ ಬೈಚನಾಯನಿ ಮೊಮ್ಮಗ, ತಿಮ್ಮನಾಯನಿ ಮಗ ಶ್ರೀರಂಗನಾಯುಡು ಕೂಡ ಲಕ್ಷ್ಮಣ ತಿರುಮಲಯ್ಯಂಗಾರವರಿಂದ ಕ್ರಯಕ್ಕೆ ಪಡೆದ ಮನೆ ನಿವೇಶನವನ್ನು ಚಕ್ರವರ್ತಿಗಳಿಗೆ ಕೊಟ್ಟನು.

ಆರಿಇ., 1975-76, ಸಂ.ಬಿ 98.

ಸಂ. 206

ಕಳಮಾರಪುಟ್ಟದ ಹತ್ತಿರ ಹಳೆಯದಕ್ಕೆ ಮತ್ತು ಹೊಸದಕ್ಕೆ ಕೂಡುವ ಸ್ಥಳದ ಹತ್ತಿರ ಬಂಡೆಯ ಮೇಲೆ (ನಕಾಶೆ NJc)

--

15-16ನೇ ಶತಮಾನ

ತೆಲುಗು

ಸಮಸ್ತಾಲ್ಯಾರ (ದೇವಸ್ಥಾನದ) ಕೊಡುವನ್ನು ಸೂಚಿಸುತ್ತದೆ.

ವಿಪ್ರಾರಿ, 1984-87, ಸಂ. 116.

ಸಂ. 207

ದಿಡ್ಡಿವಾಗಿಲ ಪ್ರದೇಶದಲ್ಲಿರುವ ದೊಡ್ಡ ಬಾಗಿಲಿನ ಪಾರ್ಶ್ವದ ದಿಕ್ಕಿಗೆ ಇರುವ ಕೋಟೆಯಲ್ಲಿ ಗೋಡೆಯ ಮೇಲೆ (ನಕಾಶೆ NKw)

ವಿಜಯನಗರ, ಹರಿಹರ

14ನೇ ಶತಮಾನ

ಕನ್ನಡ

ಅರಸನು ದೊಡ್ಡ ಬಾಗಿಲ ನಿರ್ಮಾಣಕ್ಕೆ ಭೂಮಿ ದಾನಮಾಡಿದ ವಿಷಯ ತಿಳಿಸುತ್ತದೆ.

ವಿಪ್ರಾರಿ, 1984-87, ಸಂ. 124.

ಸಂ. 208

ಹೇಮಕೂಟದ ಮೇಲೆ ತ್ರಿಕೂಟ ದೇವಸ್ಥಾನದ ಹಿಂಭಾಗದಲ್ಲಿರುವ ಮೆಟ್ಟಿಲುಗಳ ಪಶ್ಚಿಮಕ್ಕೆ ಬಂಡೆಯ ಮೇಲೆ (ನಕಾಶೆ NLb)

--

15-16ನೇ ಶತಮಾನ

ಕನ್ನಡ

ಬಠರ ಬಾಚಣಯ್ಯನು ಮಾಡಿಸಿದ ಸೋಪಾನಗಳೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 35.

ಸಂ. 209

ಹೇಮಕೂಟದ ಮೇಲೆ ಪ್ರಸನ್ನ ವಿರೂಪಾಕ್ಷ ದೇವಸ್ಥಾನದ ಹಿಂದೆ ಬಂಡೆಯ ಮೇಲೆ (ನಕಾಶೆ NLb)

ವಿಜಯನಗರ, ಹರಿಹರರಾಯ

ಈಶ್ವರ, ಮಾರ್ಗಶಿರ ಶು. [9], ಮಂಗಳವಾರ = ಕ್ರಿ.ಶ. 1397, ನವೆಂಬರ್ 29, ಗುರುವಾರ

ಕನ್ನಡ

ರಾಣಿ ಬುಕ್ಕಯವೆ ತನ್ನ ಗುರು ಭಾಸ್ಕರದೇವಯ್ಯನಿಗೆ ಪುಣ್ಯವಾಗಲೆಂದು ಜಡೆಯಶಂಕರದೇವರ ದೇವಸ್ಥಾನದಲ್ಲಿ ದೀಪಮಾಲೆ ಕಂಬವನ್ನು ನಿಲ್ಲಿಸಿದಳು.

ಆ್ಯರಿಇಎ, 1908, 1907ರ ಸಂ. 501; 1934-35, ಸಂ. ಬಿ 350; ಸೌಇಇ, XXIII, ಸಂ. 501.

ಸಂ. 210

ಅದೇ ಸ್ಥಳದಲ್ಲಿ ಪ್ರಸನ್ನ ಆಂಜನೇಯ ದೇವಸ್ಥಾನದ ಹಿಂಭಾಗದಲ್ಲಿರುವ ಪುಷ್ಕರಣಿಯ ಹತ್ತಿರ ಬಂಡೆಯ ಮೇಲೆ (ನಕಾಶೆ NLb)

ವಿಜಯನಗರ, ಹರಿಹರರಾಯ

ಶಕ 131[8], ಈಶ್ವರ, ಪುಷ್ಯ ಬ. 8, ಸೋಮವಾರ = ಕ್ರಿ.ಶ. 1398, ಜನವರಿ 11, ಶುಕ್ರವಾರ, (ಶಕ 1319)

ಸಂಸ್ಕೃತ, ನಾಗರಿ

ವಿರೂಪಾಕ್ಷ ಸಿದ್ಧ ಶ್ರೀಪಾದ ಶ್ರೀವಲ್ಲಭದೇವರು ಹೇಮಕೂಟದಲ್ಲಿ ಪ್ರತ್ಯಕ್ಷನಾಗಿದ್ದನ್ನು ಮತ್ತು ಭಾರದ್ವಾಜ ಗೋತ್ರ ಮತ್ತು (ಯಜುರ್ವೇದದ) ಮಾಧ್ಯಂದಿನದ ರಾಘವ ಪಂಡಿತ ಮತ್ತು ಕಮಲಾಂಬ ದಂಪತಿಗಳ ಮಗನಾದ ಗಣಪತಿ ಪಂಡಿತನ ಮಕ್ಕಳಾದ ವಿರುಪಾಕ್ಷ ಪಂಡಿತ ಮತ್ತು ವಿನಾಯಕ ಪಂಡಿತರು ಶುಕನಾಸವನ್ನೊಳಗೊಂಡ ಒಂದು ಗುಡಿಯನ್ನು ಕಟ್ಟಿಸಿ ದೇವಾಲಯದ ಎಡಭಾಗದಲ್ಲಿ ಕೆರೆಯನ್ನು ತೋಡಿಸಿ ಗಿಡಗಳನ್ನು ನೆಡೆಸಿದರೆಂದು ತಿಳಿಸುತ್ತದೆ. ಅಲ್ಲದೆ ವಿರುಪಾಕ್ಷ ಪಂಡಿತನು 13 ಗ್ರಂಥಗಳ ಕರ್ತೃ ಎಂದೂ ತಿಳಿಸುತ್ತದೆ.

ಆ್ಯರಿಇಎ, 1934-35, ಸಂ. ಬಿ 351.

ಸಂ. 211

ಅದೇ ದೇವಸ್ಥಾನದ ಹತ್ತಿರ ಬಂಡೆಯ ಮೇಲೆ (ನಕಾಶೆ NLb)

ವಿಜಯನಗರ, ಹರಿಹರರಾಯ

ಶಕ 1318, ಈಶ್ವರ, ಪುಷ್ಯ ಬ. = ಕ್ರಿ.ಶ. 1398, ಜನವರಿ (ಶಕ 1319)

ಸಂಸ್ಕೃತ, ನಾಗರಿ

ಹಾಳಾಗಿದೆ. ಮೇಲಿನ ಶಾಸನದ ಪ್ರತಿ.

ಆ್ಯರಿಇಎ, 1934-35, ಸಂ. ಬಿ 352.

ಸಂ. 212

ಹೇಮಕೂಟದ ದಕ್ಷಿಣ ದಿಕ್ಕಿಗೆ ಎರಡಂತಸ್ತಿನ ಗೋಪುರದ ಹತ್ತಿರ ಗುಂಡಿನ ಮೇಲೆ (ನಕಾಶೆ NLb)

--

ಶಕ 1328, ವ್ಯಯ, ಭಾದ್ರಪದ ಶು. 11, ಸೋಮವಾರ = ಕ್ರಿ.ಶ. 1406, ಆಗಸ್ಟ್ 25

ಕನ್ನಡ

ಬಹಳ ಹಾಳಾಗಿದೆ. ವಿರೂಪಾಕ್ಷ ದೇವರ ಉಲ್ಲೇಖವಿದೆ.

ವಿಪ್ರೊರೀ, 1983-84, ಸಂ. 14.

ಸಂ. 213

ಕೃಷ್ಣ ಬಜಾರದ ಉತ್ತರಕ್ಕೆ ಇಳಿಜಾರು ಬಂಡೆಯ ಮೇಲೆ ಬಿದ್ದಿರುವ ಕಲ್ಲಿನ ಮೇಲೆ (ನಕಾಶೆ NLc)

ವಿಜಯನಗರ, ದೇವರಾಯ

ಶಕ 1332, (ದೃಕ್ಪುರಶಿಖೀಂದುಶಶಾಂಕ) ವಿರೋಧಿ, ಫಾಲ್ಗುಣ, ಪ್ರಥಮ ವಾಸರ, ಗುರುವಾರ = ಕ್ರಿ.ಶ. 1410, ಫೆಬ್ರವರಿ (ಶಕ 1331)

ಕನ್ನಡ

ದೇವರಾಯನ ವಂಶಾವಳಿಯನ್ನು ತಿಳಿಸುತ್ತದೆ. ಲಕ್ಷ್ಮೀಧರ ಅಮಾತ್ಯನು ಮಾಲ್ಯವಂತ ಪರ್ವತದ ದಕ್ಷಿಣ ದಿಕ್ಕಿನ ಗುಹೆಯಲ್ಲಿ ಗಣೇಶನ ವಿಗ್ರಹವನ್ನು ಪ್ರತಿಷ್ಠಾಪಿಸಿ ದೇವರ ಸೇವೆಗೆ ಭೂಮಿದಾನ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 38; ಸೌಇಇ, IV, ಸಂ. 267.

ಸಂ. 214

ವಿರೂಪಾಕ್ಷ ಬಜಾರದಲ್ಲಿ ಕಂಪ್ಲಿ ಮಠದ ಪೂರ್ವಕ್ಕೆ ಮಂಟಪದಲ್ಲಿಟ್ಟಿರುವ ನೀರಿನ ತೊಟ್ಟಿಯ ಮೇಲೆ (ನಕಾಶೆ NLc)

--

15-16ನೇ ಶತಮಾನ

ತೆಲುಗು

ಅಬರಾಜು ತಿಮಪನು ಕೃಷ್ಣ(ದೇವರ) ಹೆಸರಿನಲ್ಲಿ (ಶಾಸನ ಬರೆದಿರುವ ನೀರಿನ ತೊಟ್ಟಿಯನ್ನು) ದಾನ ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 33.

ಸಂ. 215

ವಿರೂಪಾಕ್ಷ ದೇವಸ್ಥಾನದ ನೈರುತ್ಯ ದಿಕ್ಕಿಗೆ ಹೇಮಕೂಟದ ಪಶ್ಚಿಮಕ್ಕೆ ಗುಂಡಿನ ಮೇಲೆ (ನಕಾಶೆ NLf)

--

ಶಕ 1312, ಪ್ರಮಾಧಿ, ಕಾರ್ತಿಕ ಬ. 10, ಬುಧವಾರ = ಕ್ರಿ.ಶ. 1390, ನವೆಂಬರ್ 2, ಬುಧವಾರ

ಕನ್ನಡ

ಕ್ರಿಯಾಶಕ್ತಿ ವೊಡೆಯರ ಶಿಷ್ಯ ಭಕ್ತರ ನಾಗಪ್ಪನು ವಿನಾಯಕ ಅಶ್ವತ್ಥಬಾವಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 26.

ಸಂ. 216

ಅದೇ ಗುಂಡಿನ ಹತ್ತಿರ ಇನ್ನೊಂದು ಗುಂಡಿನ ಮೇಲೆ (ನಕಾಶೆ NLf)

--

ಶಕ 1299, ರುಧಿರೋದ್ಗಾರಿ, ಆಶ್ವೀಜ, ಬ. 10 = ಕ್ರಿ.ಶ. 1377, ಸೆಪ್ಟೆಂಬರ್ 27, (ಪಿಂಗಳ ಸಂವತ್ಸರ)

ಕನ್ನಡ

ತ್ರಯಂಬಕ (ದೇವರ) ಭಕ್ತ ನಾಗಪ್ಪನು ಬಾವಿಯನ್ನು ಕಟ್ಟಿಸಿ ಅಶ್ವತ್ಥ ಮರವನ್ನು ನೆಡಿಸಿದನೆಂದು ತಿಳಿಸುತ್ತದೆ. ಈ ಸ್ಥಳವನ್ನು ತೀರ್ಥವೆಂದು ಉಲ್ಲೇಖಿಸಿದೆ. ಕೊನೆಯಲ್ಲಿ ಪ್ರಸನ್ನ ಬೆನಕನ (ಗಣೇಶನ) ಸ್ತುತಿಯಿದೆ.

ವಿಪ್ರೊರೀ, 1984-87, ಸಂ. 27.

ಸಂ. 217

ಹೇಮಕೂಟದ ನೈರುತ್ಯ ದಿಕ್ಕಿಗೆ ಹಳೆ ಕೊಳದ ಹತ್ತಿರ ಗುಂಡಿನ ಮೇಲೆ (ನಕಾಶೆ NLf)

--

15-16ನೇ ಶತಮಾನ

ಕನ್ನಡ

ಕವಿಗಳ ನಿವೇಶನವನ್ನು ಸೂಚಿಸುತ್ತದೆ.

ವಿಪ್ರೊರೀ, 1983-84, ಸಂ. 33.

ಸಂ. 218

ಹೇಮಕೂಟದ ದಕ್ಷಿಣ ದಿಕ್ಕಿಗೆ ಕೋಟೆಯ ಹೊರಗೆ ಬಂಡೆಯ ಮೇಲೆ (ನಕಾಶೆ NLg)

--

ಕ್ರೋಧನ, ಮಾಘ ಶು. 10

ಕನ್ನಡ

ಕ್ರಮಬದ್ಧವಲ್ಲದ ಬರಹವುಳ್ಳ ಈ ಶಾಸನದ ಉದ್ದೇಶ ಸ್ಪಷ್ಟವಾಗಿಲ್ಲ. ಆದಾಗ್ಯೂ ಶಿವಾಲಯವನ್ನು ಕಟ್ಟಿಸಿದ ಬಗ್ಗೆ ಉಲ್ಲೇಖಿಸುತ್ತದೆ.

ವಿಪ್ರೊರೀ, 1984-87, ಸಂ. 28.

ಸಂ. 219

ಹೇಮಕೂಟದ ದಕ್ಷಿಣ ದಿಕ್ಕಿಗೆ ಕೋಟೆಯ ಹೊರಗೆ ಬಂಡೆಯ ಮೇಲೆ ಮೆಟ್ಟಿಲುಗಳ ಪಕ್ಕದಲ್ಲಿ (ನಕಾಶೆ NLg)

--

15-16ನೇ ಶತಮಾನ

ಕನ್ನಡ

ಕಂಪಣ್ಣನು ಸೋಪಾನ ಮಾಡಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 34.

ಸಂ. 220

ಕಡಲೆಕಾಳು ಗಣೇಶನ ಆಗ್ನೇಯ ದಿಕ್ಕಿಗಿರುವ ದೇವಸ್ಥಾನದ ಪಶ್ಚಿಮದ ಗೋಡೆಯ ಮೇಲೆ (ನಕಾಶೆ NLh)

--

ಆನಂದ, ಮಾಘ ಶು. 13

ಕನ್ನಡ

ತಿರುಮಲಭಟ್ಟನಿಗೆ ಪುಣ್ಯವಾಗಲೆಂದು ಅವನ ಮಗ(?) ತಿರುವೆಂಗಳನಾಥ ದೇವರ ಸೇವೆಗೆ ಭೂಮಿದಾನ ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 29.

ಸಂ. 221

ಅದೇ ಶಾಸನದ ಕೆಳಗೆ (ನಕಾಶೆ NLh)

--

ಪ್ಲವಂಗ, ಕಾರ್ತಿಕ ಬ. 1

ಕನ್ನಡ

ಲೆಕ್ಕದ ನಾಗಿದೇವಭಟ್ಟನು ತಾರ್ಕಿಕ ಎಲ್ಲಂಭಟ್ಟನಿಗೆ ಮುಂಜ, ತ್ರಿಕಾಲ ದೇವಪೂಜೆ, ಬ್ರಹ್ಮಯಜ್ಞ, ದೇವಕಾರ್ಯ, ಪಿತೃಕಾರ್ಯ ಮತ್ತು ಆವನಕರ್ಮ ಆಚರಿಸುವ ಸಂದರ್ಭದಲ್ಲಿ ಗಾಯತ್ರಿ ಮಂತ್ರ ಜಪಿಸಲು ಪತ್ರ ಕೊಟ್ಟ ವಿಷಯವನ್ನು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 30.

ಸಂ. 222

ಅದೇ ದೇವಸ್ಥಾನದಲ್ಲಿ ಉತ್ತರ ಗೋಡೆಯ ಮೇಲೆ (ನಕಾಶೆ NLh)

--

15-16ನೇ ಶತಮಾನ

ಕನ್ನಡ

ಹಾಳಾಗಿದೆ. ತಾರ್ಕಿಕ ತಿರುಮಲಭಟ್ಟನ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 71.

ಸಂ. 223

ಕೃಷ್ಣ ದೇವಸ್ಥಾನದ ಹತ್ತಿರ ವಿರೂಪಾಕ್ಷ ದೇವಸ್ಥಾನಕ್ಕೆ ಹೋಗುವ ಹಳೆ ರಸ್ತೆಯ ಪಶ್ಚಿಮಕ್ಕೆ ಗುಂಡಿನ ಮೇಲೆ (ನಕಾಶೆ NLh)

--

15-16ನೇ ಶತಮಾನ

ತೆಲುಗು

ತಿರುಪತಿ ಬೇಹಾರಿ ಗಂಧಂ ಬಸವಯ್ಯನ ಸೇವೆಯನ್ನು ಸೂಚಿಸುತ್ತದೆ.

ವಿಪ್ರೊರೀ, 1983-84, ಸಂ. 71.

ಸಂ. 224

ಅದೇ ಗುಂಡಿನ ಮೇಲೆ (ನಕಾಶೆ NLh)

--

15-16ನೇ ಶತಮಾನ

ತೆಲುಗು

''ವೈಶ್ಯ'' ಎಂದು ಬರೆದಿದೆ.

ವಿಪ್ರೊರೀ, 1983-84, ಸಂ. 72.

ಸಂ. 225

ಕೃಷ್ಣ ದೇವಸ್ಥಾನದ ಹತ್ತಿರವಿರುವ ಆಂಜನೇಯ ದೇವಸ್ಥಾನದ ಮುಂದೆ ನೆಲದ ಬಂಡೆಯ ಮೇಲೆ (ನಕಾಶೆ NLh)

ವಿಜಯನಗರ, ಬುಕ್ಕ

ಶಕ 1428, ಮಾರ್ಗಶಿರ ಶು. 11, ರೇವತಿ, ಬುಧವಾರ = ಕ್ರಿ.ಶ. 1506, ನವೆಂಬರ್ 25

ಸಂಸ್ಕೃತ, ಕನ್ನಡ

ಹಾಳಾಗಿದೆ. ಮಂತ್ರಿ ಬಸವದಂಣಾಯಕನು ಆದಿನಾಥ ಮತ್ತು ಪ್ರಗತನಾಥ ದೇವರಿಗೆ ಮಠ, ಮಂಟಪ, ತೋರಣ ಮತ್ತು [ಮ]ಡುಗಳನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಚಂದ್ರ ಮತ್ತು ಗುರು ಗ್ರಹಗಳು ಕ್ರಮವಾಗಿ ಮೀನ ಮತ್ತು ಮೇಷ ರಾಶಿಗಳಲ್ಲಿ ಮತ್ತು ಸೂರ್ಯನು ಇನ್ನುಳಿದ ಗ್ರಹಗಳೊಂದಿಗೆ ವೃಶ್ಚಿಕ ರಾಶಿಯಲ್ಲಿ ಇದ್ದುದನ್ನು ತಿಳಿಸುತ್ತದೆ.

ಆರಿಇಎ, 1975-76, ಸಂ. ಬಿ 106.

ಸಂ. 226

ಲಕ್ಷ್ಮೀನರಸಿಂಹ ದೇವಸ್ಥಾನದ ಎದುರಿಗೆ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ NLm)

ವಿಜಯನಗರ, ಕೃಷ್ಣರಾಯ

ಶಕ 1451, ವಿರೋಧಿ, ವೈಶಾಖ ಶು. 15 ಶು(ಕ್ರವಾರ) = ಕ್ರಿ.ಶ. 1529, ಏಪ್ರಿಲ್ 23

ಕನ್ನಡ, ಸಂಸ್ಕೃತ; ಕನ್ನಡ

ಅರಸನು ಕೃಷ್ಣಾಪುರದಲ್ಲಿ ಲಕ್ಷ್ಮೀನರಸಿಂಹದೇವರ ಮೂರ್ತಿಯನ್ನು ಆರ್ಯ ಕೃಷ್ಣ ಭಟ್ಟರಿಂದ ಪ್ರತಿಷ್ಠಾಪಿಸಿ, ಗುತ್ತಿ ಸೀಮೆಯ ಭಾಗವಾದ ಹೆನ್ನೆನಾಡಿನಲ್ಲಿರುವ ವಂಗನೂರು ಗ್ರಾಮವನ್ನು ಮತ್ತು ಉರುವಕೊಂಡೆ ಸೀಮೆಯಲ್ಲಿರುವ ಬೆಲಚಿಂತೆ ಗ್ರಾಮವನ್ನು ದೇವರಿಗೆ ದಾನವಾಗಿ ಕೊಟ್ಟನು. ದೇವರ ಪ್ರತಿಷ್ಠಾಪನೆಯು ಶಕ 1450, ಸರ್ವಧಾರಿ, ಚೈತ್ರ ಶು. ಮದನ ತಿಥಿ ಗುರುವಾರದಂದು (ಕ್ರಿ.ಶ. 1528, ಏಪ್ರಿಲ್ 2) ನಡೆಯಿತೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 34; ಎಇ, I, ಪು. 398-402; ಸೌಇಇ, IV, ಸಂ. 264.

ಸಂ. 227

ಕೃಷ್ಣ ದೇವಸ್ಥಾನದ ಮುಂದಿರುವ ಕಲ್ಲಿನ ಮೇಲೆ (ನಕಾಶೆ NLn)

ವಿಜಯನಗರ, ಕೃಷ್ಣರಾಯ

ಶಕ 1435, ಭವ, ಪಾಲ್ಗುಣ ಶು. 3, ಶುಕ್ರ(ವಾರ) = ಕ್ರಿ.ಶ. 1515, ಫೆಬ್ರವರಿ 16, ಶುಕ್ರವಾರ (ಶಕ 1436)

ಸಂಸ್ಕೃತ, ಕನ್ನಡ; ಕನ್ನಡ

ಅರಸನು ಉದಯಗಿರಿಯಿಂದ ತಂದ ಬಾಲಕೃಷ್ಣ ದೇವರನ್ನು ಪ್ರತಿಷ್ಠಾಪಿಸಿದ ವಿಷಯ ತಿಳಿಸುತ್ತದೆ. ಅರಸನು ಅತ್ತಿವಟೆ ಗ್ರಾಮ, ಹೊಸೂರ ಮಾಗಣಿಯಲ್ಲಿರುವ ಮುದಲಾಪುರ ಗ್ರಾಮ, ಕಂಪಿಲೆ ಮಾಗಣಿಯಲ್ಲಿರುವ ದೇವಲಾಪುರ, ಕಳಸಾಪುರಕ್ಕೆ ಸೇರಿದ ಹರಿಯಸಮುದ್ರ, ತೊಗಲಗಲ್ಲು, ಬಾದನಹಟಿ, ತೆಕ್ಕಲಕೋಟೆಗೆ ಸೇರಿದ ರುದ್ರಪಾದ ಗ್ರಾಮಗಳನ್ನು ಮತ್ತು ಕೃಷ್ಣಾಪುರದ ಸ್ಥಳಸುಂಕವನ್ನು ದೇವರ ಸೇವೆಗೆ ದಾನ ಮಾಡಿದನೆಂದು ತಿಳಿಸುತ್ತದೆ. ಅಲ್ಲದೆ ಬ್ರಾಹ್ಮಣರಿಗೆ ಈ ಗ್ರಾಮಗಳಲ್ಲಿ ಭೂಮಿಯನ್ನು ದಾನ ಮಾಡಿದನು (ವಿವರಗಳಿವೆ).

ಆ್ಯರಿಸೌಇಎ, 1889, ಸಂ. 25; ಆ್ಯರಿಸೌಇಎ, 1908, 1907ರ ಸಂ. ಬಿ 498; ಸೌಇಇ, IV, ಸಂ. 254; XXIII, ಸಂ. 498.

ಸಂ. 228

ಅದೇ ದೇವಸ್ಥಾನದ ಮುಂದೆ ಸಣ್ಣ ಗುಡಿಯ ಗೋಡೆಯ ಮೇಲೆ (ನಕಾಶೆ NLn)

ವಿಜಯನಗರ, ಕೃಷ್ಣರಾಯ

ಶಕ 1435, ಭವ, ಫಾಲ್ಗುಣ, ಶು. 3, ಶುಕ್ರವಾರ = ಕ್ರಿ.ಶ. 1515, ಫೆಬ್ರವರಿ 16, ಶುಕ್ರವಾರ (ಶಕ 1436)

ಸಂಸ್ಕೃತ, ಕನ್ನಡ; ಕನ್ನಡ

ಮೇಲಿನ ಶಾಸನದಲ್ಲಿ ತಿಳಿಸಿದ ಗ್ರಾಮಗಳನ್ನೇ ದಾನ ಮಾಡಿದ ವಿಷಯ ತಿಳಿಸುತ್ತದೆ. ನಂತರ ಈಶ್ವರ ಸಂವತ್ಸರ, ಮಾರ್ಗಶಿರ ಬಹುಳ 5ರಂದು ರಾಯದುರ್ಗಸೀಮೆಯಲ್ಲಿರುವ ಬ್ರಹ್ಮಸಮುದ್ರ ಗ್ರಾಮವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ದೇವರ ಪ್ರತಿಷ್ಠಾಕಾಲದಲ್ಲಿ ಕೊಟ್ಟ ಮುದಲಾಪುರ ಗ್ರಾಮವನ್ನು ಪ್ರಮಾಧಿ ಸಂವತ್ಸರ, ಕಾರ್ತಿಕ ಶುದ್ಧ 11ರಂದು ತಿರುಮಲದೇವಿಪಟ್ಟಣ ಮಾಗಣಿಗೆ ಸೇರಿಸಿದ ವಿಷಯವನ್ನು ತಿಳಿಸುತ್ತದೆ. ಈ ಗ್ರಾಮದ ಬದಲಾಗಿ ರಾಮಾಪುರ ಗ್ರಾಮವನ್ನು ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ತೊಗಲಗಲ್ಲು ಗ್ರಾಮವನ್ನು ಅನಂತಶಯನ ದೇವರಿಗೆ ಪುನಃ ದಾನ ಕೊಟ್ಟಿದ್ದನ್ನು ಮತ್ತು ಮೊದಲು ಅನಂತಶಯನ ದೇವರಿಗೆ ದಾನ ಕೊಟ್ಟ ಸೊಂಡೂರು ಸೀಮೆಯೊಳಗಿನ ಬೂದಿಗುಪ್ಪೆ ಗ್ರಾಮವನ್ನು ನಂತರ ಬಾಲಕೃಷ್ಣ ದೇವರಿಗೆ ದಾನ ಕೊಟ್ಟಿದ್ದನ್ನೂ ತಿಳಿಸುತ್ತದೆ. ಅನೇಕ ಬ್ರಾಹ್ಮಣರಿಗೆ ಭೂಮಿ ದಾನ ಮಾಡಿದ ವಿಷಯದ (ವಿವರಗಳಿವೆ) ದಾಖಲೆಯೂ ಇದೆ.

ಆ್ಯರಿಸೌಇಎ, 1889, ಸಂ. 26; ಸೌಇಇ, IV, ಸಂ. 255.

ಸಂ. 229

ಅದೇ ದೇವಸ್ಥಾನದ ಗೋಪುರದ ಬಲ ಭಾಗದಲ್ಲಿ (ನಕಾಶೆ NLn)
ವಿಜಯನಗರ, ಅಚ್ಯುತರಾಯ
ಶಕ 1461, ವಿಕಾರಿ, ಭಾದ್ರಪದ .. 12, ಭೂಮಿಸುತವಾರ = ಕ್ರಿ.ಶ. 1539, ಆಗಸ್ಟ್-ಸೆಪ್ಟೆಂಬರ್
ಸಂಸ್ಕೃತ, ಕನ್ನಡ
ಅರಸನು ಆನಂದನಿಧಿ ದಾನ ಮಾಡಿದ್ದನ್ನು ತಿಳಿಸುತ್ತದೆ.
ಆ್ಯರಿಸೌಇಎ, 1889, ಸಂ. 27; ಸೌಇಇ, IV, ಸಂ. 256.

ಸಂ. 230

ಅದೇ ಸ್ಥಳದಲ್ಲಿ (ನಕಾಶೆ NLn)
ವಿಜಯನಗರ, ಅಚ್ಯುತರಾಯ
ಶಕ 1461, ವಿಕಾರಿ, ಭಾದ್ರಪದ .. 12, ಭೂಮಿಸುತವಾರ = ಕ್ರಿ.ಶ. 1539, ಆಗಸ್ಟ್ - ಸೆಪ್ಟೆಂಬರ್
ಸಂಸ್ಕೃತ, ನಾಗರಿ
ಮೇಲಿನ ಶಾಸನದ ಪ್ರತಿ
ಆ್ಯರಿಸೌಇಎ, 1889, ಸಂ. 28; ಸೌಇಇ, IV, ಸಂ. 257.

ಸಂ. 231

ಅದೇ ದೇವಸ್ಥಾನದ ದಕ್ಷಿಣ ದಿಕ್ಕಿನ ಗೋಡೆಯ ಮೇಲೆ (ನಕಾಶೆ NLn)
ವಿಜಯನಗರ, ಅಚ್ಯುತದೇವರಾಯ
ಶಕ 1455, ನಂದನ, ಮಾರ್ಗಶಿರ ಶು. 12, ಸೋಮವಾರ = ಕ್ರಿ.ಶ. 1532, ಡಿಸೆಂಬರ್ 9, ಸೋಮವಾರ (ಶಕ 1454)
ಕನ್ನಡ
ರಾಜ ಮತ್ತು ರಾಣಿ ವರದಾಜಿ ಅಮ್ಮನವರು ಬಾಲಕೃಷ್ಣದೇವರ ಸೇವೆಗೆ ಹಣವನ್ನು ದಾನ ಮಾಡಿದರೆಂದು ತಿಳಿಸುತ್ತದೆ.
ಆ್ಯರಿಸೌಇಎ, 1889, ಸಂ. 33, ಸೌಇಇ, IV, ಸಂ. 262.

ಸಂ. 232

ಅದೇ ದೇವಸ್ಥಾನದ ಉತ್ತರ ದಿಕ್ಕಿನ ಗೋಡೆಯ ಮೇಲೆ (ನಕಾಶೆ NLn)
ವಿಜಯನಗರ, ಸದಾಶಿವದೇವ
ಕ್ರೋಧಿ
ಕನ್ನಡ
ಪಾತ್ರದ ಬೇಪಾಯಿ ಬಾಲಕೃಷ್ಣ ದೇವರ ಸೇವೆಗೆ ಭೂಮಿ ದಾನ ಮಾಡಿದನೆಂದು ತಿಳಿಸುತ್ತದೆ.
ಆ್ಯರಿಸೌಇಎ, 1889, ಸಂ. 33ಎ, ಸೌಇಇ, IV, ಸಂ. 263.

ಸಂ. 233

ಬೃಹದಾಕಾರದ ಲಕ್ಷ್ಮೀನರಸಿಂಹ ಮೂರ್ತಿಯ ಪೂರ್ವ ದಿಕ್ಕಿಗೆ ಬಾಳೆ ತೋಟದಲ್ಲಿ ಗುಂಡಿನ ಮೇಲೆ (ನಕಾಶೆ NLr)

--

15-16ನೇ ಶತಮಾನ

ಕನ್ನಡ

ಹೇಮಕೂಟದ ವರದ ಸರಸಿಂಹ ದೇವರ ಹೂವಿನ ತೋಟದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 81.

ಸಂ. 234

ಚಂಡಿಕೇಶ್ವರ ದೇವಸ್ಥಾನದಲ್ಲಿ ತುಂಡಾಗಿರುವ ಕಲ್ಲಿನ ಮೇಲೆ (ನಕಾಶೆ NLw)

ವಿಜಯನಗರ; ಸದಾಶಿವದೇವ

ಶಕ 1467, ವಿಶ್ವಾವಸು, ಜ್ಯೇಷ್ಠ ಶು. 11, ಶುಕ್ರವಾರ = ಕ್ರಿ.ಶ. 1545, ಮೇ 22, ಶುಕ್ರವಾರ

ಕನ್ನಡ

ಸದಾಶಿವದೇವ ಮಹಾರಾಯ, ರಾಮರಾಜಯ ಮತ್ತು ಪ್ರಧಾನಿ ಎರತಿಮ್ಮರಾಜಯರಿಗೆ ಪುಣ್ಯವಾಗಲೆಂದು ದಳವಾಯಿ ಜಂಗಮಯನು ಹಿರಿಯಕಾಲುವೆಯ ಛತ್ರದ ಹತ್ತಿರ ಕಟ್ಟಿಸಿದ ತಿರು .... ದೇವರಿಗೆ ಚಿನ್ನದ ಆಭರಣಗಳನ್ನು ದಾನ ಮಾಡಿದನು. (ಹಿರಿಯ ಕಾಲುವೆಯ) ಛತ್ರಕ್ಕೆ ಧಾನ್ಯಗಳನ್ನು ಒದಗಿಸುವ ವ್ಯಾಪಾರಿಗಳು ಅದೇ ದೇವರಿಗೆ ಹಣ ಮತ್ತು ಅಕ್ಕಿ, ಹೆಸರು, ಎಣ್ಣೆ ಮುಂತಾದವುಗಳ ದಾನವನ್ನು ಮಾಡಿದರು.

ಆ್ಯರಿಸೌಇಎ, 1889, ಸಂ. 35; 1908, ಸಂ. 1907 ರ 499; ಸೌಇಇ, IV, ಸಂ. 265; XXIII, ಸಂ. 499.

ಸಂ. 235

ಉದ್ದಾನ ವೀರಭದ್ರ ದೇವಸ್ಥಾನದ ಪಶ್ಚಿಮಕ್ಕೆ ನಿಲ್ಲಿಸಿರುವ ಎರಡು ಕಲ್ಲುಗಳ ಮೇಲೆ (ನಕಾಶೆ NLw)

ವಿಜಯನಗರ, ಸದಾಶಿವದೇವ

ಶಕ 1467, ವಿಶ್ವಾವಸು, ಜ್ಯೇಷ್ಠ ಶು. 11, ಶುಕ್ರ(ವಾರ) = ಕ್ರಿ.ಶ. 1545, ಮೇ 22, ಶುಕ್ರವಾರ

ಕನ್ನಡ

ದಳವಾಯಿ ಜಂಗಮಯ್ಯನು ಹಿರಿಯ ಕಾಲುವೆಯ ಛತ್ರದ ಮುದುವೀರಣ್ಣ ದೇವರನ್ನು ಪ್ರತಿಷ್ಠಾಪಿಸಿ ಚಿನ್ನದ ಆಭರಣಗಳನ್ನು ಮತ್ತು ಬೆಳ್ಳಿಯ ಉಪಕರಣಗಳನ್ನು ಮತ್ತು ಹಿರಿಯ ಸತ್ರಕ್ಕೆ ಒದಗಿಸುವ ಪದಾರ್ಥಗಳ ಮೇಲೆ ವಿಧಿಸಿದ ತೆರಿಗೆ ಮತ್ತು ಕೃಷ್ಣಾಪುರ ಪೇಟೆ ಮತ್ತು ಅಚ್ಯುತರಾಯ ಪೇಟೆಯ ಅಂಗಡಿಗಳ ಮೇಲೆ ವಿಧಿಸಿದ ತೆರಿಗೆಗಳನ್ನು ಸದಾಶಿವ ಮಹಾರಾಯ, ರಾಮರಾಜಯ್ಯ ಮತ್ತು ಪ್ರಧಾನಿ ಎರತಿಮ್ಮರಾಜಯ್ಯನವರಿಗೆ ಪುಣ್ಯವಾಗಲೆಂದು ಅದೇ ದೇವರಿಗೆ ದಾನ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 36 ಮತ್ತು 37; ಸೌಇಇ, ಸಂ. 266.

ಸಂ. 236

ಅದೇ ದೇವಸ್ಥಾನದ ಪೂರ್ವಕ್ಕೆ ಕೋಟೆಯಲ್ಲಿನ ಕೊತ್ತಳದ ಮೂಲೆ ಕಲ್ಲಿನ ಮೇಲೆ (ನಕಾಶೆ NLz)

--

15-16ನೇ ಶತಮಾನ

ಕನ್ನಡ

"ಶ್ರೀ ಜಲಸೇನ (ಜಲಶಯನ) ದೇವರ ಕೊತಳ" ಎಂದು ಬರೆದಿದೆ.

ವಿಪ್ರೊರಿ, 1984-87, ಸಂ. 88.

ಸಂ. 237

ವಿರೂಪಾಕ್ಷ ಬಜಾರದ ಕೊನೆಯಲ್ಲಿ ಉತ್ತರ ದಿಕ್ಕಿನ ದೊಡ್ಡ ಮಂಟಪದ ಉತ್ತರ ಗೋಡೆಯ ಮೇಲೆ (ನಕಾಶೆ NMa)

--

15-16ನೇ ಶತಮಾನ

ಕನ್ನಡ

ಸರ್ಪದ (ಹೆಡೆಗಳ) ಕೊಳ್ಹವನ್ನು (ಗೊನೆ) ಕೆತ್ತಿಸಿದರೆಂದು ತಿಳಿಸುತ್ತದೆ.

ವಿಪ್ರೊರಿ, 1983-84, ಸಂ. 39.

ಸಂ. 238

ವಿರೂಪಾಕ್ಷ ಬಜಾರದ ದಕ್ಷಿಣ ದಿಕ್ಕಿಗೆ ಕರಿಸಿದ್ದಪ್ಪನ ಮಠದ ಉತ್ತರಕ್ಕೆ ಬಂಡೆಯ ಮೇಲೆ (ನಕಾಶೆ NMa)

--

15-16ನೇ ಶತಮಾನ

ಕನ್ನಡ

ಕರಿಸಿದ್ದಪ್ಪನ ಮಠದ ಮಾನ್ಯದ (ಭೂಮಿ) ಬಗ್ಗೆ ತಿಳಿಸುತ್ತದೆ.

ವಿಪ್ರೊರಿ, 1984-87, ಸಂ. 34.

ಸಂ. 239

ವಿರೂಪಾಕ್ಷ ಬಜಾರದ ಕೊನೆಗೆ ಮತಂಗ ಪರ್ವತದ ವಾಯುವ್ಯ ದಿಕ್ಕಿಗೆ ಮಂಟಪದ ಹತ್ತಿರ ಬಂಡೆಯ ಮೇಲೆ (ನಕಾಶೆ NMb)

--

15-16ನೇ ಶತಮಾನ

ಕನ್ನಡ

ಕಲ್ಲುಕುಟಿಗ ಬಸವನು ಮಂಟಪವನ್ನು ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರಿೀ, 1983-84, ಸಂ. 40.

ಸಂ. 240

ಅಚ್ಯುತರಾಯ ಬಜಾರದಲ್ಲಿ ಉತ್ತರ ದಿಕ್ಕಿನ ಮಂಟಪದ ಕಂಬಗಳ ಸಾಲಿನಲ್ಲಿ ಒಂದು ಕಂಬದ ಮೇಲೆ (ನಕಾಶೆ NMc)

--

16ನೇ ಶತಮಾನ

ಕನ್ನಡ

ಅಚ್ಯುತರಾಯ ಪೇಟೆಯಲ್ಲಿ ತಿರುವೆಂಗಳನಾಥ ದೇವರ ತೇರುಬೀದಿಯಲ್ಲಿರುವ ಹನುಮಂತ ದೇವರಿಗೆ ಅಕ್ಕಿ ಮತ್ತು ಎಣ್ಣೆಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ವಿಪ್ರೊರಿೀ, 1984-87, ಸಂ. 72.

ಸಂ. 241

ಕರಿಯಸಿದ್ಧಪ್ಪನ ಮಠದ ದಕ್ಷಿಣ ದಿಕ್ಕಿಗೆ ಬಂಡೆಯ ಮೇಲೆ (ನಕಾಶೆ NMf)

--

14-15ನೇ ಶತಮಾನ

ಕನ್ನಡ

ಬುಕ್ಕನು ಸ್ವರ್ಗ (?) ಸೇರಿದ ಉಲ್ಲೇಖವಿದೆ.

ವಿಪ್ರೊರಿೀ, 1984-87, ಸಂ. 35.

ಸಂ. 242

ಅದೇ ಕಲ್ಲಿನ ಮೇಲೆ (ನಕಾಶೆ NMf)

--

15-16ನೇ ಶತಮಾನ

ಕನ್ನಡ

ನಂಜುಂಡೇಶ ದೇವರ ಉಲ್ಲೇಖವಿದೆ.

ವಿಪ್ರೊರಿೀ, 1984-87, ಸಂ. 36.

ಸಂ. 243

ವಿರೂಪಾಕ್ಷ ಬಜಾರದ ಕೊನೆಯಲ್ಲಿ ನಂದಿ ಮಂಟಪದ ದಕ್ಷಿಣ ದಿಕ್ಕಿಗೆ ಮತಂಗ ಪರ್ವತದ ಕೆಳಗೆ ದೊಡ್ಡ ಬಂಡೆಯ ಮೇಲೆ (ನಕಾಶೆ NMf)

--

15-16ನೇ ಶತಮಾನ

ಕನ್ನಡ

ಗಂಗಾಧರ ದೇವರ ಪ್ರತಿಷ್ಠೆಯ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 37.

ಸಂ. 244

ಅದೇ ಬಂಡೆಯ ಮೇಲೆ (ನಕಾಶೆ NMf)

--

15-16ನೇ ಶತಮಾನ

ಕನ್ನಡ

ಮಹಾದೇವಿಯಕ್ಕನ ಬಾವಿಯ ಬಗ್ಗೆ ತಿಳಿಸುತ್ತದೆ. ಅದನ್ನು ಕೆಳಬಾವಿ ಎಂದೂ ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 38.

ಸಂ. 245

ಮತಂಗ ಪರ್ವತದ ಮೇಲೆ ದಕ್ಷಿಣ ದಿಕ್ಕಿನಲ್ಲಿರುವ ಮೆಟ್ಟಿಲುಗಳ ಉತ್ತರಕ್ಕೆ ಬಂಡೆಯ ಮೇಲೆ (ನಕಾಶೆ NMg)

--

15-16ನೇ ಶತಮಾನ

ಸಂಸ್ಕೃತ, ಕನ್ನಡ

ಅಳಿಸಿಹೋಗಿದೆ. ವೀರಭದ್ರ ದೇವರ ಉಲ್ಲೇಖವಿದೆ.

ವಿಪ್ರೊರೀ, 1983-84, ಸಂ. 44.

ಸಂ. 246

ಮತಂಗ ಪರ್ವತದ ಮೇಲೆ ವೀರಭದ್ರ ದೇವಸ್ಥಾನದ ದಕ್ಷಿಣಕ್ಕೆ ಬಂಡೆಯ ಮೇಲೆ (ನಕಾಶೆ NMg)

--

15-16ನೇ ಶತಮಾನ

ಕನ್ನಡ

ಅಳಿಸಿಹೋಗಿದೆ. ಅರವೀಟಿ ಕೊಂಡರಾಜನು ಮತಂಗ ಪರ್ವತದ ಮೇಲಿರುವ ವೀರಭದ್ರದೇವರಿಗೆ ದಾನ ಮಾಡಿದ ವಿಷಯ ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 45.

ಸಂ. 247

ಅದೇ ದೇವಸ್ಥಾನದ ಉತ್ತರ ದಿಕ್ಕಿಗಿರುವ ಮೆಟ್ಟಿಲುಗಳ ಪಕ್ಕದಲ್ಲಿ ಬಂಡೆಯ ಮೇಲೆ (ನಕಾಶೆ NMg)

--

15-16ನೇ ಶತಮಾನ

ಕನ್ನಡ

ಅಳಿಸಿಹೋಗಿದೆ. ಗೋಮೂರ್ತಿ ಮತ್ತು ಮಾದೇವಿ ಎಂಬ ವ್ಯಕ್ತಿಗಳ ಮತ್ತು ಮತಂಗ ಪರ್ವತದ ಉಲ್ಲೇಖವಿದೆ.

ವಿಪ್ರೊರೀ, 1983-84, ಸಂ. 46.

ಸಂ. 248

ಮೇಲಿನ ಶಾಸನದ ಹತ್ತಿರ ಇನ್ನೊಂದು ಬಂಡೆಯ ಮೇಲೆ (ನಕಾಶೆ NMg)

--

ಆನಂದ, ಶ್ರಾವಣ ಶು. 1, ಭಾ(ನುವಾರ)

ಕನ್ನಡ

ರಾಮಯನ ಮಗ ಪಿರಿಯ ನಾಗಣನು ವಿರೂಪಾಕ್ಷದೇವರ (ದೇವಸ್ಥಾನದ) ಶಿಖರಕ್ಕೆ ನಮಸ್ಕಾರ ಮಾಡಿ ಕೃತಾರ್ಥನಾದನೆಂದು ತಿಳಿಸುತ್ತದೆ. ಅಲ್ಲದೆ ಕಂಪಣ್ಣನ ಮಗ ಮಲಪನು (ಅದೇ ಶಿಖರಕ್ಕೆ ನಮಸ್ಕಾರ ಮಾಡಿ) ಕೃತಾರ್ಥನಾದನೆಂದೂ ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 47.

ಸಂ. 249

ಅದೇ ಬಂಡೆಯ ಮೇಲೆ ಮೇಲಿನ ಶಾಸನದ ಕೆಳಗೆ (ನಕಾಶೆ NMg)

--

15-16ನೇ ಶತಮಾನ

ಕನ್ನಡ

ಮತ್ತರಸನ ಮಗಳು ರಾಮಾಯಿಯು ವಿರೂಪಾಕ್ಷದೇವರ ಕಳಶವನ್ನು ನೋಡಿ, ನಮಸ್ಕಾರ ಮಾಡಿ ಕೃತಾರ್ಥಳಾದಳೆಂದು ತಿಳಿಸುತ್ತದೆ. ಅಲ್ಲದೆ ರಾಯಣ್ಣ, ದೂಭಪ್ಪನ ಮಗ ಮಯನಪ್ಪ, ಮಯಿಲಪ್ಪನ ತಾಯಿ ಸಾತಾಯಿ, ಮಲ್ಲಪ್ಪ ವೂಲಪ, ಮಾಯಕ, ಮಾಯಕನ ಮಗಳು ಪೂವಾಯಿ, ಕಲ್ಲಾಯಿ ಮತ್ತು ನಿಟೂರ ದೇವಣ್ಣರನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1983-84, ಸಂ. 48.

ಸಂ. 250

ಮೇಲಿನ ಶಾಸನದ ಕೆಳಗೆ (ನಕಾಶೆ NMg)

--

ಪಿಂಗಳ, ಫಾಲ್ಗುಣ, ಶು. 10, ಆ(ದಿವಾರ)

ಕನ್ನಡ

ಕಾಮಯವೆಯ ಶಿಷ್ಯನೂ ಸಾವಣ್ಣ ಮತ್ತು ಮಂಚೆಯವೆಯರ ಮಗನೂ ಆದ ಸಾಯಣ್ಣನು ಮತಂಗ ಪರ್ವತ ಮತ್ತು ವಿರೂಪಾಕ್ಷ (ದೇವರ) ದರ್ಶನ ಮಾಡಿ ಕೃತಾರ್ಥನಾದನೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 49.

ಸಂ. 251

ಮೇಲಿನ ಶಾಸನದ ಪಕ್ಕದಲ್ಲಿ (ನಕಾಶೆ NMg)

--

15-16ನೇ ಶತಮಾನ

ಕನ್ನಡ

ನಾಗೋಯಿಯ ಮಗ (?) ಮಯಿಲಣನು ಮತಂಗೇಶ್ವರ ದೇವರ ದರ್ಶನ ಮತ್ತು ವಿರೂಪಾಕ್ಷ ದೇವರ ದರ್ಶನಮಾಡಿ ಕೃತಾರ್ಥನಾದನೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 50.

ಸಂ. 252

ಅದೇ ದೇವಸ್ಥಾನದ ಉತ್ತರ ದಿಕ್ಕಿಗೆ ಅನೇಕ ಶಾಸನಗಳುಳ್ಳ ಬಂಡೆಯ ಮೇಲೆ ನಾಗರಿ ಲಿಪಿಯಲ್ಲಿರುವ ಶಾಸನದ ಕೆಳಗೆ (ನಕಾಶೆ NMg)

--

ರೌದ್ರಿ, ಆಶ್ವೀಜ. ಶು. 11, ಸೋಮವಾರ

ಕನ್ನಡ

ಲೊಂಬೆರಾಜನ (?) ಮಲಪನ ಮಗ ಅನಂತಪನು ಮತಂಗ ದೇವರ ದರ್ಶನ ಪಡೆದನೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 51.

ಸಂ. 253

ಅದೇ ಶಾಸನದ ಹತ್ತಿರ ಇನ್ನೊಂದು ಬಂಡೆಯ ಮೇಲೆ (ನಕಾಶೆ NMg)

--

ಆಂಗಿರಸ, ಪುಷ್ಯ ಶು. 6

ಕನ್ನಡ

ಕೇತಪ್ಪನ ಮಗ ಮಾದಣ್ಣನು ಮತಂಗ ಪರ್ವತಕ್ಕೆ ಬಂದು ವಿರೂಪಾಕ್ಷ ದೇವರನ್ನು ಕಂಡು ಕೃತಾರ್ಥನಾದನೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 52.

ಸಂ. 254

ಅದೇ ದೇವಸ್ಥಾನದ ವಾಯುವ್ಯ ದಿಕ್ಕಿಗೆ ಮೆಟ್ಟಿಲುಗಳ ಪಕ್ಕದಲ್ಲಿ ಗುಂಡಿನ ಮೇಲೆ (ನಕಾಶೆ NMg)

--

ಪ್ಲವಂಗ, ಭಾದ್ರಪದ ಬ. 1

ಕನ್ನಡ
ಬಾಗಿಯಹಳ್ಳಿಯ ಹರಿಯಪನ ಮಗ ನಾಗಪನು (ಮತಂಗ ಪರ್ವತಕ್ಕೆ) ಬಂದ ವಿಷಯ ತಿಳಿಸುತ್ತದೆ.
ವಿಪ್ರೊರೀ, 1983-84, ಸಂ. 53.

ಸಂ. 255

ಮತಂಗ ಪರ್ವತದ ಮೇಲೆ ದಕ್ಷಿಣ ದಿಕ್ಕಿಗಿರುವ ಮೆಟ್ಟಿಲುಗಳ ಪಕ್ಕದಲ್ಲಿ ಗುಂಡಿನ ಮೇಲೆ (ನಕಾಶೆ NMg)
ವಿಜಯನಗರ, ಅಚ್ಯುತದೇವ
ಶಕ 1454, ನಂದನ, ಚೈತ್ರ ಶು. 5, ಸೋಮವಾರ = ಕ್ರಿ.ಶ. 1532, ಮಾರ್ಚ್ 9
ಕನ್ನಡ
ಎಲೆಯ ಮಹಾನಾಡ ಹಲ್ಲರು ಮತಂಗದ ವೀರೇಶ್ವರನೆಂದೂ ಕರೆಯಲ್ಪಡುವ ವೀರಭದ್ರ ದೇವರಿಗೆ ಪ್ರತಿ ಒಂದು ಎಲೆಯ ಹೇರಿನ ಆದಾಯ ಮತ್ತು ಪ್ರತಿ ಮಂಗಳವಾರ ಪ್ರತಿಯೊಂದು ಅಂಗಡಿಯಿಂದ ಒಂದು ಕಾಸು ದಾನವಾಗಿ ಕೊಟ್ಟರೆಂದು ತಿಳಿಸುತ್ತದೆ.
ವಿಪ್ರೊರೀ, 1983-84, ಸಂ. 20.

ಸಂ. 256

ಅಚ್ಯುತರಾಯ ದೇವಸ್ಥಾನದ ಉತ್ತರ ಗೋಪುರದ ಬಲಗೋಡೆಯ ಮೇಲೆ (ನಕಾಶೆ NMh)
ವಿಜಯನಗರ, ಅಚ್ಯುತೇಂದ್ರ
--
ಸಂಸ್ಕೃತ, ಕನ್ನಡ
ಅರಸನ ಕೀರ್ತಿಯ ವರ್ಣನೆಯಿದೆ.
ಆ್ಯರಿಸೌಇಎ, 1922-23, ಸಂ. 1922ರ 715; ಸೌಇಇ, IX ii, ಸಂ. 598.

ಸಂ. 257

ಅದೇ ದೇವಸ್ಥಾನದ ಉತ್ತರ ಗೋಪುರದ ಎಡಕ್ಕೆ (ನಕಾಶೆ NMh)
ವಿಜಯನಗರ, ಅಚ್ಯುತದೇವ
ಶಕ 1456, ಜಯ, ವೈಶಾಖ ಶು. 13, ಭಾ(ನುವಾರ) = ಕ್ರಿ.ಶ. 1534, ಏಪ್ರಿಲ್ 26, ಭಾನುವಾರ
ಕನ್ನಡ
ಸಲಕರಾಜ ವೊಡೆಯನ ಮಗ ಮಹಾಮಂಡಲೇಶ್ವರ ಹಿರಿಯ ತಿರುಮಲರಾಜ ವೊಡೆಯನು ತುಂಗಭದ್ರಾ ದಂಡೆಯ ಮೇಲೆ ತಿರುವೆಂಗಳನಾಥ ದೇವರನ್ನು ಪ್ರತಿಷ್ಠಾಪಿಸಿ ದೇವರ ಸೇವೆಗೆ 3 ಗ್ರಾಮಗಳನ್ನು ದಾನವಾಗಿ ಕೊಟ್ಟು, ದೇವರ ಪ್ರಸಾದವನ್ನು 14 ಜನವರಿಗೆ ಹಂಚಬೇಕೆಂದು ಕಟ್ಟಳೆ ವಿಧಿಸಿದನು. ಹಿರಿಯ ತಿರುಮಲರಾಜನು ಅಚ್ಯುತರಾಯಪೇಟೆಯನ್ನು ಕಟ್ಟಿಸಿದನೆಂದೂ ತಿಳಿಸುತ್ತದೆ. ಅಚ್ಯುತರಾಯ ಪೇಟೆಯ ಚತುಸೀಮೆಯ ವಿವರ ಹೀಗಿದೆ: ಪಶ್ಚಿಮಕ್ಕೆ ಮತಂಗ ಪರ್ವತ, ಪೂರ್ವಕ್ಕೆ ತಿಪರಾಜನ ತೋಟ, ಉತ್ತರಕ್ಕೆ ತುಂಗಭದ್ರಾ ತೀರದ ಸೀತಾಕೊಂಡ ಮತ್ತು ದಕ್ಷಿಣಕ್ಕೆ ಭೂಪತಿಕೆರೆ.
ಆ್ಯರಿಎ, 1903-04, ಸಂ. 1904ರ 16; ಸೌಇಇ, IX ii, ಸಂ. 564; XVII, ಸಂ. 17.

ಸಂ. 258

ಅದೇ ದೇವಸ್ಥಾನದಲ್ಲಿ (ನಕಾಶೆ NMh)

ವಿಜಯನಗರ, ಅಚ್ಯುತದೇವ

ಶಕ 1461, ವಿಕಾರಿ, ಭಾದ್ರಪದ .. 12, ಭೂಮಿಸುತವಾರ = ಕ್ರಿ.ಶ. 1539, ಆಗಸ್ಟ್-ಸೆಪ್ಟೆಂಬರ್

ಸಂಸ್ಕೃತ, ನಾಗರಿ

ಅರಸನು ಆನಂದನಿಧಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 39; ಸೌಇಇ, IV, ಸಂ. 268.

ಸಂ. 259

ಅದೇ ದೇವಸ್ಥಾನದ ಒಂದನೇ ಗೋಪುರದಲ್ಲಿ (ನಕಾಶೆ NMh)

ವಿಜಯನಗರ, ಅಚ್ಯುತದೇವ

ಶಕ 1461, ವಿಕಾರಿ, ಭಾದ್ರಪದ .. 12, ಭೂಮಿಸುತವಾರ = ಕ್ರಿ.ಶ. 1539, ಆಗಸ್ಟ್ - ಸೆಪ್ಟೆಂಬರ್

ಸಂಸ್ಕೃತ, ತೆಲುಗು

ಅರಸನು ಆನಂದನಿಧಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 40; ಸೌಇಇ, IV, ಸಂ. 269.

ಸಂ. 260

ಮತಂಗ ಪರ್ವತಕ್ಕೆ ಹೋಗುವ ದಾರಿಯಲ್ಲಿ ಚಿಕ್ಕ ಬಾಗಿಲಿನ ಹತ್ತಿರ ಗುಂಡಿನ ಮೇಲೆ (ನಕಾಶೆ NMn)

--

14ನೇ ಶತಮಾನ

ಕನ್ನಡ

"ಮತಂಗೇಶ್ವರ ದೇವರ ದಿಡ್ಡಿ" ಎಂದು ಬರೆದಿದೆ.

ವಿಪ್ರೊರೀ, 1979-83, ಪು. 39-40.

ಸಂ. 261

ಮತಂಗ ಪರ್ವತದ ದಕ್ಷಿಣಕ್ಕೆ ತುರ್ತು ಕಾಲುವೆಯ ದಂಡೆಯ ಮೇಲೆ ದೇವಸ್ಥಾನದ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ NMs)

--

16ನೇ ಶತಮಾನ

ಕನ್ನಡ

ಅಚ್ಯುತಾಪುರವನ್ನು ಉಲ್ಲೇಖಿಸುತ್ತದೆ.

ವಿಪ್ರೊರಿ, 1983-84, ಸಂ. 41.

ಸಂ. 262

ಮತಂಗ ಪರ್ವತದ ದಕ್ಷಿಣಕ್ಕೆ ತುರ್ತು ಕಾಲುವೆಯ ಸೇತುವೆಯ ಹತ್ತಿರ ದಂಡೆಯ ಮೇಲಿರುವ ಗುಂಡಿನ ಮೇಲೆ (ನಕಾಶೆ NMs)

--

15-16ನೇ ಶತಮಾನ

ಕನ್ನಡ

ಚಿಕ್ಕರಾಮಯ್ಯನು ದೇವರಿಗೆ (ಹೆಸರು ತಿಳಿಸಿಲ್ಲ) ತೋಟವನ್ನು ದಾನ ಮಾಡಿದನೆಂದು ತಿಳಿಸುತ್ತದೆ. ಆ ತೋಟವನ್ನು ಸಿದರಾಮ ವೊಡೆಯನಿಗೆ ಕೊಡಲಾಯಿತು.

ವಿಪ್ರೊರಿ, 1983-84, ಸಂ. 42.

ಸಂ. 263

ಮತಂಗ ಪರ್ವತದ ದಕ್ಷಿಣಕ್ಕೆ ತುರ್ತು ಕಾಲುವೆಯ ಹತ್ತಿರದ ಮಂಟಪದಲ್ಲಿಯ ಗುಂಡಿನ ಮೇಲೆ (ನಕಾಶೆ NMs)

--

ಶಕ . 4.., ವಿಜಯ, ವೈಶಾಖ ಶು. 5

ಕನ್ನಡ

ಹಾಳಾಗಿದೆ. ಮಲ್ಲಿಕಾರ್ಜುನ ದೇವರಿಗೆ ಕೊಟ್ಟ ದಾನವನ್ನು ತಿಳಿಸುತ್ತದೆ. ಕೊಲ ರಾಮಯ್ಯ ಮತ್ತು ಭೂಪತಿಕೆರೆಯನ್ನು ಉಲ್ಲೇಖಿಸುತ್ತದೆ.

ವಿಪ್ರೊರಿ, 1983-84, ಸಂ. 43.

ಸಂ. 264

ಮತಂಗ ಪರ್ವತದ ದಕ್ಷಿಣಕ್ಕೆ ತುರ್ತು ಕಾಲುವೆಯ ದಕ್ಷಿಣಕ್ಕೆ ಬಂಡೆಯ ಮೇಲೆ (ನಕಾಶೆ NMs)

--

--

ಸಂಸ್ಕೃತ, ನಾಗರಿ

ವಾಸುದೇವ ದೇವರ ಉಲ್ಲೇಖವಿದೆ.

ವಿಪ್ರೊರಿ, 1984-87, ಸಂ. 80.

ಸಂ. 265

ಮೆಟ್ಟಿಲುಗಳ ಆಕಾರದ ಶಿಖರವುಳ್ಳ ದೇವಸ್ಥಾನದ ಹತ್ತಿರ ಅರಮನೆಯ ಪ್ರದೇಶದಿಂದ ಮತಂಗ ಪರ್ವತಕ್ಕೆ ಹೋಗುವ ಕಾಲುದಾರಿಯ ಪೂರ್ವಕ್ಕೆ ಗುಂಡಿನ ಮೇಲೆ (ನಕಾಶೆ NMw)

--

ಶಕ 1333, ಖರ, ಆಶ್ವೀಜ ಶು. 12, ಮಂ(ಗಳವಾರ) = ಕ್ರಿ.ಶ. 1411, ಸೆಪ್ಟೆಂಬರ್ 29

ಕನ್ನಡ

ಋಕ್ ಶಾಖೆಯ ಭಾರದ್ವಾಜ ಗೋತ್ರದ ನರಹರಿದೇವನ ಮಗ ದೇವರಾಯನು ಬೆನಕನ (ಗಣೇಶನ) ಬಾವಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 15.

ಸಂ. 266

ರಾಣೀವಾಸದ ಆವರಣದ ಉತ್ತರಕ್ಕೆ ಬೆಟ್ಟದ ಮೇಲೆ ನಾಲ್ಕು ಕಂಬಗಳುಳ್ಳ ಕಾವಲು ಗೋಪುರದ ಕೆಳಗೆ ಬಂಡೆಯ ಮೇಲೆ (ನಕಾಶೆ NMy)

--

14ನೇ ಶತಮಾನ

ಕನ್ನಡ

''ಮದನ ಕೊತಳ'' ಎಂದು ಬರೆದಿದೆ.

ವಿಪ್ರೊರೀ, 1983-84, ಸಂ. 6.

ಸಂ. 267

ತುರ್ತು ಕಾಲುವೆ ಅಣೆಕಟ್ಟಿನಿಂದ 6.2 ಕಿ.ಮೀ. ದೂರದಲ್ಲಿ ಮತಂಗ ಪರ್ವತದ ಪೂರ್ವಕ್ಕೆ ತುರ್ತು ಕಾಲುವೆಯಲ್ಲಿ ಗುಂಡಿನ ಮೇಲೆ (ನಕಾಶೆ NNf)

ವಿಜಯನಗರ, ವಿರೂಪಾಕ್ಷ

15ನೇ ಶತಮಾನ

ಕನ್ನಡ

ಹೆಗಡೆ ಹಿತಲಬಾಗಿಲ ಬಸವಣ್ಣಅಣ್ಣನು ಅರಸನ ಆಜ್ಞೆಯ ಮೇರೆಗೆ (ಕಾಲುವೆಯಲ್ಲಿನ) ಗುಂಡನ್ನು ಒಡೆದು (ಕಾಲುವೆಯನ್ನು) ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 73.

ಸಂ. 268

ಮತಂಗ ಪರ್ವತದ ಪೂರ್ವಕ್ಕೆ ತುರ್ತು ಕಾಲುವೆಯ ಎಡ ದಂಡೆಯ ಮೇಲಿನ ಗುಂಡಿನ ಮೇಲೆ (ನಕಾಶೆ NNj)

ವಿಜಯನಗರ, ಹರಿಹರ

14ನೇ ಶತಮಾನ

ಕನ್ನಡ

ಅರಸನು ವಿರೂಪಾಕ್ಷದೇವರಿಗೆ ಗದ್ದೆಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 77.

ಸಂ. 269

ಅದೇ ಸ್ಥಳದಲ್ಲಿ ತುರ್ತು ಕಾಲುವೆಯ ದಕ್ಷಿಣಕ್ಕೆ ಗುಂಡಿನ ಮೇಲೆ (ನಕಾಶೆ NNj)

--

ವಿಭವ, ಶ್ರಾವಣ ಶು. 6

ಕನ್ನಡ

ದೇವಸೆಟಿಯ ಮಗ ತರಸಗಿರಿ ವೀರಣನ ಧರ್ಮವನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1984-87, ಸಂ. 78.

ಸಂ. 270

ಮೇಲಿನ ಶಾಸನದ ಹತ್ತಿರ ತುರ್ತು ಕಾಲುವೆಯ ಬಲ ದಂಡೆಯ ಹತ್ತಿರ ಹೊಲದಲ್ಲಿಯ ಗುಂಡಿನ ಮೇಲೆ (ನಕಾಶೆ NNl)

ವಿಜಯನಗರ, ಹರಿಹರ

14ನೇ ಶತಮಾನ

ಕನ್ನಡ

ಅಳಿಸಿಹೋಗಿದೆ.

ವಿಪ್ರೊರೀ, 1984-87, ಸಂ. 74.

ಸಂ. 271

ಮತಂಗ ಪರ್ವತದ ಪೂರ್ವಕ್ಕೆ ಹಿಂದು-ಮುಸ್ಲಿಮ್ ಶೈಲಿಯಲ್ಲಿರುವ ಕಟ್ಟಡದ ಹತ್ತಿರ ತುರ್ತು ಕಾಲುವೆಯ ದಕ್ಷಿಣಕ್ಕೆ ಬಂಡೆಯ ಮೇಲೆ (ನಕಾಶೆ NNm)

--

ಪಾರ್ಥಿವ, ಪುಷ್ಯ ಬ. 7, ಸೋ(ಮವಾರ)

ಕನ್ನಡ

ವ್ಯಾಪಾರಿ ರಾಮಿಸೆಟಿಯ ಮಗ ಚಿಮ್ಮಿಸೆಟಿಯ ಮರಣದ ಬಗ್ಗೆ ತಿಳಿಸುತ್ತದೆ. ಸಾಯಿಸೆಟಿಯು ಈ ಶಾಸನವನ್ನು ಬರೆಸಿದನು.

ವಿಪ್ರೊರೀ, 1984-87, ಸಂ. 75.

ಸಂ. 272

ಅದೇ ಸ್ಥಳದಲ್ಲಿ ಇನ್ನೊಂದು ಬಂಡೆಯ ಮೇಲೆ (ನಕಾಶೆ NNm)

ವಿಜಯನಗರ, ಹರಿಹರ

14ನೇ ಶತಮಾನ

ಕನ್ನಡ

ಅರಸನ ಬೊಕ್ಕಸದ ನಾಗಪನ ತಿರುವಕ್ಕಳ ತಂಳಪನು ಹಾದಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 76.

ಕಮಲಾಪುರ

ಸಂ. 273

ಅಹಮದ್‌ಖಾನ್ ಧರ್ಮಶಾಲೆಯ ಪಶ್ಚಿಮಕ್ಕೆ ಬೆಟ್ಟದ ಮೇಲಿನ ದೇವಸ್ಥಾನದ ಬಾಗಿಲ ಮೇಲೆ (ನಕಾಶೆ NNt-u)

--

ವಿಕಾರಿ

ಕನ್ನಡ

ರಾಮಚಂದ್ರ ದೇವರಿಗೆ ನಮನಗಳನ್ನು ಅರ್ಪಿಸಿದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 97.

ಸಂ. 274

ಮದನ ಕೊತ್ತಳದ ಪೂರ್ವಕ್ಕೆ ಬಂಡೆಯ ಮೇಲೆ (ನಕಾಶೆ NNv)

--

14ನೇ ಶತಮಾನ

ಕನ್ನಡ

"ಮೀಸರಗಂಡನ ಕೊತಳ" ಎಂದು ಬರೆದಿದೆ.

ವಿಪ್ರೊರೀ, 1983-84, ಸಂ. 7.

ಸಂ. 275

ರಾಣೀವಾಸದ ಆವರಣದ ಉತ್ತರಕ್ಕೆ ಬೆಟ್ಟದ ಮೇಲೆ ಮೂರು ಚಿಕ್ಕ ದೇವಸ್ಥಾನಗಳ ಹತ್ತಿರ ಗುಂಡಿನ ಮೇಲೆ (ನಕಾಶೆ NNv)

--

15ನೇ ಶತಮಾನ

ಕನ್ನಡ

''ಪರಮೇಸ್ವರನ ಮಟಉ'' ಎಂದು ಬರೆದಿದೆ.

ವಿಪ್ರೊರೀ, 1983-84, ಸಂ. 30.

ಸಂ. 276

ಅಹಮದ್‌ಖಾನ್ ಧರ್ಮಶಾಲೆಯ ಪಶ್ಚಿಮಕ್ಕೆ ಬೆಟ್ಟದ ಮೇಲೆ ಬಾವಿಯ ಪಕ್ಕದ ಗುಂಡಿನ ಮೇಲೆ (ನಕಾಶೆ NNz)

--

ವಿಕಾರಿ, ಆಶ್ವೀಜ ಬ. 10, ಸೋಮವಾರ

ತೆಲುಗು

ದೇವರಿಪಲ್ಲಿ ಮುಮ್ಮಡಿಸೆಟಿಗೆ ಪುಣ್ಯವಾಗಲೆಂದು ನಂಜೆದೇವನ ನಿರಾಸಿಮಠಕ್ಕೆ ಭೂಮಿ ಮತ್ತು ಬಾವಿಯನ್ನು ದಾನಮಾಡಿದ್ದನ್ನು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 98.

ಸಂ. 277

ಮತಂಗ ಪರ್ವತದ ಪೂರ್ವಕ್ಕೆ ತುರ್ತು ಕಾಲುವೆಯ ದಂಡೆಯ ಮೇಲಿನ ಗುಂಡಿನ ಮೇಲೆ (ನಕಾಶೆ NOb)

--

15-16ನೇ ಶತಮಾನ

ಕನ್ನಡ

ಕಟ್ಟೆ ನಾಗಯ್ಯನ ಮೊಮ್ಮಗ ಮಲ್ಲಯನ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 79.

ಸಂ. 278

ಕಮಲಾಪುರ-ತಳವಾರಘಟ್ಟ ರಸ್ತೆಯ ಉತ್ತರಕ್ಕೆ ತಳವಾರಘಟ್ಟ ಬಾಗಿಲಿನ ಹತ್ತಿರ ಗುಂಡಿನ ಮೇಲೆ (ನಕಾಶೆ NOd)

--

ಚಿತ್ರಭಾನು, ಫಾಲ್ಗುಣ, ಶು. 1

ಕನ್ನಡ

ರಾಘವದೇವನ ಮಗ ದೇವಣ್ಣನು ಹನುಮಂತದೇವರಿಗೆ ತನ್ನ ಮನೆ ಮತ್ತು ಸುತ್ತಲಿನ ಭೂಮಿಯನ್ನು ದಾನಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 56.

ಸಂ. 279

ಮುಸ್ಲಿಮ್ ಬಡಾವಣೆಯಲ್ಲಿ ಬೆಟ್ಟದ ಮೇಲೆ ಮುಸ್ಲಿಮ್ ಶೈಲಿಯ ಕಟ್ಟಡವಿರುವ ಗುಂಡಿನ ಮೇಲೆ (ನಕಾಶೆ NOf)

--

ವಿಕಾರಿ, ಮಾಘ, ಶು. 1

ಕನ್ನಡ

ಮಿಾಯರಾಹುತನ (ಮುಸ್ಲಿಮ ಸೈನಿಕ) ಗೋರಿಯನ್ನು ಕಟ್ಟಿಸಿದ ಬಗ್ಗೆ ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 118.

ಸಂ. 280

ಮುಸ್ಲಿಮ್ ಬಡಾವಣೆಯಲ್ಲಿ ಗುಮ್ಮಟವಿಲ್ಲದ ಗೋರಿಯ ವಾಯುವ್ಯ ದಿಕ್ಕಿಗೆ ನಿಲ್ಲಿಸಿದ ಕಲ್ಲಿನ ಮೇಲೆ (ನಕಾಶೆ NOg)

--

16ನೇ ಶತಮಾನ

ತೆಲುಗು

ಸಕಲಜರಾವುತನು ಚಿಕರಾಯನಿಗೆ ಪುಣ್ಯವಾಗಲೆಂದು ಗೋರಿಯನ್ನು (ಗುಮ್ಮಟ) ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 119.

ಸಂ. 281

ಅದೇ ಬಡಾವಣೆಯ ಉತ್ತರಕ್ಕೆ ಹಳೆ ರಸ್ತೆಯ ಪಕ್ಕದಲ್ಲಿಯ ಗುಂಡಿನ ಮೇಲೆ (ನಕಾಶೆ NOl)

--

15-16ನೇ ಶತಮಾನ

ಕನ್ನಡ

''ವಡಿ ಕೊಂಡಯ'' ಎಂದು ಬರೆದಿದೆ.

ವಿಪ್ರೊರೀ, 1984-87, ಸಂ. 117.

ಸಂ. 282

ಅದೇ ಬಡಾವಣೆಯಲ್ಲಿ ಗುಮ್ಮಟವಿಲ್ಲದ ಗೋರಿಯ ನೈರುತ್ಯ ದಿಕ್ಕಿಗೆ ಗುಂಡಿನ ಮೇಲೆ (ನಕಾಶೆ NOm)

--

ನಂದನ, ಚೈತ್ರ, ಶು. 5 ಶು(ಕ್ರವಾರ)

ಕನ್ನಡ

ದಾದನರಾಹುತನ ಮಗ ಸಕಲಾದಿರಾಹುತನು ಗೋರಿಯನ್ನು (ಗುಂಮತ) ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 120.

ಸಂ. 283

ಅದೇ ಗೋರಿಯ ಆಗ್ನೇಯಕ್ಕೆ ಗುಂಡಿನ ಮೇಲೆ (ನಕಾಶೆ NOm)

--

ನಂದನ, ಚೈತ್ರ, ಶು. 5, ಶು(ಕ್ರವಾರ)

ಕನ್ನಡ

ಮೇಲಿನ ಶಾಸನದ ಪ್ರತಿ.

ವಿಪ್ರೊರೀ, 1984-87, ಸಂ. 121.

ಸಂ. 284

ಅದೇ ಗೋರಿಯ ಪೂರ್ವಕ್ಕೆ ನಿಲ್ಲಿಸಿದ ಕಲ್ಲಿನ ಮೇಲೆ (ನಕಾಶೆ NOm)

--

15-16ನೇ ಶತಮಾನ

ಕನ್ನಡ

ನಾಗಯನು ವೀರಣೊಡೆಯನಿಗೆ ದಾನ (ವಿವರ ಸ್ಪಷ್ಟವಾಗಿಲ್ಲ) ಮಾಡಿದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 122.

ಸಂ. 285

ಅದೇ ಪ್ರದೇಶದಲ್ಲಿ ಅಹ್ಮದ್‌ಖಾನ್ ಧರ್ಮಶಾಲೆಯ ಹತ್ತಿರ ಹಳೆ ರಸ್ತೆಯ ಪಶ್ಚಿಮಕ್ಕೆ ನಿಲ್ಲಿಸಿದ ಕಲ್ಲಿನ ಮೇಲೆ (ನಕಾಶೆ NOm)

--

15-16ನೇ ಶತಮಾನ

ಕನ್ನಡ

ಕೊಳಲ ಕೊಂಡಯನು ಕಟ್ಟಡವನ್ನು (ವಿವರ ಸ್ಪಷ್ಟವಾಗಿಲ್ಲ) ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 123.

ಸಂ. 286

ಅಹ್ಮದ್‌ಖಾನ್ ಧರ್ಮಶಾಲೆಯ ಹತ್ತಿರ ಕಮಲಾಪುರ-ತಳವಾರಘಟ್ಟ ರಸ್ತೆಯ ಪಕ್ಕದಲ್ಲಿ ಗುಂಡಿನ ಮೇಲೆ (ನಕಾಶೆ NO)

--

ದುರ್ಮತಿ, ಚೈತ್ರ, ಬ. 7

ಕನ್ನಡ

ಅಳಿಸಿಹೋಗಿದೆ. ಆರು ವರಹಗಳಿಗೆ ಒಂದು ಮನೆಯನ್ನು ಕ್ರಯ ಮಾಡಿದ ಉಲ್ಲೇಖವಿದೆ. ಮನೆಯ ಮೇರೆಗಳ ವಿವರಗಳಿವೆ.

ವಿಪ್ರೊರೀ, 1983-84, ಸಂ. 62.

ಸಂ. 287

ಅಹಮದ್‌ಖಾನ್ ಧರ್ಮಶಾಲೆಯ ಹತ್ತಿರ ಕೃಷ್ಣ ದೇವಸ್ಥಾನದ ಈಶಾನ್ಯ ದಿಕ್ಕಿಗೆ ಗುಂಡಿನ ಮೇಲೆ (ನಕಾಶೆ NOq)

--

15-16ನೇ ಶತಮಾನ

ತೆಲುಗು

ಕಬಿರುರಾವುತನ ಮಗ ಪಿಲಿಕುಂಚಲಕನು ಬಯಿರಾವುತನಿಗೆ ಬಾವಿಯನ್ನು ಕೊಟ್ಟ ವಿಷಯ ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 99.

ಸಂ. 288

ಅಹ್ಮದ್‌ಖಾನ್ ಧರ್ಮಶಾಲೆಯ ಮುಂಭಾಗದ ತೊಲೆಯ ಮೇಲೆ (ನಕಾಶೆ NOq)

ವಿಜಯನಗರ, ದೇವರಾಯ (II)

ಸಿದ್ಧಾರ್ಥಿ, ಆಶ್ವೀಜ, ಸು. 10 = ಕ್ರಿ.ಶ. 1439, ಸೆಪ್ಟೆಂಬರ್ 18, ಶುಕ್ರವಾರ

ಕನ್ನಡ

ಅರಸನ ಸೇವಕನಾದ ಕಟಿಗೆಯ ಅಹಮದಖಾನನು ಅರಸನಿಗೆ ಪುಣ್ಯವಾಗಲೆಂದು ಧರ್ಮಶಾಲೆ ಮತ್ತು ಬಾವಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಎ. 1903-04, ಸಂ. 1904ರ 18; ಸೌಇಇ. IX ii, ಸಂ. 447. XVII, ಸಂ. 19.

ಸಂ. 289

ರೆಮ್ಮುದಿಡ್ಡಿ ಬಾಗಿಲಿನ ಪಶ್ಚಿಮಕ್ಕೆ ಗುಂಡಿನ ಮೇಲೆ (ನಕಾಶೆ NPb)

--

ವಿರೋಧಿ, ಭಾದ್ರಪದ ಶು.. ಮ(ಂಗಳವಾರ)

ಕನ್ನಡ

ಹಾಳಾಗಿದೆ. ಕನ್ನಿಸೆಟಿ, ಪಿಚ್ಚಾರಿಸೆಟಿ ಮತ್ತು ಇತರರು ರಾಮಚಂದ್ರದೇವರಿಗೆ ಸೇರಿದ ವಳಕೋಟೆಯಲ್ಲಿರುವ ರೆಮ್ಮುದಿಡ್ಡಿಯ ಹತ್ತಿರವಿರುವ ಒಂದು ಖಂಡುಗ ಭೂಮಿಯನ್ನು ದಾನ ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 125.

ಸಂ. 290

ಅದೇ ಸ್ಥಳದಲ್ಲಿ ಮೇಲಿನ ಶಾಸನದ ಹತ್ತಿರ ಇನ್ನೊಂದು ಗುಂಡಿನ ಮೇಲೆ (ನಕಾಶೆ NPb)

--

ವಿಜಯ, ಆಷಾಢ, ಶು. 5

ಕನ್ನಡ

ಸೂರೆದೇವಯನು ವಿರೂಪಾಕ್ಷ ದೇವರಿಗೆ ಭೂಮಿ ದಾನ ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 126.

ಸಂ. 291

ಉದಯಗಿರಿ ಬಾಗಿಲಿನ ಉತ್ತರಕ್ಕೆ ಕೋಟೆಯ ಹೊರಗೆ ಕಮಲಾಪುರದ ಶ್ರೀ ಪೀರಪಾಶಾ ಅವರ ಹೊಲದಲ್ಲಿಯ ಗುಂಡಿನ ಮೇಲೆ (ನಕಾಶೆ NPj)

ವಿಜಯನಗರ, ಅಚ್ಯುತದೇವರಾಯ

ದುರ್ಮುಖಿ, ವೈಶಾಖ ಶು. 2 = ಕ್ರಿ.ಶ. 1536, ಏಪ್ರಿಲ್ 22

ಕನ್ನಡ

ಅರಸನು ಕೃಷ್ಣರಾಯ ಚಕ್ರವರ್ತಿಗೆ ಭೂಮಿ ದಾನ ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 127.

ಸಂ. 292

ಮಾಲ್ಯವಂತ ಪರ್ವತದ ಈಶಾನ್ಯಕ್ಕೆ ತುರ್ತು ಕಾಲುವೆಯ ಬಲದಂಡೆಯ ಹತ್ತಿರವಿರುವ ಗುಂಡಿನ ಮೇಲೆ (ನಕಾಶೆ NPr)

--

ಪರಿಧಾವಿ, ಕಾರ್ತಿಕ, ಬ, 3

ತೆಲುಗು
ದುರುಗಂಟು ರಘುನಾಥ ದೇವರ (?) ನೀರಿನ ತೊಟ್ಟಿ (ಮಡು) ಪೋಬಯವೆಯ ಧರ್ಮವೆಂದು ತಿಳಿಸುತ್ತದೆ.
ವಿಪ್ರೊರೀ, 1984-87, ಸಂ. 128.

ಸಂ. 293

ಅದೇ ಪರ್ವತದ ಈಶಾನ್ಯಕ್ಕೆ ಕಾಲುವೆಯ ಒಡ್ಡಿನ ಮೇಲಿನ ಗುಂಡಿನ ಮೇಲೆ (ನಕಾಶೆ NPr)
--
15-16ನೇ ಶತಮಾನ
ಕನ್ನಡ
ಕೃಷ್ಣರಾಯ ಕೆರೆಯ (ಸಮುದ್ರದ) ದೇವರ (ಹೆಸರು ಸ್ಪಷ್ಟವಾಗಿಲ್ಲ) ತೋಟದ ಉಲ್ಲೇಖವಿದೆ.
ವಿಪ್ರೊರೀ, 1984-87, ಸಂ. 129.

ಸಂ. 294

ಅದೇ ಪರ್ವತದ ಈಶಾನ್ಯಕ್ಕೆ ಕಾಲುವೆಯ ಉತ್ತರಕ್ಕೆ ಗುಂಡಿನ ಮೇಲೆ (ನಕಾಶೆ NPs)
--
15-16ನೇ ಶತಮಾನ
ಕನ್ನಡ
ಚೆನ್ನಸೋಮದೇವನ ಮಾನ್ಯದ (ಭೂಮಿ)ಯ ಉಲ್ಲೇಖವಿದೆ.
ವಿಪ್ರೊರೀ, 1984-87, ಸಂ. 130.

ಸಂ. 295

ಮೇಲಿನ ಶಾಸನದ ಪಶ್ಚಿಮಕ್ಕೆ ಇನ್ನೊಂದು ಗುಂಡಿನ ಮೇಲೆ (ನಕಾಶೆ NPs)
--
15-16ನೇ ಶತಮಾನ
ಕನ್ನಡ
ಅಪೂರ್ಣವಾಗಿದೆ. ಗುರುನಾಥದೇವರ ಮಾನ್ಯದ (ಭೂಮಿಯ) ಉಲ್ಲೇಖವಿದೆ.
ವಿಪ್ರೊರೀ, 1984-87, ಸಂ. 131.

ಸಂ. 296

ಕಮಲಾಪುರ-ಕಂಪ್ಲಿ ರಸ್ತೆಯು ಕೋಟೆಯ ಮೂಲಕ ಹಾಯ್ದು ಹೋಗುವ ಸ್ಥಳದಲ್ಲಿ ಕೋಟೆಯ ಹೊರಗೆ ಗುಂಡಿನ ಮೇಲೆ (ನಕಾಶೆ NPy)
--

15-16ನೇ ಶತಮಾನ

ಕನ್ನಡ

ಗಂಗಾಧರದೇವರ ಮಾನ್ಯದ (ಭೂಮಿಯ) ಬಗ್ಗೆ ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 132.

ಸಂ. 297

ಹಂಪಾದೇವಿಯ ದಿಣ್ಣಿಯ ಉತ್ತರಕ್ಕೆ ಗುಂಡಿನ ಮೇಲೆ (ನಕಾಶೆ NQc)

--

14ನೇ ಶತಮಾನ

ಕನ್ನಡ

''ಮತಂಗದೇವರ ಕೊತ್ತಳ'' ಎಂದು ಬರೆದಿದೆ.

ವಿಪ್ರೊರೀ, 1983-84, ಸಂ. 9.

ಸಂ. 298

ಹಂಪಾದೇವಿಯ ದಿಣ್ಣಿಯ ಪೂರ್ವಕ್ಕಿರುವ ಬೆಟ್ಟದ ಮೇಲಿನ ಗುಂಡಿನ ಮೇಲೆ (ನಕಾಶೆ NQd)

--

14ನೇ ಶತಮಾನ

ಕನ್ನಡ

ಈ ಬೆಟ್ಟವು ಗುರುಗುಹೇಶ್ವರರ ಆಶ್ರಮ, ಇದರೊಳಗಿದ್ದು ದೈವ, ಧ್ಯಾನ ಮತ್ತು ಉದ್ಯೋಗದಲ್ಲಿ ತೊಡಗಿದವರಿಗೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಫಲಗಳು ಲಭಿಸಲೆಂದು ಆಶಿಸುತ್ತದೆ.

ವಿಪ್ರೊರೀ, 1983-84, ಸಂ. 31.

ಸಂ. 299

ಮತಂಗದೇವರ ಕೊತ್ತಳದ ಪೂರ್ವಕ್ಕೆ ವೀರಭದ್ರ ದೇವಾಲಯದ ಎದುರಿಗೆ ಬಂಡೆಯ ಮೇಲೆ (ನಕಾಶೆ NQd)

--

15-16ನೇ ಶತಮಾನ

ಕನ್ನಡ

ಸಂಗನಬಸವ (ದೇವರ) ಉಲ್ಲೇಖವಿದೆ.

ವಿಪ್ರೊರೀ, 1983-84, ಸಂ. 32.

ಸಂ. 300

ಮತಂಗದೇವರ ಕೊತ್ತಳದ ಪೂರ್ವಕ್ಕೆ ಕೋಟೆಯ ಗೋಡೆಯಲ್ಲಿರುವ ಗುಂಡಿನ ಮೇಲೆ (ನಕಾಶೆ NQd)

--

15-16ನೇ ಶತಮಾನ

ಕನ್ನಡ

''ಮಳಲ ವಿನಾಯಕ ಕೊತ್ತಳ'' ಎಂದು ಬರೆದಿದೆ.

ವಿಪ್ರೊರೀ, 1984-87, ಸಂ. 87.

ಸಂ. 301

ಹಂಪಾದೇವಿಯ ದಿಡ್ಡಿಯ ಹತ್ತಿರ ಕಮಲಾಪುರ-ಹಂಪೆ ರಸ್ತೆಯ ಪಶ್ಚಿಮಕ್ಕೆ ಬಂಡೆಯ ಮೇಲೆ (ನಕಾಶೆ NQf-g)

ವಿಜಯನಗರ, ಸದಾಶಿವರಾಯ

ಶಕ 1483 = ಕ್ರಿ.ಶ. 1561

ಕನ್ನಡ

ಅಳಿಸಿಹೋಗಿದೆ. ಮಲ್ಲಿಕಾರ್ಜುನ ದೇವರಿಗೆ ಭೂಮಿದಾನ ಮಾಡಿದ್ದನ್ನು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 22.

ಸಂ. 302

ಹಂಪಾದೇವಿಯ ದಿಡ್ಡಿಯಲ್ಲಿ ಗುಂಡಿನ ಮೇಲೆ (ನಕಾಶೆ NQh)

--

14ನೇ ಶತಮಾನ

ಕನ್ನಡ

''ಹಂಪಾದೇವಿಯ ದಿಡ್ಡಿ'' ಎಂದು ಬರೆದಿದೆ.

ವಿಪ್ರೊರೀ, 1983-84, ಸಂ. 5.

ಸಂ. 303

ಹಂಪಾದೇವಿಯ ದಿಡ್ಡಿ ಮತ್ತು ಜಡೆಯಶಂಕರದೇವರ ದಿಡ್ಡಿಗಳ ಮಧ್ಯ ಕಮಲಾಪುರ-ಹಂಪೆ ರಸ್ತೆಯ ಪೂರ್ವಕ್ಕೆ ಕೋಟೆಯ ಗೋಡೆಯಲ್ಲಿ ಗುಂಡಿನ ಮೇಲೆ (ನಕಾಶೆ NQh)

--

15-16ನೇ ಶತಮಾನ

ಕನ್ನಡ
''ಸ್ವಾಮಿದ್ರೋಹರ ಗಂಡನ ಕೊತ್ತಳ'' ಎಂದು ಬರೆದಿದೆ.
ವಿಪ್ರೊರೀ, 1984-87, ಸಂ. 86.

ಸಂ. 304

ಜಡೆಯಶಂಕರದೇವರ ದಿಡ್ಡಿಯ ಪಶ್ಚಿಮಕ್ಕೆ ಕೋಟೆಯ ಗೋಡೆಯಲ್ಲಿನ ಗುಂಡಿನ ಮೇಲೆ (ನಕಾಶೆ NQn)
--
14ನೇ ಶತಮಾನ
ಕನ್ನಡ
''ಜಡೆಯಶಂಕರದೇವರ ದಿಡ್ಡಿ'' ಎಂದು ಬರೆದಿದೆ.
ವಿಪ್ರೊರೀ, 1983-84, ಸಂ. 4.

ಸಂ. 305

ಜಡೆಯಶಂಕರದೇವರ ದಿಡ್ಡಿಯ ಹತ್ತಿರ ಬಂಡೆಯ ಮೇಲೆ (ನಕಾಶೆ NQo)
--
15-16ನೇ ಶತಮಾನ
ಕನ್ನಡ
ವಿಷ್ಣು ಸಂವತ್ಸರದ ಉಲ್ಲೇಖವಿದೆ.
ವಿಪ್ರೊರೀ, 1984-87, ಸಂ. 85.

ಸಂ. 306

ಪ್ರತಿಷ್ಠಿತ ವ್ಯಕ್ತಿಗಳ ಮನೆಗಳ ಪ್ರದೇಶದಲ್ಲಿ ಗುಂಡಿನ ಮೇಲೆ (ನಕಾಶೆ NQp)
--
14ನೇ ಶತಮಾನ
ಕನ್ನಡ
''ಹಂಪೆಯ ಕೊತಳ'' ಎಂದು ಬರೆದಿದೆ.
ವಿಪ್ರೊರೀ, 1979-83, ಪು. 39.

ಸಂ. 307

ಕೋಟಿಶಂಕರ ದೇವರ ಬಾಗಿಲಿನ ಮೇಲೆ (ನಕಾಶೆ NQs)
ವಿಜಯನಗರ, ಅಚ್ಯುತರಾಯ

16ನೇ ಶತಮಾನ

ಸಂಸ್ಕೃತ, ಕನ್ನಡ

ಮುಂದಿನ ಭಾಗ ಲಭ್ಯವಿಲ್ಲ. ವಿರೂಪಾಕ್ಷ ದೇವಸ್ಥಾನದ ಉಲ್ಲೇಖವಿದೆ.

ಆ್ಯರಿಸೌಇಎ, 1889, ಸಂ. 41; ಸೌಇಇ, IV, ಸಂ. 270.

ಸಂ. 308

ಕೋಟಿಶಂಕರ ದೇವರ ಬಾಗಿಲಿನಲ್ಲಿ ಶಿಥಿಲವಾದ ದೇವಸ್ಥಾನದ ಕಂಬದ ಮೇಲೆ (ನಕಾಶೆ NQs)

--

15-16ನೇ ಶತಮಾನ

ಕನ್ನಡ

ಮಲ್ಲಿಕಾರ್ಜುನ ದೇವರಿಗೆ ದೀಪ ಬೆಳಗಿಸಲು ಅಂಗಡಿಯನ್ನು ದಾನ ಮಾಡಿದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 82.

ಸಂ. 309

ಅಕ್ಕ-ತಂಗಿಯರ ಕಲ್ಲುಗಳ ಪಶ್ಚಿಮಕ್ಕೆ ಬಂಡೆಯ ಮೇಲೆ (ನಕಾಶೆ NQs)

--

14ನೇ ಶತಮಾನ

ಕನ್ನಡ

"ಪ್ರತಾಪ ಕೊತ್ತಳ" ಎಂದು ಬರೆದಿದೆ.

ವಿಪ್ರೊರೀ, 1983-84, ಸಂ. 10.

ಸಂಖ್ಯೆ. 310

ಪ್ರತಿಷ್ಠಿತ ವ್ಯಕ್ತಿಗಳ ಮನೆಗಳ ಪ್ರದೇಶದಲ್ಲಿ ವೀರಭದ್ರ ದೇವಸ್ಥಾನದ ಪೂರ್ವಕ್ಕೆ ಗುಂಡಿನ ಮೇಲೆ (ನಕಾಶೆ NQu)

--

15-16ನೇ ಶತಮಾನ

ಕನ್ನಡ

ಭಾಗಶಃ ಉಳಿದಿದೆ. ವಿರೂಪಾಕ್ಷ ದೇವರ ಉಲ್ಲೇಖವಿದೆ.

ವಿಪ್ರೊರೀ, 1983-84, ಸಂ. 61.

ಸಂ. 311

ಅದೇ ದೇವಸ್ಥಾನದ ಎದುರಿಗೆ ನಂದಿಯ ಶಿಲ್ಪವಿರುವ ಕಲ್ಲಿನ ಮೇಲೆ (ನಕಾಶೆ NQu)

--

15-16ನೇ ಶತಮಾನ

ಕನ್ನಡ

ನಂದಿಯನ್ನು (ಬಸವ) ನಂಜೆಯದೇವನು ನಿಲ್ಲಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1992-95, ಸಂ. 1.

ಸಂ. 312

ಪ್ರಸನ್ನ ವಿರೂಪಾಕ್ಷ (ಭೂಮಿಯ ಕೆಳಮಟ್ಟದ) ದೇವಸ್ಥಾನದ ವಾಯುವ್ಯಕ್ಕೆ ಕಮಲಾಪುರ-ಹಂಪೆಯ ರಸ್ತೆಯ ಪೂರ್ವಕ್ಕೆ ದೊಡ್ಡ ಗುಂಡಿನ ಮೇಲೆ (ನಕಾಶೆ NQy)

--

15-16ನೇ ಶತಮಾನ

ಕನ್ನಡ

"ಕೋಟಿಶಂಕರದೇವರ ಬಾಗಿಲು" ಎಂದು ಬರೆದಿದೆ.

ವಿಪ್ರೊರಿ, 1984-87, ಸಂ. 83.

ಸಂ. 313

ಮೇಲಿನ ಶಾಸನದ ಪಕ್ಕದಲ್ಲಿ ಇನ್ನೊಂದು ಗುಂಡಿನ ಮೇಲೆ (ನಕಾಶೆ NQy)

--

15-16ನೇ ಶತಮಾನ

ಕನ್ನಡ

"ಕೋಟಿಶಂಕರದೇವರ ಬಾಗಿಲು" ಎಂದು ಬರೆದಿದೆ.

ವಿಪ್ರೊರೀ, 1984-87, ಸಂ. 84.

ಸಂ. 314

ಭೂಮಿಯ ಕೆಳಮಟ್ಟದ ದೇವಸ್ಥಾನದಲ್ಲಿ ಕಲ್ಲಿನ ಮೇಲೆ (ನಕಾಶೆ NQy)

ವಿಜಯನಗರ, ವೀರಪ್ರತಾಪ ವೀರ ಕೃಷ್ಣರಾಯ ಮಹಾರಾಯ

ಶಕ 1435, ಶ್ರೀಮುಖ, ಚೈತ್ರ ಶು. 5 = ಕ್ರಿ.ಶ. 1513, ಮಾರ್ಚ್ 12, ಶನಿವಾರ

ಕನ್ನಡ

ಅರಸನು ತನ್ನ ತಂದೆ ನರಸಣ್ಣ ನಾಯಕ ಮತ್ತು ತಾಯಿ ನಾಗಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ಕನ್ನಕಿಯಕಟೆ, ಬುಕಾಪುರ, ನಾಗಲಾಪುರ ಮತ್ತು ಗೌರಾಜಿಯಕೆರೆ ಗ್ರಾಮಗಳನ್ನು, ಮೂರು ತೋಟಗಳನ್ನು ಮತ್ತು ಅನೇಕ ಭೂಮಿಗಳನ್ನು ಪ್ರಸನ್ನ ವಿರೂಪಾಕ್ಷ ದೇವರ ಸೇವೆಗೆ ದಾನ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಇಎ, 1908, ಸಂ. 1907ರ 500; ಸೌಇಇ, IX ii, ಸಂ. 491; XXIII, ಸಂ. 500.

ಸಂ. 315

ಅರಮನೆ ಪ್ರದೇಶದಿಂದ ಮತಂಗ ಪರ್ವತಕ್ಕೆ ಹೋಗುವ ಮಾರ್ಗದಲ್ಲಿ ಕೋಟೆಯಲ್ಲಿನ ಹೊದೆಯ ಬಾಗಿಲಿನ ಹತ್ತಿರ ಆದಿನಾರಾಯಣ ದೇವರ ಅಂಗಡಿಯಲ್ಲಿ ಬಿದ್ದಿರುವ ಕಲ್ಲಿನ ಮೇಲೆ (ನಕಾಶೆ NRb)

--

ಶಕ 1447, ನಳ, ಚೈತ್ರ ಶು. 11, ಆದಿವಾರ = ಕ್ರಿ.ಶ. 1525, ಏಪ್ರಿಲ್ 4, ಮಂಗಳವಾರ (ಭಾನುವಾರವಲ್ಲ) (ಪಾರ್ಥಿವ ಸಂವತ್ಸರ)

ಕನ್ನಡ

ಆದಿನಾರಾಯಣ ದೇವರಿಗೆ ಅಂಗಡಿಯನ್ನು ದಾನಮಾಡಿದ್ದನ್ನು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 91.

ಸಂ. 316

ರಾಣೀವಾಸದ ಪಶ್ಚಿಮಕ್ಕೆ ಬೆಟ್ಟದ ಮೇಲಿನ ಗುಂಡಿನ ಮೇಲೆ (ನಕಾಶೆ NRh)

--

14ನೇ ಶತಮಾನ

ಕನ್ನಡ

''ಹನುಮನ ಕೊತ್ತಳ'' ಎಂದು ಬರೆದಿದೆ.

ವಿಪ್ರೊರೀ, 1979-83, ಪು. 39.

ಸಂ. 317

ಮೇಲಿನ ಶಾಸನದ ದಕ್ಷಿಣಕ್ಕೆ ಇನ್ನೊಂದು ಗುಂಡಿನ ಮೇಲೆ (ನಕಾಶೆ NRh)

--

14ನೇ ಶತಮಾನ

ಕನ್ನಡ

"ಸಂಖಿರದೇವರ ಕೊತ್ತಳ" ಎಂದು ಬರೆದಿದೆ.
ವಿಪ್ರೊರಿೀ, 1983-84, ಸಂ. 8.

ಸಂ. 318

ರಾಣೀವಾಸದ ವಾಯುವ್ಯಕ್ಕೆ ಗುಂಡಿನ ಮೇಲೆ (ನಕಾಶೆ NRh)

--

ಪರಾಭವ, ಮಾಘ ಬ. 10

ತೆಲುಗು

ಅಪೂರ್ವವಾಗಿದೆ. ನಂಗಿದೇವನ ಮಗನ ಉಲ್ಲೇಖವಿದೆ.

ವಿಪ್ರೊರಿೀ, 1983-84, ಸಂ. 69.

ಸಂ. 319

ರಾಣೀವಾಸದ ಆವರಣದ ಉತ್ತರ ಗೋಡೆಯಲ್ಲಿನ ಚಿಕ್ಕ ಬಾಗಿಲಿನ ಹತ್ತಿರದ ಗುಂಡಿನ ಮೇಲೆ (ನಕಾಶೆ NRj)

--

16ನೇ ಶತಮಾನ

ಕನ್ನಡ

"ಅಜೆನಯಕನ ನಕು" (ಅಜೆನಾಯಕನ ಗಿಡ್ಡ ಬಾಗಿಲು) ಎಂದು ಬರೆದಿದೆ.

ವಿಪ್ರೊರಿೀ, 1983-84, ಸಂ. 28.

ಸಂ. 320

ರಾಣೀವಾಸದ ಪಶ್ಚಿಮಕ್ಕೆ ವೈಷ್ಣವ ದೇವಸ್ಥಾನದಲ್ಲಿ ಮಂಟಪದ ಉತ್ತರದ ಗೋಡೆಯ ಮೇಲೆ (ನಕಾಶೆ NRm)

ವಿಜಯನಗರ, ಅಚ್ಯುತದೇವ

16ನೇ ಶತಮಾನ

ತೆಲುಗು

ಹಾಳಾಗಿದೆ. ಅಚ್ಯುತದೇವರಾಯನ ಉಲ್ಲೇಖವಿದೆ.

ವಿಪ್ರೊರಿೀ, 1983-84, ಸಂ. 63.

ಸಂಖ್ಯೆ. 321

ರಾಣೀವಾಸದ ಆವರಣದ ಪಶ್ಚಿಮ ಗೋಡೆಯಲ್ಲಿಯ ಕಲ್ಲಿನ ಮೇಲೆ (ನಕಾಶೆ NRn)

--

16ನೇ ಶತಮಾನ

ಕನ್ನಡ

ನರಸಿಂಗಯ್ಯನ ಪಾಲನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1983-84, ಸಂ. 23.

ಸಂ. 322

ಅದೇ ಗೋಡೆಯಲ್ಲಿ ಇನ್ನೊಂದು ಕಲ್ಲಿನ ಮೇಲೆ (ನಕಾಶೆ NRn)

--

16ನೇ ಶತಮಾನ

ಕನ್ನಡ

ಜಾನಸಾಲ ಸೂರಪ್ಪನ ಪಾಲನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1983-84, ಸಂ. 24.

ಸಂ. 323

ಅದೇ ಗೋಡೆಯಲ್ಲಿ ಇನ್ನೊಂದು ಕಲ್ಲಿನ ಮೇಲೆ (ನಕಾಶೆ NRn)

--

16ನೇ ಶತಮಾನ

ಕನ್ನಡ

ಗಿಂಡಿ ತಿಮ್ಮಯ್ಯನ ಪಾಲನ್ನು ಉಲ್ಲೇಖಿಸುತ್ತದೆ.

ವಿಪೊರ್ರೀ, 1983-84, ಸಂ. 25.

ಸಂ. 324

ಪುರಾತತ್ವ ರೇಂಜ್ ಕಛೇರಿ. ರಾಣೀವಾಸದ ಹತ್ತಿರ ದೊರೆತ ಕಲ್ಲಿನ ತುಂಡಿನ ಮೇಲೆ (ನಕಾಶೆ NRn-o, s-t)

--

10-11ನೇ ಶತಮಾನ

ಕನ್ನಡ

ಅಪೂರ್ಣವಾಗಿದೆ. ಒಬ್ಬ ಮುನಿಯನ್ನು ಸ್ತುತಿಸುವ ಪದ್ಯಗಳಿವೆ.

ಆರಿಇಎ, 1952-53, ಸಂ. ಬಿ 219.

ಸಂ. 325

ಅದೇ ಕಚೇರಿ, ಅದೇ ಸ್ಥಳದಲ್ಲಿ ದೊರೆತ ಇನ್ನೊಂದು ಕಲ್ಲಿನ ತುಂಡಿನ ಮೇಲೆ (ನಕಾಶೆ NRn-o, s-t)

--

ಇತ್ತೀಚಿನ ಅಕ್ಷರಗಳಲ್ಲಿ

ಕನ್ನಡ

ಚಿಕ್ಕವೊಡೆಯ ಮತ್ತು ಆತನು ಮಾಡಿದ ದಾನದ ಬಗ್ಗೆ ಉಲ್ಲೇಖಿಸುವಂತೆ ತೋರುತ್ತದೆ.

ಆ್ಯರಿಇಎ, 1952-53, ಸಂ. ಬಿ 220.

ಸಂ. 326

ಪಹರೆಯವರ ಕಟ್ಟಡದ (ಗಾರ್ಡ್ಸ್ ಕ್ವಾರ್ಟರ್ಸ್) ಹಿಂಭಾಗದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ NRp)

ವಿಜಯನಗರ, ಸದಾಶಿವದೇವ

ಶಕ 1476, ಆನಂದ, ಮಾರ್ಗಶಿರ ಶು. 15, ಶನಿವಾರ = ಕ್ರಿ.ಶ. 1554, ಡಿಸೆಂಬರ್ 9, ರವಿವಾರ (ಶನಿವಾರವಲ್ಲ)

ತೆಲುಗು

ಮಹಾಮಂಡಲೇಶ್ವರ ರಾಮರಾಜು ತಿರುಮಲರಾಜುವಿನ ಮಗ ರಘುನಾಥರಾಜು ಕತಾಲಪಾಲ್ಯಂನಲ್ಲಿ ಅಲಮೇಲ ಮಂಗಮ್ಮನ ದೇವಸ್ಥಾನವನ್ನು ಕಟ್ಟಿಸಿ ದೇವತೆಯ ದೀಪಾರಾಧನೆಗೆ ದಾನ ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 64.

ಸಂಖ್ಯೆ. 327

ಪ್ರತಿಷ್ಠಿತ ವ್ಯಕ್ತಿಗಳ ಅರಮನೆ 1ರ ಈಶಾನ್ಯಕ್ಕೆ ಆಂಜನೇಯನ ಚಿಕ್ಕ ದೇವಸ್ಥಾನದ ದಕ್ಷಿಣ ಗೋಡೆಯ ಮೇಲೆ (ನಕಾಶೆ NRq)

--

15-16ನೇ ಶತಮಾನ

ತೆಲುಗು

ಭತ್ತಳ ಓಬುಳಯ್ಯನು ದೇವಸ್ಥಾನ ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 70.

ಸಂ. 328

ಹಳೆಯ ಟೂರಿಸ್ಟ್ ಕ್ಯಾಂಟೀನಿನ ಹಿಂಭಾಗದಲ್ಲಿ ಗುಡ್ಡದ ಮೇಲಿನ ಕಲ್ಲಿನ ಆಸರೆಯ ಕೆಳಗೆ ಬಂಡೆಯ ಮೇಲೆ (ನಕಾಶೆ NRr)

--

15-16ನೇ ಶತಮಾನ

ಸಂಸ್ಕೃತ, ಕನ್ನಡ

ನಮನಗಳನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1984-87, ಸಂ. 90.

ಸಂ. 329

ರಾಣೀವಾಸದ ಆವರಣದ ಪಶ್ಚಿಮ ಗೋಡೆಯಲ್ಲಿ ಕಲ್ಲಿನ ಮೇಲೆ (ನಕಾಶೆ NRs)

--

16ನೇ ಶತಮಾನ

ಕನ್ನಡ

ಜಾನಸಾಲ ಸೂರಪ್ಪನ ಪಾಲನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1983-84, ಸಂ. 26.

ಸಂ. 330

ಅದೇ ಗೋಡೆಯಲ್ಲಿ ಇನ್ನೊಂದು ಕಲ್ಲಿನ ಮೇಲೆ (ನಕಾಶೆ NRs)

--

16ನೇ ಶತಮಾನ

ಕನ್ನಡ

ನರಸಿಂಗಯ್ಯನ ಪಾಲನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1983-84, ಸಂ. 27.

ಸಂ. 331

ಹಳೆಯ ಟೂರಿಸ್ಟ್ ಕ್ಯಾಂಟೀನಿನ ಹಿಂಭಾಗದಲ್ಲಿ ಬಿದ್ದಿರುವ (ಈಗ ಕಟ್ಟಡದ ಆವರಣದೊಳಗೆ ಇಟ್ಟಿರುವ) ಕಲ್ಲಿನ ಮೇಲೆ (ನಕಾಶೆ NRs)

--

ಶುಭಕೃತ್, ಚೈತ್ರ ಶು. 7

ಕನ್ನಡ

ಆನೆಯಸಾಲೆಯ ಹತ್ತಿರವಿರುವ ಸರಸಿಂಹದೇವರಿಗೆ ಕೋನಮರಸಯ್ಯನು ಮಾಡಿದ ದಾನವನ್ನು ದಾಖಲಿಸುತ್ತದೆ.

ವಿಪ್ರೊರೀ, 1983-84, ಸಂ. 29.

ಸಂ. 332

ರಂಗನಾಥಸ್ವಾಮಿ ದೇವಸ್ಥಾನದ ಉತ್ತರಕ್ಕೆ ಬಿದ್ದಿರುವ ಕಲ್ಲಿನ ಮೇಲೆ (ನಕಾಶೆ NRt)

ವಿಜಯನಗರ, ಸದಾಶಿವ

ಶಕ 1467, ವಿಶ್ವಾವಸು, ಚೈತ್ರ ಶು. 3, ಗುರುವಾರ = ಕ್ರಿ.ಶ. 1545, ಮಾರ್ಚ್ 15, ಭಾನುವಾರ

ತೆಲುಗು

ಮಹಾಮಂಡಲೇಶ್ವರ ಮಾದರಾಜು ಮಲ್ಲರಾಜುವಿನ ಮೊಮ್ಮಗ, ವಲ್ಲಭರಾಜುವಿನ ಮಗ ತಿಮ್ಮರಾಜು ತನ್ನ ತಂದೆ ವಲ್ಲಭರಾಜು ಮತ್ತು ತಾಯಿ ವೆಂಗಳಮ್ಮನವರಿಗೆ ಪುಣ್ಯವಾಗಲೆಂದು ವಿದ್ಯಾನಗರದ ಮಾಧವದೇವರ ದೇವಸ್ಥಾನದಲ್ಲಿ ನೃತ್ಯ, ಗೀತ, ವಾದ್ಯ ಕಾರ್ಯಕ್ರಮಗಳನ್ನು ನಡೆಸಲು ರಂಗಮಂಟಪವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 19; 1922-23, 1922ರ ಸಂ. 696, ಸೌಇಇ, IV, ಸಂ. 248; XVI, ಸಂ. 143.

ಸಂ. 333

ರಾಮಚಂದ್ರ (ಹಜಾರರಾಮ) ದೇವಸ್ಥಾನದಲ್ಲಿ ಮುಖ್ಯ ಗುಡಿಯ ಮಂಟಪದ ದಕ್ಷಿಣ ಅಧಿಷ್ಠಾನದ ಮೇಲೆ (ನಕಾಶೆ NRw)

ವಿಜಯನಗರ, ಕೃಷ್ಣದೇವರಾಯ

ಶಕ 1443, ವಿಕ್ರಮ, ಮಾಘ ಶು. 7 = ಕ್ರಿ.ಶ. 1521, ಜನವರಿ 15, ಮಂಗಳವಾರ

ಕನ್ನಡ

ಯೇರುವ ಸಿಂಹಾಸನಾಧೀಶ್ವರ ಕಾಶ್ಯಪ ಗೋತ್ರದ ಮಹಾಮಂಡಲೇಶ್ವರ ಚಿಕತಿಮ್ಮಯದೇವ ಮಹಾಅರಸನ ಮಗ ತಿಮ್ಮರಾಜನು ರಾಮಚಂದ್ರದೇವರ ಅಮೃತಪಡಿ ಸೇವೆಗೆಂದು ಕೃಷ್ಣದೇವರಾಯನು ದಾನ ಮಾಡಿದ ಸೊಂಡೂರ ಸೀಮೆಯಲ್ಲಿನ ತಾಳೂರು ಗ್ರಾಮದಲ್ಲಿಯ ಒಡೆದುಹೋದ ಕೆರೆಯನ್ನು ದೊಡ್ಡ ಕೆರೆಯಾಗಿ ಕಟ್ಟಿಸಿ, ದೇವರ ಗುಡಿಯ ಮುಂದೆ ಉತ್ಸವ ಮಂಟಪ ಕಟ್ಟಿಸಿದನೆಂದು ತಿಳಿಸುತ್ತದೆ. ಅಲ್ಲದೆ ರಾಮಚಂದ್ರ ದೇವಸ್ಥಾನದ ಕಾರ್ಯಕರ್ತ ಕರಣಿಕ ಮಂಗರಸನನ್ನೊಳಗೊಂಡು ಕೆಲವು ವ್ಯಕ್ತಿಗಳು (ಹೆಸರುಗಳಿವೆ) ಕೆರೆಗೆ ಭೂಮಿಯನ್ನು ದಾನ ಮಾಡಿದರೆಂದು ತಿಳಿಸುತ್ತದೆ. ತಿಮ್ಮರಾಜು ತನ್ನ ತಂದೆ ಚಿಕ್ಕತಿಮ್ಮರಾಜಒಡೆಯ ಮತ್ತು ತಾಯಿ ಕೋನಾಜ ಅಮ್ಮನವರಿಗೆ ಪುಣ್ಯವಾಗಲೆಂದು ಅದೇ ದೇವಸ್ಥಾನದಲ್ಲಿ ಉತ್ಸವಗಳನ್ನಾಚರಿಸಲು ಭೂಮಿಯಿಂದ ಬರುವ ಆದಾಯದ ಒಂದು ಭಾಗವನ್ನು ದಾನ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 21; ಸೌಇಇ, IV, ಸಂ. 250; ಎಸ್. ರಾಜಶೇಖರ, 1992, ಸಂ. 3.

ಸಂ. 334

ಅದೇ ದೇವಸ್ಥಾನದ ಗರ್ಭಗೃಹದ ದಕ್ಷಿಣ ಅಧಿಷ್ಠಾನದ ಮೇಲೆ (ನಕಾಶೆ NRw)

--

16ನೇ ಶತಮಾನ

ಕನ್ನಡ

ತಿಮ್ಮರಾಜನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಒಂದು ಮಂಟಪವನ್ನು ಕಟ್ಟಿಸಿದ ಮತ್ತು ದಾನವನ್ನು ಮಾಡಿದ ಉಲ್ಲೇಖವಿದೆ.

ಎಸ್. ರಾಜಶೇಖರ, 1992, ಸಂ. 4

ಸಂ. 335

ಅದೇ ದೇವಸ್ಥಾನದ ಪೂರ್ವ ಮತ್ತು ಉತ್ತರ ಅಧಿಷ್ಠಾನದ ಮೇಲೆ (ನಕಾಶೆ NRw)

--

ದುರ್ಮುಖಿ, ಚೈತ್ರ ಶು. 1, ಶ(ನಿವಾರ)

ಕನ್ನಡ

ಅಣ್ಣಲದೇವಿಯು ರಾಮಚಂದ್ರದೇವರಿಗೆ ಚಿನ್ನದ ಹರಿವಾಣ (ತಟ್ಟೆ) ಮತ್ತು ಬಟ್ಟಲು ಸಮರ್ಪಿಸಿದಳೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 22; ಸೌಇಇ, IV, ಸಂ. 251; ಎಸ್. ರಾಜಶೇಖರ, 1992, ಸಂ. 2.

ಸಂ. 336

ಅದೇ ದೇವಸ್ಥಾನದ ಪೂರ್ವ ಅಧಿಷ್ಠಾನದ ಮೇಲೆ (ನಕಾಶೆ NRw)

--

14ನೇ ಶತಮಾನ

ಸಂಸ್ಕೃತ, ನಾಗರಿ

ಭೋಜನನ್ನು ವಾಣಿ, ವತ್ಸರಾಜನನ್ನು ತ್ರಿಪುರಾಂಬ ಮತ್ತು ವಿಕ್ರಮಾರ್ಕನನ್ನು ಕಾಳಿ ಆಶೀರ್ವದಿಸಿದಂತೆ ಈಗ ಪಂಪಾದೇವಿಯು ಅರಸ ದೇವರಾಯನನ್ನು ಆಶೀರ್ವದಿಸಲೆಂದು ಆಶಿಸುತ್ತದೆ.

ಆ್ಯರಿಸೌಇಎ, 1889, ಸಂ. 23; ಸೌಇಇ, IV, ಸಂ. 252; ಎಸ್. ರಾಜಶೇಖರ, 1992, ಸಂ. 1.

ಸಂ. 337

ಅದೇ ದೇವಸ್ಥಾನದ ಪ್ರಾಕಾರದಲ್ಲಿ ಉತ್ತರ ದಿಕ್ಕಿನ ದ್ವಾರದ ಪಶ್ಚಿಮ ಗೋಡೆಯ ಮೇಲೆ (ನಕಾಶೆ NRw)

--

16ನೇ ಶತಮಾನ

ತೆಲುಗು

ಅರವೀಟಿ ವೆಂಗಳರಾಜು ರಾಮಚಂದ್ರದೇವಸ್ಥಾನದಲ್ಲಿ ಆಳ್ವಾರರನ್ನು (ವಿಗ್ರಹಗಳನ್ನು) ಪ್ರತಿಷ್ಠಾಪಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 67.

ಸಂ. 338

ಅದೇ ದೇವಸ್ಥಾನದಲ್ಲಿ ಈಶಾನ್ಯ ದಿಕ್ಕಿನ ಮಂಟಪದ ದಕ್ಷಿಣ ಗೋಡೆಯ ಮೇಲೆ (ನಕಾಶೆ NRx)

ವಿಜಯನಗರ, ಕೃಷ್ಣರಾಯ

ಶಕ 1435, ಶ್ರೀಮುಖ, ಚೈತ್ರ ಶು. 5 = ಕ್ರಿ.ಶ. 1513, ಮಾರ್ಚ್ 12

ಕನ್ನಡ

ಅರಸನು ತನ್ನ ತಂದೆ ನರಸಣನಾಯಕವೊಡೆಯ ಮತ್ತು ತಾಯಿ ನಾಗಾಜಿಅಮ್ಮನವರಿಗೆ ಪುಣ್ಯವಾಗಲೆಂದು ರಾಮಚಂದ್ರ ದೇವರ ಸೇವೆಗೆ ಕಳಸಾಪುರ ಮಾಗಣಿಯಲ್ಲಿ ವೊಳಕೋಟೆ ಗ್ರಾಮ, ಸೊಂಡೂರು ಸೀಮೆಯಲ್ಲಿ ತಾಳೂರು ಗ್ರಾಮ, ನಾರಿಯಸೀಮೆಯಲ್ಲಿ ಯಿಟ್ಟಗೆ ಗ್ರಾಮ, ಔಬಲದೇವ ಕಣಿವೆಯ ಹತ್ತಿರ ಮುದ್ದಾಪುರ ಗ್ರಾಮ, ಕೊಪಣ ಸೀಮೆಯಲ್ಲಿರುವ ಕುಟುಕನಹಳ್ಳಿ ಮತ್ತು ನಾರಿಯಸೀಮೆಯಲ್ಲಿರುವ ಜಾಯನೂರ ಗ್ರಾಮಗಳನ್ನು ದಾನಮಾಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 24; ಸೌಇಇ, IV, ಸಂ. 253; ಎಸ್. ರಾಜಶೇಖರ, 1992, ಸಂ. 5.

ಸಂ. 339

ಅದೇ ದೇವಸ್ಥಾನದ ಪೂರ್ವಕ್ಕೆ ಸಣ್ಣ ಗುಡಿಯಲ್ಲಿರುವ ನಂದಿಯ ಮೇಲೆ (ನಕಾಶೆ NRx)

--

15-16ನೇ ಶತಮಾನ

ಕನ್ನಡ

ಬಸವರಾಜದೇವರು (ನಂದಿಯು) ಸಂಕಜೀಯನ ಮಗ ಲಕ್ಕಿದೇವನದು ಎಂದು ತಿಳಿಸುತ್ತದೆ.

ವಿಪ್ರೊರೀ, 1991-92, ಸಂ. 3

ಸಂ. 340

ಅದೇ ದೇವಸ್ಥಾನದ ಬಜಾರದಲ್ಲಿ ಎರಡು ಅಂತಸ್ತಿನ ಮಂಟಪದ ಮೇಲಿನ ಅಂತಸ್ತಿನ ತೊಲೆಯ ಮೇಲೆ (ನಕಾಶೆ NRx-y)

--

16ನೇ ಶತಮಾನ

ತೆಲುಗು

ಮಂಟಪವು ರಘುನಾಥ ದೇವರಿಗೆ ವರ್ತಕರ ಸಂಘದ ಸೇವೆಯೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 68.

ಸಂ. 341

ಆನೆಶಾಲೆಯ ಈಶಾನ್ಯ ದಿಕ್ಕಿಗೆ ಬೆಟ್ಟಕ್ಕೆ ಹೋಗುವ ಮೆಟ್ಟಿಲುಗಳ ಪಕ್ಕದಲ್ಲಿ ಬಂಡೆಯ ಮೇಲೆ (ನಕಾಶೆ NSa)

--

ವಿರೋಧಿಕೃತ್, ಶ್ರಾವಣ ಬ. ..

ತೆಲುಗು

ಹಾಳಾಗಿದೆ. ರಾಮರಾಜ ತಿರುಮಲರಾಜನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಮಾಡಿದ ದಾನದ (ವಿವರಗಳು ಸ್ಪಷ್ಟವಾಗಿಲ್ಲ) ಬಗ್ಗೆ ತಿಳಿಸುತ್ತದೆ. ವಿರೂಪಾಕ್ಷ ವೀಥಿ ಮತ್ತು ತುಂಗಭದ್ರಾವನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1983-84, ಸಂ. 66.

ಸಂ. 342

ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕೆ ದಶಾವತಾರ ಮಂಟಪದ ಕೆಳಗೆ ಬಂಡೆಯ ಮೇಲೆ (ನಕಾಶೆ NSa)

ವಿಜಯನಗರ, ಸದಾಶಿವರಾಯ

16ನೇ ಶತಮಾನ

ತೆಲುಗು
ಅರಸನಿಗೆ ಪುಣ್ಯವಾಗಲೆಂದು ಸರಸಿಂಹದೇವರಿಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.
ವಿಪ್ರೊರೀ, 1984-87, ಸಂ. 92.

ಸಂ. 343

ಅದೇ ಕಲ್ಲಿನ ಮೇಲೆ (ನಕಾಶೆ NSa).
ವಿಜಯನಗರ, ಸದಾಶಿವರಾಯ
16ನೇ ಶತಮಾನ
ತೆಲುಗು
ಅಳಿಸಿಹೋಗಿದೆ. ಅರಸನಿಗೆ ಪುಣ್ಯವಾಗಲೆಂದು ದೇವರಿಗೆ (ಹೆಸರು ಹಾಳಾಗಿದೆ) ದಾನ ಮಾಡಿದ್ದನ್ನು ತಿಳಿಸುವಂತೆ ತೋರುತ್ತದೆ.
ವಿಪ್ರೊರೀ, 1984-87, ಸಂ. 93.

ಸಂ. 344

ಮೇಲಿನ ಶಾಸನದ ಹತ್ತಿರ ಗುಂಡಿನ ಮೇಲೆ (ನಕಾಶೆ NSa)
--
15-16ನೇ ಶತಮಾನ
ತೆಲುಗು
ಇದನ್ನು (ವಿವರಗಳಿಲ್ಲ) ತಿರುವಪ ಕೇಶವನು ಓಚುಲಮ ದೇವತೆಗೆ ಮಾಡಿದನೆಂದು ತಿಳಿಸುತ್ತದೆ.
ವಿಪ್ರೊರೀ, 1984-87, ಸಂ. 94.

ಸಂ. 345

ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕೆ ಬಂಡೆಯ ಮೇಲೆ (ನಕಾಶೆ NSa)
--
ಸೌಮ್ಯ, ಶ್ರಾವಣ, ಶು. 15
ತೆಲುಗು
ನರಸಿಂಹದೇವರ ತೋಟದ ಉಲ್ಲೇಖವಿದೆ.
ವಿಪ್ರೊರೀ, 1984-87, ಸಂ. 95.

ಸಂ. 346

ಆನೆಶಾಲೆಯ ಹಿಂಭಾಗದಲ್ಲಿ ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕೆ ಸಣ್ಣ ಗುಡ್ಡದ ಮೇಲಿನ ಗುಂಡಿನ ಮೇಲೆ (ನಕಾಶೆ NSb)
ವಿಜಯನಗರ, ಬುಕ್ಕರಾಯ

14ನೇ ಶತಮಾನ

ಕನ್ನಡ

ವೀರಬುಕ್ಕರಾಯನ ವಿಜಯನಗರ ಪಟ್ಟಣದ ಪೂರ್ವಕ್ಕಿರುವ ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕೆ ಮೂಲೆಯ ಬಂಡೆಯ ಮೇಲಿರುವ ಆನೆಯಗೊಂದಿಯ ಕೊತ್ತಳಕ್ಕೆ ಮಂಗಳವಾಗಲೆಂದು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 2.

ಸಂ. 347

ಆನೆಶಾಲೆಯ ಹತ್ತಿರದ ಜೈನ ದೇವಾಲಯದ ಉತ್ತರ ಗೋಡೆಯ ಮೇಲೆ (ನಕಾಶೆ NSl)

ವಿಜಯನಗರ, ದೇವರಾಯ (II)

ಶಕ 1348, ಪರಾಭವ, ಕಾರ್ತಿಕ ಪೌರ್ಣಮಿ = ಕ್ರಿ.ಶ. 1426, ಅಕ್ಟೋಬರ್ 16

ಸಂಸ್ಕೃತ, ಕನ್ನಡ

ಅರಸನು ವಿಜಯನಗರದಲ್ಲಿ ಎಲೆ ಅಡಿಕೆ ಬೀದಿ (ಪಾನ್ ಸುಪಾರಿ ಬಜಾರ್) (ಕ್ರಮುಕ ಪರ್ಣಾಪಣ ಅಥವಾ ಪರ್ಣ-ಪೂಗಿಫಲಾಪಣ ವೀಥಿ)ಯಲ್ಲಿ ಪಾರ್ಶ್ವನಾಥದೇವರ ಕಲ್ಲಿನ ಚೈತ್ಯಾಲಯವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ; 1889, ಸಂ. 32, ಸೌಇಇ, I, ಸಂ. 153; IV, ಸಂ. 261.

ಸಂ. 348

ಅದೇ ದೇವಸ್ಥಾನದ ಹತ್ತಿರವಿರುವ ವೈಷ್ಣವ ದೇವಸ್ಥಾನದ ಮಾಳಿಗೆಯ ಒಳಮೈ ಮೇಲೆ (ನಕಾಶೆ NSl)

--

15-16ನೇ ಶತಮಾನ

ತೆಲುಗು

ಜನಾರ್ದನದೇವರ ಸೇವಕ ಬುರಲಿ ಕೊಂಡಯನ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 96.

ಸಂ. 349

ಸೋಮವಾರದ ಬಾಗಿಲಿನ ಉತ್ತರಕ್ಕೆ ಗುಡ್ಡದ ಮೇಲಿನ ಗುಂಡಿನ ಮೇಲೆ (ನಕಾಶೆ NSs)

ವಿಜಯನಗರ, ಬುಕ್ಕರಾಯ

14ನೇ ಶತಮಾನ

ಕನ್ನಡ

ವೀರಬುಕ್ಕರಾಯನ ವಿಜಯನಗರ ಪಟ್ಟಣದ ಪೂರ್ವಕ್ಕಿರುವ ಸೋಮವಾರದ ಬಾಗಿಲಿನ ಉತ್ತರಕ್ಕಿರುವ ಬೆಟ್ಟದ ಸೋಮಯ ದೇವರ ಕೊತ್ತಳವನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1983-84, ಸಂ. 3.

ಸಂ. 350

ಸೋಮವಾರದ ಬಾಗಿಲಿನ ಹತ್ತಿರದ ದೇವಾಲಯಗಳ ಸಮೂಹದ ಹಿಂಭಾಗದಲ್ಲಿ ಇಳಿಜಾರು ಬಂಡೆಯ ಮೇಲೆ (ನಕಾಶೆ NSu)

--

15-16ನೇ ಶತಮಾನ

ಕನ್ನಡ

ಚೆನ್ನ ಎಂಬ ವ್ಯಕ್ತಿಯ ಹೆಸರನ್ನು ಸೂಚಿಸುತ್ತದೆ.

ವಿಪ್ರೊರೀ, 1984-87, ಸಂ. 100.

ಸಂ. 351

ಸೋಮವಾರದ ಬಾಗಿಲಿನ ಆಗ್ನೇಯಕ್ಕೆ ಬೆಟ್ಟದ ಮೇಲಿನ ದೇವಾಲಯದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ NSz)

ವಿಜಯನಗರ, ಸದಾಶಿವದೇವ

ಶಕ 1470, ನಳ, ಶ್ರಾವಣ ಬ. 11 = ಕ್ರಿ.ಶ. 1548, ಆಗಸ್ಟ್ 11, (ಕೀಲಕ ಸಂವತ್ಸರ)

ತೆಲುಗು

ಹಾಳಾಗಿದೆ. ಗವಿಕೇರಿ ರಘುನಾಥ ದೇವರಿಗೆ ದಾನ ಕೊಟ್ಟದ್ದನ್ನು ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 65.

ಸಂ. 352

ಮಾಲ್ಯವಂತ ಬೆಟ್ಟದ ಮೇಲೆ ರಘುನಾಥ ದೇವಸ್ಥಾನದ ಪಶ್ಚಿಮಕ್ಕಿರುವ ಗುಂಡಿನ ಮೇಲೆ (ನಕಾಶೆ NTc)

--

15-16ನೇ ಶತಮಾನ

ಸಂಸ್ಕೃತ, ನಾಗರಿ

ಗಣೇಶ, ಗೋವಿಂದ, ಮಹಾಲಕ್ಷ್ಮೀ ದೇವತೆಗಳ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 133.

ಸಂ. 353

ಅದೇ ಬಂಡೆಯ ಮೇಲೆ (ನಕಾಶೆ NTc)

--

15-16ನೇ ಶತಮಾನ

ನಾಗರಿ

"ಗೋವಿಂದ" ಎಂದು ಬರೆದಿದೆ.

ವಿಪ್ರೊರೀ, 1984-87, ಸಂ. 135.

ಸಂ. 354

ಮಾಲ್ಯವಂತ ರಘುನಾಥ ದೇವಸ್ಥಾನದ ಎದುರಿಗೆ ಕಲ್ಲಿನ ಆಸರೆಯಲ್ಲಿ ಗುಂಡಿನ ಮೇಲೆ (ನಕಾಶೆ NTd)

--

15-16ನೇ ಶತಮಾನ

ಕನ್ನಡ

ಈ ಚಿಕ್ಕ ಶಾಸನದ ಉದ್ದೇಶ ಸ್ಪಷ್ಟವಾಗಿಲ್ಲ.

ವಿಪ್ರೊರೀ, 1984-87, ಸಂ. 135.

ಸಂ. 355

ರಘುನಾಥ ದೇವಸ್ಥಾನ ಸಂ. 1ರ ಎಡಭಾಗದಲ್ಲಿ ಹೊರ ಗೋಡೆಯ ಮೇಲೆ (ನಕಾಶೆ NTd?)

ವಿಜಯನಗರ, ಸದಾಶಿವರಾಯ ಮಹಾರಾಯ

ಶಕ 1470, ಪ್ಲವಂಗ, ಶ್ರಾವಣ ಬ. 1 = ಕ್ರಿ.ಶ. 1547, ಆಗಸ್ಟ್ 2, (ಶಕ 1469)

ಕನ್ನಡ

ಸ್ವಲ್ಪ ಭಾಗ ಹಾಳಾಗಿದೆ. ಕಾಶ್ಯಪ ಗೋತ್ರದ ಹಿರಿಯ ಅಬ್ಬಿರಾಜನ ಮಗ ತಿಮ್ಮರಾಜನು ಕಾಶ್ಯಪ ಗೋತ್ರದ (ಭೀ)ಮರಾಜನ ಮಗ ಅಣ್ಣಮಲ್ಲರಾಜನಿಗೆ ತಿಂಗಳ ಸಂಬಳ (ಜೀತ) ಚಿಕ್ಕ ಗ ½ (ಹಣ) ದಿನದ ಸಂಬಳ (ಜೀತ) ಪ್ರಸಾದ ಪಡಿ 2 ಮತ್ತು ಸ್ವಲ್ಪ ಭೂಮಿಯನ್ನು ಕೊಟ್ಟು ರಘುನಾಥ ದೇವಸ್ಥಾನದಲ್ಲಿ ಪೂಜೆ (ಅಂಗರಂಗಭೋಗ) ಮುಂತಾದವುಗಳನ್ನು ನಡೆಸುವ ಅಧಿಕಾರ (ಕಾಣೆಯಾಚಿ) ಕೊಟ್ಟದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1975-76, ಸಂ. ಬಿ 103.

ಸಂ. 356

ರಘುನಾಥ ದೇವಸ್ಥಾನ ಸಂ. 2ರ ಎಡಭಾಗದಲ್ಲಿ ಹೊರಗೋಡೆಯ ಮೇಲೆ (ನಕಾಶೆ NTd?)

ವಿಜಯನಗರ, ಸದಾಶಿವರಾಯ ಮಹಾರಾಯ

ಶಕ 1477 (1470), ಪ್ಲವಂಗ, ಶ್ರಾವಣ ಶು. 1 = ಕ್ರಿ.ಶ. 1547, ಆಗಸ್ಟ್ 2, (ಶಕ 1469)

ಕನ್ನಡ

ಮೇಲಿನ 355ನೇ ಶಾಸನದಲ್ಲಿ ತಿಳಿಸಿರುವ ಹಿರಿಯ ಅಬ್ಬಿರಾಜನ ಮಗ ತಿಮ್ಮರಾಜನು ರಘುನಾಥ ದೇವಸ್ಥಾನದ ಅಧಿಕಾರದ ಗುತ್ತಿಗೆಯನ್ನು (ಕಾಣಿಯಾಚಿ) ಶ್ರೀವಚ್ಛ (ಶ್ರೀವತ್ಸ) ಗೋತ್ರದ ಅಶ್ವಲಾಯನ ಸೂತ್ರದ ಮತ್ತು (ಋಕ್) ಶಾಖೆಯ ಲಿಂಗರಸನ ಮಗ ತಿ(ಂ)ಮರಸನಿಗೆ ತಿಂಗಳಿಗೆ 3 ಪಡಿ ಮತ್ತು 2 ಪ್ರತಾಪ ಹಣ ಸಂಬಳದಂತೆ ಕೊಟ್ಟ ವಿಷಯ ತಿಳಿಸುತ್ತದೆ.

ಆ್ಯರಿಸೌಇಎ, 1975-76, ಸಂ. ಬಿ 104.

ಸಂ. 357

ರಘುನಾಥ ದೇವಾಲಯದ ಬಲಭಾಗದಲ್ಲಿ ಹೊರಗೋಡೆಯ ಮೇಲೆ (ನಕಾಶೆ NTd?)

ವಿಜಯನಗರ, ಸದಾಶಿವರಾಯ ಮಹಾರಾಯ

ಶಕ 1476 (1470), ಕೀಲಕ, ಕಾರ್ತಿಕ 12, ಸೋಮವಾರ = ಕ್ರಿ.ಶ. 1548, ಅಕ್ಟೊಬರ್

ಕನ್ನಡ

ಮೇಲಿನ 355-356 ಶಾಸನಗಳಲ್ಲಿ ತಿಳಿಸಿದ ಕಾಶ್ಯಪ ಗೋತ್ರ, ಆಪಸ್ತಂಭ ಸೂತ್ರ ಮತ್ತು ಯಜುಶಾಖೆಯ ಉದಯಗಿರಿಯಲ್ಲಿರುವ ಹರಿಗೆಯ ದಾನಿಯು ರಘುನಾಥ ದೇವಸ್ಥಾನದ ಸಕಲ ಪಾರುಪತ್ಯದ ಗುತ್ತಿಗೆಯನ್ನು (ಕಾಣಿಯಾಚಿ) ಆತ್ರೇಯ ಗೋತ್ರ ಮತ್ತು ಆಪಸ್ತಂಭ ಸೂತ್ರದ ಚೋಕಚೆರ್ಲ್ಲ ನಾಗ ಪಂಡಿತನ ಮಗ ಭದ್ರಿ ಪಂಡಿತನಿಗೆ ಪ್ರತಿದಿನ 1(4) ಪಡಿ ಅಕ್ಕಿಯ ಪ್ರಸಾದ ಮತ್ತು 18 ಪ್ರತಾಪ (ಪ್ರತಿ ತಿಂಗಳಿಗೆ)ದೊಂದಿಗೆ ದಾನ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಇಎ, 1975-76, ಸಂ. ಬಿ 105.

ಸಂ. 358

ತಳವಾರಘಟ್ಟ ಮತ್ತು ಕಂಪ್ಲಿ-ಹೊಸಪೇಟೆ ರಸ್ತೆಗಳು ಕೂಡುವ ಸ್ಥಳದ ಹತ್ತಿರ ಬೆಟ್ಟದ ಮೇಲಿನ ಕಲ್ಲಿನ ಆಸರೆಯ ಗುಂಡಿನ ಮೇಲೆ (ನಕಾಶೆ NTr)

--

15-16ನೇ ಶತಮಾನ

ಕನ್ನಡ

ಶಾಸನವು ಗುಂಡಿನ ಮುಂದೆ ಕಟ್ಟಿದ ಕಟ್ಟಡದಿಂದ ಭಾಗಶಃ ಮುಚ್ಚಿಹೋಗಿದೆ. ಮಠದ ನಿರ್ಮಾಣದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 101.

ಸಂ. 359

ಮೇಲಿನ ಶಾಸನದ ಹತ್ತಿರ ಇನ್ನೊಂದು ಗುಂಡಿನ ಮೇಲೆ (ನಕಾಶೆ NTr)

--

15-16ನೇ ಶತಮಾನ

ಕನ್ನಡ

ಅಪೂರ್ಣವಾಗಿದೆ. ಸಾಧಾರಣದ ಸಂವತ್ಸರದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 102.

ಸಂ. 360

ಮಾಲ್ಯವಂತ ಪರ್ವತದ ಎದುರಿಗೆ ಹೊಸಪೇಟೆ-ಕಂಪ್ಲಿ ರಸ್ತೆಯ ಇನ್ನೊಂದು ಬದಿಗಿರುವ ಬೆಟ್ಟದ ಮೇಲಿರುವ ದೇವಸ್ಥಾನದಲ್ಲಿಯ ಗುಂಡಿನ ಮೇಲೆ (ನಕಾಶೆ NTy-z)

--

15-16ನೇ ಶತಮಾನ

ಸಂಸ್ಕೃತ, ಕನ್ನಡ; ಕನ್ನಡ

ಸದಾಶಿವ ಮಹಾಯೋಗಿಯ ಉಲ್ಲೇಖವಿದೆ. ಮುಂದೆ ಕರಿಯಬಸವಣ್ಣೊಡೆಯನ ಮಗ ಸದಾಶಿವ ಆತನ ಶಿಷ್ಯ ಕಾಮಯ್ಯ ಪೆದ್ದಿಗನ ಬಗ್ಗೆ ತಿಳಿಸುತ್ತದೆ.

ವಿಪ್ರೊರೀ, 1983-84, ಸಂ. 55.

ಸಂ. 361

ಮಾಲ್ಯವಂತ ಪರ್ವತದ ಪೂರ್ವಕ್ಕೆ ಕಣಿವೆಯಲ್ಲಿನ ಗುಂಡಿನ ಮೇಲೆ (ನಕಾಶೆ NUb)

--

15-16ನೇ ಶತಮಾನ

ಕನ್ನಡ

ಚನ್ನಮಲಂಮ ಎಂಬ ಸ್ತ್ರೀಯ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 136.

ಸಂ. 362

ಉದಯಗಿರಿ ಬಾಗಿಲ ಹತ್ತಿರವಿರುವ ಬಂಡೆಯ ಮೇಲೆ (ನಕಾಶೆ NUd)

--

ಕಾಳಯುಕ್ತಿ, ಆಷಾಢ ಶು. 15

ಕನ್ನಡ

ಸೋಮಾಯೆನಾಯಕನ ಮಗ ಬುಳಪ ಮತ್ತು ಆತನ ಹೆಂಡತಿ ಭಯಿರಾಯಿ ಸುಗನಹಳಿಯ ಜಂಗಮ ಸೋಮಯಿದೇವ ಅಯಗಳಿಗೆ ಬಾವಿ ದಾರಿಯಿಂದ ಒಳಗಿನ ನಿವೇಶನವನ್ನು ಕೊಟ್ಟರು.

ಆ್ಯರಿಇಎ, 1975-76, ಸಂ. ಬಿ 102; ವಿಪ್ರೊರೀ, 1984-87, ಸಂ. 138.

ಸಂ. 363

ಮಾಲ್ಯವಂತ ಪರ್ವತದ ಪೂರ್ವಕ್ಕೆ ರಸ್ತೆಯ ದಕ್ಷಿಣ ಭಾಗದಲ್ಲಿರುವ ಗುಂಡಿನ ಮೇಲೆ (ನಕಾಶೆ NUf)

--

15-16ನೇ ಶತಮಾನ
ಕನ್ನಡ
ತ್ರುಟಿತ. ಮಲ್ಲಯ ಎಂಬ ವ್ಯಕ್ತಿಯ ಉಲ್ಲೇಖವಿದೆ.
ವಿಪ್ರೊರೀ, 1984-87, ಸಂ. 137.

ಸಂ. 364

ಬೇಟೆಕಾರರ ಹೆಬ್ಬಾಗಿಲಿನ ಈಶಾನ್ಯಕ್ಕೆ ಶಿಥಿಲವಾದ ದೇವಸ್ಥಾನದ ಉತ್ತರ ಗೋಡೆಯಾಗಿರುವ ಗುಂಡಿನ ಮೇಲೆ (ನಕಾಶೆ NUt)
--
15-16ನೇ ಶತಮಾನ
ತೆಲುಗು
ಲಿಂಗಬಾವಿ ಬಸವಣ್ಣೊಡೆಯನ ಸ್ಥಳದ ಬಗ್ಗೆ ತಿಳಿಸುತ್ತದೆ.
ವಿಪ್ರೊರೀ, 1984-87, ಸಂ. 107.

ಸಂ. 365

ಮೇಲಿನ ಶಾಸನದ ಹತ್ತಿರ ಬಾವಿಗೆ ಕಟ್ಟಿದ ಕಲ್ಲಿನ ಮೇಲೆ (ನಕಾಶೆ NUt)
--
15-16ನೇ ಶತಮಾನ
ಕನ್ನಡ
ಹಾಳಾಗಿದೆ. ಲಿಂಗಬಾವಿಯ ಉಲ್ಲೇಖವಿದೆ.
ವಿಪ್ರೊರೀ, 1984-87, ಸಂ. 108.

ಸಂ. 366

ಅದೇ ದೇವಸ್ಥಾನದ ಹತ್ತಿರ ಬಿದ್ದಿರುವ ಗುಂಡಿನ ಮೇಲೆ (ನಕಾಶೆ NUt)
--
15-16ನೇ ಶತಮಾನ
ಸಂಸ್ಕೃತ; ಕನ್ನಡ, ನಾಗರಿ
ಮುಕ್ತಿಋಣ ನಿರ್ಮ್ಮೂಲ ತೀರ್ಥದ ಉಲ್ಲೇಖವಿದೆ.
ವಿಪ್ರೊರೀ, 1984-87, ಸಂ. 109.

ಸಂ. 367

ಅದೇ ದೇವಸ್ಥಾನದ ಉತ್ತರ ದಿಕ್ಕಿಗಿರುವ ಗುಂಡಿನ ಮೇಲೆ (ನಕಾಶೆ NUt)
--

ರುಧಿರೋದ್ಗಾರಿ

ತೆಲುಗು

ತಿರಿವಿದಿ ಚಿಟಿನಾಗಿನೇನಿಯ ಮಗ ಚಿನ್ನಪನಾಯಂಡು ರಂಗನಾಥ ಬಾವಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 110.

ಸಂ. 368

ಮಾಲ್ಯವಂತ ರಘುನಾಥ ದೇವಸ್ಥಾನದ ಆಗ್ನೇಯ ದಿಕ್ಕಿಗೆ ಕಣಿವೆಯಲ್ಲಿರುವ ಬೇಟೆಕಾರರ ಹೆಬ್ಬಾಗಿಲಿನ ಪೂರ್ವಕ್ಕಿರುವ ಗುಂಡಿನ ಮೇಲೆ (ನಕಾಶೆ NUx)

ವಿಜಯನಗರ, ಹರಿಹರ (II)

ಶಕ 1312, ರೌದ್ರಿ, ಆಶ್ವೀಜ ಶು. 1 = ಕ್ರಿ.ಶ. 1380, ಆಗಸ್ಟ್ 31

ಕನ್ನಡ

ಹರಿಹರ ಮಹಾರಾಯನ ಮನೆಯ ಎಡವಂಕದ ಬೇಟೆಕಾರ ಮಲಗೆಯನಾಯ್ಕನ ಮಗ ಬಢೆಯ ನಾಯ್ಕನು ಬೋಟೆಕಾರರ ಹೆಬ್ಬಾಗಿಲ ಪೂರ್ವಕ್ಕೆ ಒರತೆಯ ಮೈಲಾರದೇವರನ್ನು ಪ್ರತಿಷ್ಠಾಪಿಸಿ, ಅದರ ಆಗ್ನೇಯಕ್ಕೆ ಆಲದ ಆರವೆ(ವನ) ಮತ್ತು ಆ ದೇವರ ಹಿಂದೆ ವಾಯುವ್ಯಕ್ಕೆ ಒರತೆಯ ಕೊಂಡವನ್ನು ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 105.

ಸಂ. 369

ಪ್ರಸನ್ನ ವಿರೂಪಾಕ್ಷ (ಭೂಮಿಯ ಕೆಳಮಟ್ಟದ) ದೇವಸ್ಥಾನದ ನೈರುತ್ಯಕ್ಕೆ ಶ್ರೀ ನಾಗೇಶಪ್ಪನವರ ಹೊಲದಲ್ಲಿರುವ ದೇವಸ್ಥಾನದ ಹತ್ತಿರವಿರುವ ಕಲ್ಲಿನ ಮೇಲೆ (ನಕಾಶೆ NVj)

ವಿಜಯನಗರ, ಬುಕ್ಕ (I)

ಶಕ 1288, ಪ್ರಭವ, ಪುಷ್ಯ ಬ. 10, ಆದಿವಾರ = ಕ್ರಿ.ಶ. 1366, ಡಿಸೆಂಬರ್ 27

ಕನ್ನಡ

ಮಹಾಪ್ರಧಾನ ಬಸವ ದಂಡನಾಯಕನು ವಿರೂಪಾಕ್ಷ ದೇವರಿಗೆ ಭೂಮಿದಾನ ಮಾಡಿದನೆಂದು ತಿಳಿಸುತ್ತದೆ. ಈ ಭೂಮಿಯು ರಾಮಾಪುರ ಕೆರೆಯ ಹತ್ತಿರವಿದೆ ಎಂದೂ ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 89.

ಸಂ. 370

ವಿಜಯನಗರ ಪಟ್ಟಣದ ನೈರುತ್ಯ ದಿಕ್ಕಿಗೆ ಕೋಟೆಯ ಬಾಗಿಲಿನ ಎದುರಿಗಿರುವ ಹನುಮಂತನ ದೇವಸ್ಥಾನದ ಬಾಗಿಲಿನ ಎಡ ತೋಳಿನ ಮೇಲೆ (ನಕಾಶೆ NVo)

ವಿಜಯನಗರ, ಮಲ್ಲಿಕಾರ್ಜುನ

15ನೇ ಶತಮಾನ

ಕನ್ನಡ

ಪ್ರೌಢದೇವರಾಯನ ಮಗ ಮಲ್ಲಿಕಾರ್ಜುನನ ಉಲ್ಲೇಖವಿದೆ. ಈ ಶಾಸನದ ಪಕ್ಕದಲ್ಲಿ ಮಲ್ಲಿಕಾರ್ಜುನನ ಶಿಲ್ಪವಿದೆ.

ಆ್ಯರಿಇಎ, 1957-58, ಸಂ. 204.

ಸಂ. 371

ಅದೇ ದೇವಸ್ಥಾನದ ಬಾಗಿಲಿನ ಬಲ ತೋಳಿನ ಮೇಲೆ (ನಕಾಶೆ NVo)

ವಿಜಯನಗರ, ಮಲ್ಲಿಕಾರ್ಜುನ

15ನೇ ಶತಮಾನ

ಕನ್ನಡ

ಮಲ್ಲಿಕಾರ್ಜುನ ದೇವನ ಸೇವಕನಾದ ಸೀರಂಗು ಈ ಗುಡಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಈ ಶಾಸನದ ಪಕ್ಕದಲ್ಲಿ ಸೀರಂಗು (ಶ್ರೀರಂಗ)ನ ಶಿಲ್ಪವಿದೆ.

ಆ್ಯರಿಇಎ, 1957-58, ಸಂ. ಬಿ 205.

ಸಂ. 372

ಕಡಿರಾಮಪುರದ ಕಡೆಗೆ ಹೋಗುವ ಕೋಟೆಗೋಡೆಯ ಬಲಕ್ಕೆ ಹೊಲದಲ್ಲಿರುವ ಶಿವ ದೇವಸ್ಥಾನದ ಹತ್ತಿರ (ನಕಾಶೆ NV?)

ವಿಜಯನಗರ, ಅಚ್ಯುತದೇವ ಮಹಾರಾಯ

ಶಕ 1453, ಖರ, ಪುಷ್ಯ ಬ. 5, ಗುರುವಾರ = ಕ್ರಿ.ಶ. 1531, ಡಿಸೆಂಬರ್ 28

ತೆಲುಗು

ದೇವಸ್ಥಾನವನ್ನು ಕಟ್ಟಿಸಿದ ಬಗ್ಗೆ ತಿಳಿಸುತ್ತದೆ.

ಆ್ಯರಿಇಎ, 1957-58, ಸಂ. ಬಿ 203.

ಸಂ. 373

ಕಡಿರಾಮಪುರಕ್ಕೆ ಹೋಗುವ ದಾರಿಯಲ್ಲಿನ ಕೋಟೆಯ ಬಾಗಿಲ ಮುಂದೆ ರಸ್ತೆ ಬದಿಯಲ್ಲಿ (ನಕಾಶೆ NV?)

ವಿಜಯನಗರ, ಮಹಾಮಂಡಲೇಶ್ವರ ರಾಮರಾಜ

--

ಕನ್ನಡ

ರಾಮರಾಜನ ಕಾರ್ಯಕರ್ತನಾದ ಕೊನೇಟಿ ಕೊಂಡರಾಜಯನಿಗೆ ಪುಣ್ಯವಾಗಲೆಂದು ಬಾಗಿಲ ಹನುಮಂತರಾಯ ದೇವರಿಗೆ ಪೂಜೆ ಮತ್ತು ನೈವೇದ್ಯಕ್ಕೆ ಭೂಮಿದಾನ ಮಾಡಿದ್ದನ್ನು ತಿಳಿಸುತ್ತದೆ. ಕೊಂಡರಾಜಯ್ಯನ ಬೊಕ್ಕಸ ಭಂಡಾರಕರ್ತ ಯೆಲ್ಲಪ್ಪ ನಾಯಕನ ಮಗ ಕಂಬನಾಯಕನು ಈ ದಾನವನ್ನು ಮಾಡಿದನು.

ಆ್ಯರಿಇಎ, 1957-58, ಸಂ. ಬಿ 206.

ಸಂ. 374

ಮಹಾನವಮಿ ದಿಬ್ಬದ ಮುಂದೆ ಉತ್ಖನನ ಮಾಡಿದಾಗ ದೊರೆತ ಕಲ್ಲಿನ ಮೇಲೆ (ನಕಾಶೆ NWc)

--

1-2ನೇ ಶತಮಾನ

ಪ್ರಾಕೃತ, ಬ್ರಾಹ್ಮಿ

ತ್ರುಟಿತ. "ತರಸ ಪುತಸ ..... ದಾನಂ" ಎಂದು ಬರೆಯಲಾಗಿದೆ.

ಆ್ಯರಿಇಎ, 1975-76, ಸಂ. ಬಿ 94; 1980-81, ಸಂ ಬಿ. 123; ಜಎಸೊಇ, VII, ಪು. 8-11.

ಸಂ. 375

ಮಹಾನವಮಿ ದಿಬ್ಬದ ಮುಂದೆ ದೊರೆತಿರುವ ತುಂಡಾದ ಕಲ್ಲಿನ ಮೇಲೆ (ನಕಾಶೆ NWc)

ಕಲ್ಯಾಣ ಚಾಲುಕ್ಯ, [ವಿಕ್ರಮಾದಿತ್ಯ VI]

ಚಾಲುಕ್ಯ ವಿಕ್ರಮ ವರ್ಷ 1, [ನಳ], ಭಾದ್ರಪದ ಬ. ಆದಿತ್ಯವಾರ = ಕ್ರಿ.ಶ. 1076, ಆಗಸ್ಟ್ 21 ಅಥವಾ 28, ಭಾನುವಾರ

ಕನ್ನಡ

ಅಪೂರ್ಣವಾಗಿದೆ ಮತ್ತು ಹಾಳಾಗಿದೆ. ಮಹಾಪ್ರಧಾನ ದಂಡನಾಯಕ ಸೋಮೇಶ್ವರಭಟ್ಟೋಪಾಧ್ಯಾಯನು ಒಂದು ಮಠದಲ್ಲಿ (ಹೆಸರು ತಿಳಿಸಿಲ್ಲ) ಪುರಾಣ ವ್ಯಾಖ್ಯಾನ ಮಾಡುವ ಉಪಾಧ್ಯಾಯರಿಗೆ ಪ್ರತಿ ವರ್ಷ 80 ಲೊಕ್ಕಿ ಗದ್ಯಾಣಗಳನ್ನು ದಾನ ಕೊಟ್ಟನೆಂದು ತಿಳಿಸುತ್ತದೆ.

ಆ್ಯರಿಇಎ, 1975-76, ಸಂ. ಬಿ 95; ಜಎಸೊಇ, X, ಪು. 63-66.

ಸಂ. 376

ಅದೇ ಸ್ಥಳದಲ್ಲಿ ರಾಜ ಸಭಾಂಗಣದ ಹತ್ತಿರ ಇನ್ನೊಂದು ತುಂಡಾದ ಕಲ್ಲಿನ ಮೇಲೆ (ನಕಾಶೆ NWc)

--

11ನೇ ಶತಮಾನ

ಕನ್ನಡ

ಅರಸನನ್ನು ಹೊಗಳುವ ಕೆಲವು ಪದ್ಯಗಳನ್ನೊಳಗೊಂಡಿದೆ.

ಆ್ಯರಿಇಎ, 1952-53, ಸಂ. ಬಿ 221.

ಸಂ. 377

ಮಹಾನವಮಿ ದಿಬ್ಬಕ್ಕೆ ಸೇರಿಸಿರುವ ಕಲ್ಲಿನ ಮೇಲಿನ ಆನೆಯ ಶಿಲ್ಪದ ಕೆಳಗೆ (ನಕಾಶೆ NWc)

--

13ನೇ ಶತಮಾನ

ಕನ್ನಡ

ತೃಟಿತ. ಒಂದು ಭಾಗ ಮಾತ್ರವಿದ್ದು, ಒಬ್ಬ ಆಚಾರ್ಯನ ಮತ್ತು ಆತನ ಶಿಷ್ಯನ ವಿವರಗಳಿವೆ.

ಆ್ಯರಿಇಎ, 1975-76, ಸಂ. ಬಿ 96.

ಸಂ. 378

ಮಿಸ್ಟರ್ ಸೆವೆಲ್‌ರು ಮಹಾನವಮಿ ದಿಬ್ಬದ ವಾಯುವ್ಯ ಭಾಗದಲ್ಲಿ ಶೋಧ ಮಾಡಿದ ಶಿಲ್ಪವುಳ್ಳ ಕಪ್ಪು ಗ್ರಾನೈಟ್ ಕಲ್ಲಿನ ಎರಡು ತುಂಡುಗಳ ಮೇಲೆ (ನಕಾಶೆ NWc)

--

--

ಸಂಸ್ಕೃತ, ಕನ್ನಡ

ಮಲಧರಿದೇವ ಹೆಸರಿನ ಸನ್ಯಾಸಿಯ ಮರಣದ ಬಗ್ಗೆ ತಿಳಿಸುತ್ತದೆ.

ಆ್ಯರಿಇಎ, 1893-94, 1893ರ ಸಂ. 545; ಸೌಇಇ, V, ಸಂ. 221.

ಸಂ. 379

ರಾಣಿಯರ ಸ್ನಾನಗೃಹದ ನೈರುತ್ಯ ದಿಕ್ಕಿಗೆ ಶಿಥಿಲವಾದ ದೇವಸ್ಥಾನದ ಹತ್ತಿರ ಹುಣಸೆ ಮರದ ಕೆಳಗಿರುವ ಕಲ್ಲಿನ ಮೇಲೆ (ನಕಾಶೆ NWt)

ವಿಜಯನಗರ, ಕೃಷ್ಣರಾಯ

ಶಕ 1449, ಸರ್ವಜಿತ್, ಮಾಘ ಬ. 14 = ಕ್ರಿ.ಶ. 1528, ಫೆಬ್ರವರಿ 24

ಕನ್ನಡ

ಅಳಿಸಿಹೋಗಿದೆ.

ವಿಪ್ರೊರೀ, 1983-84, ಸಂ. 19.

ಸಂ. 380

ಸರಸ್ವತಿ ದೇವಸ್ಥಾನದ ಪೂರ್ವಕ್ಕೆ ಗುಂಡಿನ ಮೇಲೆ (ನಕಾಶೆ NXf)

--

--

ಕನ್ನಡ

ಅಸ್ಪಷ್ಟವಾಗಿದೆ. ಕೃಷ್ಣರಾಯನಿಗೆ ಪುಣ್ಯವಾಗಲೆಂದು ಒಬ್ಬ ಮಹಿಳೆ ಬಾವಿಯನ್ನು ಕಟ್ಟಿಸಿದಳೆಂದು ತಿಳಿಸುತ್ತದೆ.

ಆ್ಯರಿಇಎ, 1938-39, ಸಂ. ಬಿ 444.

ಸಂ. 381

ಭೀಮನ ಬಾಗಿಲಿನ ಈಶಾನ್ಯ ದಿಕ್ಕಿಗಿರುವ ಕಲ್ಲಿನ ಆಸರೆಯ ಕಲ್ಲಿನ ಮೇಲೆ (ನಕಾಶೆ NXk)

--

14-15ನೇ ಶತಮಾನ

ಕನ್ನಡ

ಶಿವಯೋಗಿದೇವರ ಉಲ್ಲೇಖವಿದೆ.

ಇಪ್ರೊರಿೀ, 1983-84, ಸಂ. 54.

ಸಂ. 382

ಗಾಣಗಿತ್ತಿ ಜೈನ ದೇವಸ್ಥಾನದ ಮುಂದಿನ ದೀಪಸ್ತಂಭದ ಮೇಲೆ (ನಕಾಶೆ NXn)

ವಿಜಯನಗರ, ಹರಿಹರ

ಶಕ 1307, ಕ್ರೋಧನ, ಫಾಲ್ಗುಣ ಬ. 2, ಶುಕ್ರವಾರ = ಕ್ರಿ.ಶ. 1386, ಫೆಬ್ರವರಿ 17, ಶನಿವಾರ (ಶುಕ್ರವಾರವಲ್ಲ)

ಸಂಸ್ಕೃತ, ಕನ್ನಡ

ಧರ್ಮಭೂಷಣ ಭಟ್ಟಾರಕ (II)ನವರೆಗಿನ ಜೈನ ಗುರುಗಳ ವಂಶಾವಳಿಯನ್ನು ತಿಳಿಸುತ್ತದೆ. ಇರುಗಪ ದಂಡನಾಯಕನು ವಿಜಯನಗರದಲ್ಲಿ ಕುಂಥುಜಿನನಾಥನ ಕಲ್ಲಿನ ದೇವಸ್ಥಾನ (ಚೈತ್ಯಾಲಯ) ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 17; ಸೌಇಇ, I, ಸಂ. 152; IV, ಸಂ. 246.

ಸಂ. 383

ಅದೇ ದೇವಸ್ಥಾನದ ಹತ್ತಿರ ಬಿದ್ದಿರುವ (ಈಗ ದೇವಸ್ಥಾನದೊಳಗಿರುವ) ಕಲ್ಲಿನ ಮೇಲೆ (ನಕಾಶೆ NXn)

ವಿಜಯನಗರ, ಸದಾಶಿವ

ಶಕ 1479, ಪಿಂಗಳ, ವೈಶಾಖ ಶು. 10, ಆದಿವಾರ = ಕ್ರಿ.ಶ. 1557, ಏಪ್ರಿಲ್ 8, ಗುರುವಾರ

ಕನ್ನಡ

ಮಹಾಮಂಡಲೇಶ್ವರ ಶ್ರೀರಂಗರಾಜ ರಾಮರಾಜಅಯ್ಯನು ಚಿಕ್ಕದೇವರ ಬಸ್ತಿಯ ಶಾಂತಿನಾಥಸ್ವಾಮಿಗೆ ಅಂಗಡಿಯಿಂದ ಬರುವ ಆದಾಯವನ್ನು ದಾನ ಮಾಡಿದನೆಂದು ತಿಳಿಸುತ್ತದೆ. ಅಲ್ಲದೆ ಚಿಕ್ಕ ವೀರನರಸಣ್ಣನು ಬಸ್ತಿಗಾಗಿ ಕಟ್ಟಿಸಿದ ಅಂಗಡಿ (ಮಳಿಗೆ)ಯ ವಿವರವನ್ನು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 18; ಸೌಇಇ, IV, ಸಂ. 247.

ಸಂ. 384

ಬೇಟೆಕಾರರ ಹೆಬ್ಬಾಗಿಲಿನ ಪಶ್ಚಿಮಕ್ಕೆ ಕಣಿವೆಯಲ್ಲಿನ ಗುಂಡಿನ ಮೇಲೆ (ನಕಾಶೆ NYc)

--

15-16ನೇ ಶತಮಾನ

ತೆಲುಗು

ವೈಭೋಗ ವೆಂಕಟರಾಯನ ತೋಟದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 103.

ಸಂ. 385

ಬೇಟೆಕಾರರ ಹೆಬ್ಬಾಗಿಲಿನ ವಾಯುವ್ಯ ದಿಕ್ಕಿಗಿರುವ ಗುಂಡಿನ ಮೇಲೆ (ನಕಾಶೆ NYc)

--

15-16ನೇ ಶತಮಾನ

ತೆಲುಗು

ಅನಮಲಪನ ತೋಟ ಮತ್ತು ತಿಮರಾವುತನ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 104.

ಸಂ. 386

ಅದೇ ಶಾಸನದ ಈಶಾನ್ಯಕ್ಕೆ ಬೆಟ್ಟದ ಬುಡದಲ್ಲಿರುವ ಗುಂಡಿನ ಮೇಲೆ (ನಕಾಶೆ NYg)

--

15-16ನೇ ಶತಮಾನ

ಕನ್ನಡ

ಅಳಿಸಿಹೋಗಿದೆ. ಒಬ್ಬ ಅಧಿಕಾರಿಯ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 113.

ಸಂ. 387

ಭೀಮನ ಬಾಗಿಲಿನ ಈಶಾನ್ಯ ದಿಕ್ಕಿಗೆ ಬೆಟ್ಟದ ಮೇಲಿನ ಗುಂಡಿನ ಮೇಲೆ (ನಕಾಶೆ NYl)

--

15-16ನೇ ಶತಮಾನ

ಕನ್ನಡ

ಭೈರವಮೂರ್ತಿ ಮತ್ತು ರೇವಣಸಿದ್ಧನ ಪಾದದ ಅರೆಯ ಗುಂಡನ್ನು ಉಲ್ಲೇಖಿಸುತ್ತದೆ.

ವಿಪ್ರೊರೀ, 1984-87, ಸಂ. 111.

ಸಂ. 388

ಮೇಲಿನ ಶಾಸನದ ಪೂರ್ವಕ್ಕೆ ನೆಲದ ಬಂಡೆಯ ಮೇಲೆ (ನಕಾಶೆ NYm)

--

15-16ನೇ ಶತಮಾನ

ಕನ್ನಡ

ಸೋಮಯ್ಯದೇವರ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 112.

ಸಂ. 389

ಎಚ್‌ಪಿಸಿ ಜಲಾಶಯದ ಪಶ್ಚಿಮಕ್ಕಿರುವ ಶಿಥಿಲವಾದ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ NYq)

ವಿಜಯನಗರ, ಕೃಷ್ಣರಾಯ ಮಹಾರಾಯ

ಸರ್ವಧಾರಿ, ಪುಷ್ಯ ಬ. 10, ಸೋ(ಮವಾರ) = ಕ್ರಿ.ಶ. 1529, ಜನವರಿ 5, ಮಂಗಳವಾರ

ತೆಲುಗು

ಅರಸನ ಧರ್ಮವನ್ನು ಮತ್ತು ಪಾಪಯ್ಯ ದೇವಸ್ಥಾನ ಕಟ್ಟಿಸಿದ್ದನ್ನು ತಿಳಿಸುತ್ತದೆ.

ವಿಪ್ರೊರೀ, 1991-92, ಸಂ. 4.

ಸಂ. 390

ಬೇಟೆಕಾರರ ಹೆಬ್ಬಾಗಿಲಿನ ಪೂರ್ವಕ್ಕೆ ಹಳೆಯ ರಸ್ತೆಯ ದಕ್ಷಿಣಕ್ಕೆ ಒಂದು ಗುಂಡಿನ ಮೇಲೆ (ನಕಾಶೆ NZa)

--

15-16ನೇ ಶತಮಾನ

ಕನ್ನಡ

ಅಪೂರ್ಣವಾಗಿದೆ. ''ಅನ'' ಎಂದು ಬರೆದಿದೆ.

ವಿಪ್ರೊರೀ, 1984-87, ಸಂ. 106.

ವೆಂಕಟಾಪುರ

ಸಂ. 391

ವೆಂಕಟಾಪುರ ಮತ್ತು ಬುಕ್ಕಸಾಗರದ ಮಧ್ಯದ ರಸ್ತೆಯ ಪೂರ್ವಕ್ಕಿರುವ ಬಾಗಿಲಿನ (ಕಲ್ಲಗುಸೆಯ) ಹತ್ತಿರ ತುಂಗಭದ್ರಾ, ಬಲದಂಡೆ ಕಾಲುವೆಯ ಬಲದಂಡೆಯ ಹತ್ತಿರ ಸಣ್ಣ ಗುಡ್ಡದ ಮೇಲೆ ಕಂಬಗಳುಳ್ಳ ಶಿಥಿಲವಾದ ಕಟ್ಟಡದ ಹತ್ತಿರ ಬಂಡೆಯ ಮೇಲೆ (ನಕಾಶೆ O)

--

15-16ನೇ ಶತಮಾನ

ಕನ್ನಡ

ಹೊನಅಯ್ಯನು ಮೈಲಾರದೇವರಿಗೆ ಕಂಬವನ್ನು (?) ನಿಲ್ಲಿಸಿದ ಉಲ್ಲೇಖವಿದೆ.

ವಿಪ್ರೊರೀ, 1991-92, ಸಂ. 5.

ಸಂ. 392

ಅದೇ ಬಂಡೆಯ ಮೇಲೆ, ಮೇಲಿನ ಶಾಸನದ ಹತ್ತಿರ (ನಕಾಶೆ O)

--

15-16ನೇ ಶತಮಾನ

ಕನ್ನಡ

ಬುಸಯ ಎಂಬ ವ್ಯಕ್ತಿಯ ಉಲ್ಲೇಖವಿದೆ.

ವಿಪ್ರೊರೀ, 1991-92, ಸಂ. 6.

ಸಂ. 393

ಗ್ರಾಮದ ಉತ್ತರಕ್ಕೆ ಶ್ರೀ ಆರ್. ದೇವಪ್ಪ ಅವರ ಹೊಲದಲ್ಲಿನ ಸಣ್ಣ ಗುಂಡಿನ ಮೇಲೆ (ನಕಾಶೆ O)

--

15-16ನೇ ಶತಮಾನ

ಕನ್ನಡ

ಕೊಮಾರಗಿರಿಯ ಕರಿಯ ತಿರುವೆಂಗಳನಾಥ ದೇವರಿಗೆ ಶಲುವಪಿಲ್ಲಿ ಎಂಬುವನು ಹತ್ತು ಕೊಳಗ ಗದ್ದೆಯನ್ನು ದಾನ ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 160.

ಸಂ. 394

ಶ್ರೀ ವೀರಯ್ಯಸ್ವಾಮಿಯ ಹೊಲದಲ್ಲಿಯ ಹುಣಸೆ ಮರದ ಕೆಳಗಿನ ಕಲ್ಲಿನ ಮೇಲೆ (ನಕಾಶೆ O)

ವಿಜಯನಗರ, ಅಚ್ಯುತದೇವ

ಶಕ 1448, ದುರ್ಮುಖಿ, ಕಾರ್ತಿಕ ಶು. 15 = ಕ್ರಿ.ಶ. 1536, ಅಕ್ಟೋಬರ್ 28 (ಶಕ 1458)

ಕನ್ನಡ

ಅರಸನು ಕಳಸಾಪುರದಲ್ಲಿ 12 ಕೊಳಗ ಗದ್ದೆಯನ್ನು ಕಕ್ಕಾಲ ಲಿಂಗಭಟ್ಟನ ಮಗ ಶಂಕರ ದೀಕ್ಷಿತನಿಗೆ ದಾನ ಮಾಡಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 153.

ಸಂ. 395

ಅದೇ ಹೊಲದಲ್ಲಿ ಇನ್ನೊಂದು ಕಲ್ಲಿನ ಮೇಲೆ (ನಕಾಶೆ O)

--

16ನೇ ಶತಮಾನ

ಕನ್ನಡ

ಕಕ್ಕಾಲ ಲಿಂಗಭಟ್ಟನ ಮಗ ಶಂಕರ ದೀಕ್ಷಿತನ ಗದ್ದೆಯ ಉಲ್ಲೇಖವಿದೆ. ಶಾಸನದ ಕೆಳಗೆ ವಾಮನನ ರೇಖಾ ಚಿತ್ರವಿದೆ.

ವಿಪ್ರೊರೀ, 1984-87, ಸಂ. 154.

ಸಂ. 396

ಶ್ರೀ ಕುರುಬರ ಗಾಳೆಪ್ಪನವರ ಹೊಲದಲ್ಲಿಯ ಕಲ್ಲಿನ ಮೇಲೆ (ನಕಾಶೆ O)

--

16ನೇ ಶತಮಾನ

ಕನ್ನಡ

ಕಕ್ಕಾಲ ಲಿಂಗಭಟ್ಟನ ಮಗ ಶಂಕರ ದೀಕ್ಷಿತನ ಗದ್ದೆಯ ಉಲ್ಲೇಖವಿದೆ. ಶಾಸನದ ಕೆಳಗೆ ವಾಮನನ ರೇಖಾ ಚಿತ್ರವಿದೆ.

ವಿಪ್ರೊರೀ, 1984-87, ಸಂ. 155.

ಸಂ. 397

ಶ್ರೀ ವೀರಯ್ಯನವರ ಹೊಲದಲ್ಲಿಯ ಕಲ್ಲಿನ ಮೇಲೆ (ನಕಾಶೆ O)

--

16ನೇ ಶತಮಾನ

ತೆಲುಗು

ಪರಾಂಕುಶಜೀಯಂಗಾರರ ಭೂಮಿಯ (ಮಾನ್ಯದ) ಉಲ್ಲೇಖವಿದೆ. ಕಲ್ಲಿನ ಮೇಲೆ ನರಸಿಂಹ ಮತ್ತು ವಾಮನನ ರೇಖಾ ಚಿತ್ರಗಳಿವೆ.

ವಿಪ್ರೊರೀ, 1984-87, ಸಂ. 156.

ಸಂ. 398

ಅದೇ ಹೊಲದಲ್ಲಿ ಮೇಲಿನ ಶಾಸನದ ಪೂರ್ವಕ್ಕೆ ಇನ್ನೊಂದು ಕಲ್ಲಿನ ಮೇಲೆ (ನಕಾಶೆ O)

--

16ನೇ ಶತಮಾನ

ತೆಲುಗು

ಪರಾಂಕುಶಜೀಯಂಗಾರರ ಭೂಮಿಯ (ಮಾನ್ಯದ) ಉಲ್ಲೇಖವಿದೆ. ಶಾಸನದ ಕೆಳಗೆ ನರಸಿಂಹ ಮತ್ತು ವಾಮನನ ರೇಖಾ ಚಿತ್ರಗಳಿವೆ.

ವಿಪ್ರೊರೀ, 1984-87, ಸಂ. 157.

ಸಂ. 399

ಅದೇ ಪ್ರದೇಶದಲ್ಲಿ ಮೇಲಿನ ಶಾಸನದ ಪೂರ್ವಕ್ಕೆ 3 ಭಾಗಗಳಲ್ಲಿ ಒಡೆದಿರುವ ಕಲ್ಲಿನ ಮೇಲೆ (ನಕಾಶೆ O)

--

16ನೇ ಶತಮಾನ

ತೆಲುಗು

ಪರಾಂಕುಶಜೀಯಂಗಾರರ ಭೂಮಿಯ (ಮಾನ್ಯದ) ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 158.

ಸಂ. 400

ಶ್ರೀ ಅಗಸರ ರಾಜಣ್ಣನ ಹೊಲದಲ್ಲಿಯ ಕಲ್ಲಿನ ಮೇಲೆ (ನಕಾಶೆ O)

--

16ನೇ ಶತಮಾನ

ತೆಲುಗು

ಪರಾಂಕುಶಜೀಯಂಗಾರರ ಭೂಮಿಯ (ಮಾನ್ಯದ) ಉಲ್ಲೇಖವಿದೆ. ಕೆಳಗೆ ನರಸಿಂಹ ಮತ್ತು ವಾಮನನ ರೇಖಾ ಚಿತ್ರಗಳಿವೆ.

ವಿಪ್ರೊರೀ, 1984-87, ಸಂ. 159.

ಕಮಲಾಪುರ

ಸಂ. 401

ಕಮಲಾಪುರ-ಕಂಪ್ಲಿ ರಸ್ತೆಯಲ್ಲಿ ಕಳಸಾಪುರ ಆಂಜನೇಯ ದೇವಸ್ಥಾನದ ಹತ್ತಿರದ ಬಂಡೆಯ ಮೇಲೆ (ನಕಾಶೆ O)

ವಿಜಯನಗರ, ದೇವರಾಯ

ಶಕ 1356, ಪ್ರಮಾಥಿ, ಮಾಘ ಶು. 10, ಗು(ರುವಾರ) = ಕ್ರಿ.ಶ. 1434, ಜನವರಿ 20, ಬುಧವಾರ (ಗುರುವಾರವಲ್ಲ)

ಕನ್ನಡ

(ಸಾ)ಳುವ ಶಂಕರ(ದೇವ?)ನು ಪ್ರತಿಷ್ಠಾಪಿಸಿದ ಹನುಮಂತದೇವರ ದೇವಸ್ಥಾನದ ಸ್ಥಾನಿಕ ರಾಮಯ್ಯನಿಗೆ ಅರಸನು (ಒಂದು ಗ್ರಾಮವನ್ನು?) ದಾನಮಾಡಿದನೆಂದು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904ರ 21, ಸೌಇಇ, IX ii, ಸಂ. 445; XVII, ಸಂ. 22.

ಸಂ. 402

ಅದೇ ದೇವಸ್ಥಾನದ ಪೂರ್ವಕ್ಕಿರುವ ಬಂಡೆಯ ಮೇಲೆ (ನಕಾಶೆ O)

ವಿಜಯನಗರ, ಸದಾಶಿವದೇವ ಮಹಾರಾಯ

ಶಕ 1478, ನಳ, ಕಾರ್ತಿಕ ಶು. 12, ಗುರುವಾರ = ಕ್ರಿ.ಶ. 1556, ಅಕ್ಟೊಬರ್ 15, ಗುರುವಾರ, (ಅನಲ ಸಂವತ್ಸರ)

ತೆಲುಗು

ಚಂದ್ರವಂಶದ ಆತ್ರೇಯ ಗೋತ್ರ, ಆಪಸ್ತಂಬ ಸೂತ್ರ ಮತ್ತು ಯಜುಶಾಖೆಯ ಅರವೀಟಿ ರಾಮರಾಜ ರಂಗರಾಜನ ಮೊಮ್ಮಗ, ತಿರುಮಲರಾಜನ ಮಗನಾದ ಮಹಾಮಂಡಲೇಶ್ವರ ರಘುನಾಥದೇವ ಮಹಾರಾಜನು ಕಳಸಾಪುರದ ಹತ್ತಿರವಿರುವ ಆನಂದಭೈರವದೇವರ ದೇವಸ್ಥಾನಕ್ಕೆ ಭೂಮಿದಾನ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922ರ 694.

ನಿಂಬಾಪುರ

ಸಂ. 403

ಕಪಿಲಾಶ್ರಮದ ಹತ್ತಿರ ಒಂದು ಬಂಡೆಯ ಮೇಲೆ (ನಕಾಶೆ O)

ವಿಜಯನಗರ, ಪ್ರೌಢ ದೇವರಾಯ

ಶಕ 1372, ಪ್ರಮಾಥಿ, ಪುಷ್ಯ ಬ. 7, ಶುಕ್ರವಾರ = ಕ್ರಿ.ಶ. 1450, ಡಿಸೆಂಬರ್ 25, ಶುಕ್ರವಾರ

ಸಂಸ್ಕೃತ, ಕನ್ನಡ; ನಾಗರಿ

ಅರಸನ ಆಜ್ಞೆಯಮೇರೆಗೆ ರಾಯಪ್ಪಣ್ಣಯ್ಯನು ಸೋಮಲಾಪುರವೆಂಬ ಗ್ರಾಮವನ್ನು ಕಟ್ಟಿಸಿದನು ಮತ್ತು ಅರಸನು ಇಲ್ಲಿ ದೇವಸ್ಥಾನ, ದೀಪಸ್ತಂಭ ಮತ್ತು ಸಂಧ್ಯಾಮಂಟಪವನ್ನು ಕಟ್ಟಿಸಿ ಸೌಮ್ಯಸೋಮೇಶ್ವರ ದೇವರನ್ನು ಪ್ರತಿಷ್ಠಾಪಿಸಿದನೆಂದು ತಿಳಿಸುತ್ತದೆ. ಅಲ್ಲದೆ ಅರಸನು ದೇವರ ಸೇವೆಗೆಂದು ಕರಿಯಹಳ್ಳಿ ಗ್ರಾಮವನ್ನು ದಾನ ಮಾಡಿ ಅದನ್ನು ಹುಲಿಗೆರೆ ಮಂಗಣ್ಣಅಯ್ಯನ ಮಗ ನಾಗಣ್ಣಯ್ಯನ ವಶಕ್ಕೆ ಕೊಟ್ಟನೆಂದೂ ತಿಳಿಸುತ್ತದೆ. ಶಾಸನವನ್ನು ಮುದ್ದಣಾಚಾರ್ಯನ ಮಗ ವೀರಣನು ಬರೆದನು.

ಆ್ಯರಿಎ, 1903-04, ಸಂ. 1903ರ 24; ಸೌಇಇ, IX ii, ಸಂ. 453; XVII, ಸಂ. 26.

ಕಮಲಾಪುರ

ಸಂ. 404

ಕಮಲಾಪುರ-ಕಂಪ್ಲಿ ರಸ್ತೆಯ ದಕ್ಷಿಣಕ್ಕೆ, ಕಳಸಾಪುರ ಆಂಜನೇಯ ದೇವಸ್ಥಾನದ ಪಶ್ಚಿಮಕ್ಕೆ ಒಂದು ಗುಂಡಿನ ಮೇಲೆ (ನಕಾಶೆ O)

--

ವಿಳಂಬಿ, ಆಷಾಢ ಶು. 1

ಕನ್ನಡ

ಅಳಿಸಿಹೋಗಿದೆ. ತಿರುಮಲದೇವಿಪಟ್ಟಣದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 139.

ಸಂ. 405

ಅದೇ ಗುಂಡಿನ ಮೇಲೆ (ನಕಾಶೆ O)

--

15-16ನೇ ಶತಮಾನ

ಕನ್ನಡ

ವೀರಪ್ಪನು ಭೂಮಿದಾನ ಮಾಡಿದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 140.

ಸಂ. 406

ಅದೇ ಗುಂಡಿನ ಇನ್ನೊಂದು ಬದಿಯಲ್ಲಿ (ನಕಾಶೆ O)

--

15-16ನೇ ಶತಮಾನ

ಕನ್ನಡ

ಅಪೂರ್ಣವಾಗಿದೆ. "ಶುಭಮ" ಎಂದು ಬರೆದಿದೆ.

ವಿಪ್ರೊರೀ, 1984-87, ಸಂ. 141.

ವೆಂಕಟಾಪುರ

ಸಂ. 407

ಹಂಪಿ ಪವರ್ ಹೌಸನ ಪೂರ್ವಕ್ಕೆ ನೀರನ್ನು ನಿಯಂತ್ರಿಸುವ ಸ್ಥಳದ ಹತ್ತಿರ ಪವರ್ ಕೆನಾಲ ದಂಡೆಯ ಮೇಲಿನ ಒಂದು ಬಂಡೆಯ ಮೇಲೆ (ನಕಾಶೆ O)

--

15-16ನೇ ಶತಮಾನ

ಕನ್ನಡ

ಕಳಸಾಪುರ ಗ್ರಾಮದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 161.

ಸಂ. 408

ಅದೇ ಬಂಡೆಯ ಮೇಲೆ (ನಕಾಶೆ O)

--

15-16ನೇ ಶತಮಾನ

ಕನ್ನಡ

ಅನಂತಾಪುರ ಗ್ರಾಮದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 162.

ಕಮಲಾಪುರ

ಸಂ. 409

ಹಂಪಿ ಪವರ್ ಹೌಸ್‌ನ ಹತ್ತಿರ ಕಾಲುವೆಯ ಉತ್ತರ ದಂಡೆಯ ಮೇಲೆ ಕಲ್ಲಿನ ಆಸರೆಯ ಗುಂಡಿನ ಮೇಲೆ (ನಕಾಶೆ O)

--

15-16ನೇ ಶತಮಾನ

ತೆಲುಗು

ಕಾಳಹಸ್ತಿ ಲಿಂಗದ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 142.

ಸಂ. 410

ಹಂಪಿ ಪವರ್ ಕ್ಯಾಂಪಿನಲ್ಲಿ ಚರ್ಚಿನ ಎದುರಿಗೆ ಒಂದು ಗುಂಡಿನ ಮೇಲೆ (ನಕಾಶೆ O)

--

ವಿರೋಧಿಕೃತ್, ಪುಷ್ಯ ಶು. 2, ಮಂಗಳವಾರ

ಕನ್ನಡ

ಅಪೂರ್ಣವಾಗಿದೆ. ಮಹಾಮಂಡಲೇಶ್ವರ ಚಿಕತಿಮ್ಮರಾಜ ಕೊಂಡಯ್ಯದೇವನ ಉಲ್ಲೇಖವಿದೆ.

ವಿಪ್ರೊರೀ, 1984-87, ಸಂ. 143.

ಸಂ. 411

ಪಟ್ಟಾಭಿರಾಮ ದೇವಸ್ಥಾನದ ಆಗ್ನೇಯಕ್ಕೆ ಸೀತಾರಾಮ ತಾಂಡ (ನಲ್ಲಾಪುರ)-ಕಮಲಾಪುರ ರಸ್ತೆಯ ಹತ್ತಿರ ಬಿದ್ದಿರುವ ತುಂಡಾಗಿರುವ ಕಲ್ಲಿನ ಮೇಲೆ (ನಕಾಶೆ O)

--

ಶಕ 14.. , ಕ್ರೋಧಿ, ಆ .... ಬ. 13, ಸ್ಥಿರವಾರ

ಕನ್ನಡ

ತ್ರುಟಿತ. ಸಾರಾಂಶ ಸ್ಪಷ್ಟವಾಗಿಲ್ಲ.

ವಿಪ್ರೊರೀ, 1984-87, ಸಂ. 144.

ಸಂ. 412

ಸೀತಾರಾಮ ತಾಂಡದ ದಕ್ಷಿಣಕ್ಕೆ, ನಲ್ಲಾಪುರ-ಕಮಲಾಪುರ ರಸ್ತೆಯ ಉತ್ತರಕ್ಕೆ ಶ್ರೀ ಭೋಜಪ್ಪನ ಹೊಲದಲ್ಲಿ ಬಿದ್ದಿರುವ ಒಂದು ಕಲ್ಲಿನ ಮೇಲೆ (ನಕಾಶೆ O)

ವಿಜಯನಗರ, ಅಚ್ಯುತರಾಯ

ಶಕ 1461, ವಿಕಾರಿ, ಶ್ರಾವಣ ಬ. 12, ಬುಧವಾರ = ಕ್ರಿ.ಶ. 1539, ಆಗಸ್ಟ್ 11

ತೆಲುಗು

ಅಚ್ಯುತರಾಯನ ಮಗ ವೆಂಕಟಾದ್ರಿ ಚಿಕರಾಯನಿಗೆ ಪುಣ್ಯವಾಗಲೆಂದು ನಲ ತಿಮ್ಮನ ಬೋಯಿ ಕೆರೆಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ವಿಪ್ರೊರೀ, 1984-87, ಸಂ. 145.

ಸಂ. 413

ಸೀತಾರಾಮ ತಾಂಡದ ದಕ್ಷಿಣಕ್ಕೆ ಶ್ರೀ ಕ್ರಿಷ್ಣಪ್ಪನ ಹೊಲದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ O)

--

15-16ನೇ ಶತಮಾನ

ಕನ್ನಡ

ಅಪೂರ್ಣವಾಗಿದೆ. ''ಶ್ರೀ ವಿದ'' ಎಂದು ಬರೆದಿದೆ.

ವಿಪ್ರೊರೀ, 1984-87, ಸಂ. 146.

ನಾಗೇನಹಳ್ಳಿ

ಸಂ. 414

ರಂಗನಾಥಸ್ವಾಮಿ ದೇವಸ್ಥಾನದಲ್ಲಿ ಮಂಟಪದ ಎಡಕ್ಕಿರುವ ಕೊಟಡಿಯ ಗೋಡೆಯ ಕಲ್ಲಿನ ಮೇಲೆ (ನಕಾಶೆ Q)

ವಿಜಯನಗರ, ಕೃಷ್ಣದೇವ ಮಹಾರಾಯ

ಶಕ 1438, ಧಾತ್ರಿ, ಕಾರ್ತಿಕ ಶು. 15, ಆದಿವಾರ = ಕ್ರಿ.ಶ. 1516, ನವೆಂಬರ್ 9, ಆದಿವಾರ

ಸಂಸ್ಕೃತ, ಕನ್ನಡ; ಕನ್ನಡ

ನಂಜನಾಥಭಟ್ಟರ ಮಗನೂ ಮತ್ತು ಅರಸನ ಪುರೋಹಿತನೂ ಆದ ರಂಗನಾಥ ದೀಕ್ಷಿತನು ಅರಸನಿಂದ ನಾಗಲಾದೇವಿಪುರ ಗ್ರಾಮವನ್ನು ಪಡೆದು ನಾಗೇಶ್ವರ ಮತ್ತು ನಾಗೇಂದ್ರಶಯನ ದೇವಸ್ಥಾನಗಳನ್ನು ಮತ್ತು ಅರಸನ ತಾಯಿ ನಾಗಲಾದೇವಿಗೆ ಪುಣ್ಯವಾಗಲೆಂದು ನಾಗಾಂಬಿಕಾ ಸಮುದ್ರ (ನಾಗ ಸಮುದ್ರ)ವೆಂಬ ಕೆರೆಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಆತನು ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ವೃತ್ತಿಗಳನ್ನು ಕೊಟ್ಟನೆಂದೂ ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922ರ 686; ಸೌಇಇ, IX ii, ಸಂ. 504.

ಅನಂತಶಯನಗುಡಿ

ಸಂ. 415

ಅನಂತಶಯನ ದೇವಸ್ಥಾನದ ಮಂಟಪದ ಪೂರ್ವ ಗೋಡೆಯ ಮೇಲೆ (ನಕಾಶೆ Q)

ವಿಜಯನಗರ, ಸದಾಶಿವದೇವ ಮಹಾರಾಯ

ಶಕ 1471, ಸೌಮ್ಯ, ಪುಷ್ಯ ಶು. 9, ಮಕರ ಸಂಕ್ರಾಂತಿ = ಕ್ರಿ.ಶ. 1549, ಡಿಸೆಂಬರ್ 28, ಶನಿವಾರ

ಕನ್ನಡ

ಅರಸನು ಜಂಬುಕೇಶ್ವರ ಬೆಟ್ಟದ ಮೇಲಿರುವ ಹನುಮಂತದೇವರ ನೈವೇದ್ಯಕ್ಕೆ ಅನಂತಶಯನ ದೇವರಿಗೆ ಕೊಟ್ಟ ಪದಾರ್ಥಗಳಲ್ಲಿ ಪ್ರತಿದಿನ 4 ಪಡಿ ಅಕ್ಕಿಯನ್ನು ಕೊಡುವ ಕಟ್ಟಳೆಯನ್ನು ಮಾಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922ರ 682; ಸೌಇಇ, IX ii, ಸಂ. 637.

ಸಂ. 416

ಅದೇ ದೇವಸ್ಥಾನದ ಮಂಟಪದ ಪೂರ್ವ ಗೋಡೆಯ ಮೇಲೆ (ನಕಾಶೆ Q)

ವಿಜಯನಗರ, ಕೃಷ್ಣರಾಯ ಮಹಾರಾಯ

ಶಕ 1446, ತಾರಣ, ಜ್ಯೇಷ್ಠ ಶು. 7, ಭಾನುವಾರ = ಕ್ರಿ.ಶ. 1524, ಮೇ 10, ಮಂಗಳವಾರ (ಭಾನುವಾರವಲ್ಲ)

ಸಂಸ್ಕೃತ

ಕೃಷ್ಣರಾಯನವರೆಗಿನ ವಿಜಯನಗರ ಅರಸರ ವಂಶಾವಳಿಯನ್ನು ತಿಳಿಸುತ್ತದೆ. ಅರಸನು ಸಾಲೆ ತಿರುಮಲ ಮಹಾರಾಯಪುರವನ್ನು ಕಟ್ಟಿಸಿ ಅಲ್ಲಿ ಅನಂತಪದ್ಮನಾಭ ದೇವರ ದೇವಸ್ಥಾನವನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ದೇವರ ಪೂಜೆ ಮತ್ತು ನೈವೇದ್ಯಕ್ಕೆ ಅರಸನು ಹಸ್ತಿನಾವತಿ ವಳಿತದಲ್ಲಿಯ ಪಾಂಡ್ಯ ನಾಡಿನಲ್ಲಿ ಅನೇಕ ಗ್ರಾಮಗಳನ್ನು ದಾನ ಮಾಡಿದನೆಂದೂ ತಿಳಿಸುತ್ತದೆ. ಅರಸನು ದೇವರ ಪೂಜೆ ನಡೆಸಲು ವೈಖಾನಸ ಪಂಥದ ಮೂವರು ಅರ್ಚಕರನ್ನು ನೇಮಿಸಿದನು. ಶಾಸನವನ್ನು ಸಭಾಪತಿ ಎಂಬ ಕವಿಯು ರಚಿಸಿದನು.

ಆ್ಯರಿಸೌಇಎ, 1922-23, ಸಂ. 1922ರ 683.

ಸಂ. 417

ಅದೇ ದೇವಸ್ಥಾನದ ಮಂಟಪದ ಪೂರ್ವ ಗೋಡೆಯ ಮೇಲೆ (ನಕಾಶೆ Q)

ವಿಜಯನಗರ, ಅಚ್ಯುತರಾಯ

ಶಕ 1461, ವಿಕಾರಿ, ಭಾದ್ರಪದ ಬ. 12, ಮಂಗಳವಾರ = ಕ್ರಿ.ಶ. 1539, ಸೆಪ್ಟೆಂಬರ್ 9, ಮಂಗಳವಾರ

ಸಂಸ್ಕೃತ, ನಾಗರಿ

ಅರಸನು ಬ್ರಾಹ್ಮಣರಿಗೆ ಆನಂದನಿಧಿ ದಾನವನ್ನು ಮಾಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922ರ 684.

ಸಂ. 418

ಅದೇ ದೇವಸ್ಥಾನದ ಪೂರ್ವ ಗೋಡೆಯ ಮೇಲೆ (ನಕಾಶೆ Q)

ವಿಜಯನಗರ, ಅಚ್ಯುತದೇವ ಮಹಾರಾಯ

ಶಕ 1461, ವಿಕಾರಿ, ಭಾದ್ರಪದ ಬ. 12 = ಕ್ರಿ.ಶ. 1539, ಸೆಪ್ಟೆಂಬರ್ 9, ಮಂಗಳವಾರ

ಸಂಸ್ಕೃತ, ಕನ್ನಡ

ಶಾಸನ ಸಂ. 417 ಇಲ್ಲಿ ಕನ್ನಡ ಲಿಪಿಯಲ್ಲಿದೆ.

ಆ್ಯರಿಸೌಇಎ, 1922-23, ಸಂ. 1922ರ 685.

ಹೊಸಪೇಟೆ

ಸಂ. 419

ಸಣ್ಣಕ್ಕಿ ವೀರಭದ್ರ, ದೇವಸ್ಥಾನದಲ್ಲಿ ತುಂಡಾಗಿರುವ ಕಲ್ಲಿನ ಮೇಲೆ (ನಕಾಶೆ Q)

ಕಲಚುರಿ, ಬಿಜ್ಜಳದೇವ

12ನೇ ಶತಮಾನ

ಕನ್ನಡ

ನಾಶವಾಗಿದೆ ಮತ್ತು ಅಪೂರ್ಣವಾಗಿದೆ. ರಾಜನ ಬಿರುದುಗಳ ವಿವರಣೆಯೊಂದಿಗೆ ಮುಕ್ತಾಯಗೊಂಡಿದೆ.

ಆರಿಇಎ, 1980-81, ಸಂ. ಬಿ 122.

ಸಂ. 420

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ Q)

ವಿಜಯನಗರ, ಅಚ್ಯುತದೇವ ಮಹಾರಾಯ

ಶಕ 1453, ಖರ, ಆಶ್ವೀಜ ಶು. 1 = ಕ್ರಿ.ಶ. 1531, ಸೆಪ್ಟೆಂಬರ್ 11, ಸೋಮವಾರ

ಕನ್ನಡ

ಕಂಪದೇವರಸಅಣ್ಣ ಮತ್ತು ನಾನಾದೇಶ (ವರ್ತಕರು) ತಿರುಮಲದೇವಿಅಮ್ಮನ ಪಟ್ಟಣದ ಗೌರೇಶ್ವರ ದೇವರಿಗೆ ಭತ್ತದ ಪ್ರತಿ ಹೇರಿಗೆ 1 ಕಾಸು ಮತ್ತು ಪ್ರತಿಯೊಂದು ಮದುವೆಗೆ 2 ಪಣಗಳನ್ನು ಕೊಡಲು ಒಪ್ಪಂದ ಮಾಡಿಕೊಂಡದ್ದನ್ನು ತಿಳಿಸುತ್ತದೆ.

ಆರಿಸೌಇಎ, 1922-23, ಸಂ. 1922ರ 679; ಸೌಇಇ, IX ii, ಸಂ. 539.

ಸಂ. 421

ಪಟ್ಟಣದಲ್ಲಿ ಸಬ್-ಕಲೆಕ್ಟರ್ ಬಂಗ್ಲೆಗೆ ಹೋಗುವ ರಸ್ತೆಯಲ್ಲಿರುವ ಸೇತುವೆಯ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ Q)

ವಿಜಯನಗರ, ಅಚ್ಯುತದೇವ ಮಹಾರಾಯ

ಶಕ 1457, ಮನ್ಮಥ, ವೈಶಾಖ ಶು. 1 = ಕ್ರಿ.ಶ. 1536, ಏಪ್ರಿಲ್ 3, ಶನಿವಾರ

ಕನ್ನಡ

ಪ್ರಧಾನ ತಿರುಮಲರಾಜನ ಕಾರ್ಯಕರ್ತನಾದ ಅಬ್ಬರಾಜ ತಿಮ್ಮಪನು ತಿರುಮಲದೇವಿಯರಪಟ್ಟಣ, ವರದಾಜಮ್ಮನಪಟ್ಟಣ ಮತ್ತು ಕೃಷ್ಣಾಪುರದ ಸೆಟ್ಟಿಪಟ್ಟಣಸ್ವಾಮಿಗಳ (ವರ್ತಕರ) ಒಪ್ಪಿಗೆ ಪಡೆದು ತಿರುಮಲದೇವಿಯರಪಟ್ಟಣದ ತಿರುವೆಂಗಳನಾಥದೇವರ ಸೇವೆಗೆ ಮೂಲವೀಸ (ತೆರಿಗೆ)ಯನ್ನು ದಾನ ಮಾಡಿದನೆಂದು ತಿಳಿಸುತ್ತದೆ. ಬಿಸಿಲಹಳ್ಳಿ ಕಣವೆಯನ್ನು ಉಲ್ಲೇಖಿಸುತ್ತದೆ.

ಆರಿಸೌಇಎ, 1922-23, ಸಂ. 1922ರ 681; ಸೌಇಇ, IX ii, ಸಂ. 573.

ಸಂ. 422

ಪಟ್ಟಣದಲ್ಲಿ ಬಜಾರ ರಸ್ತೆಯ ಪೂರ್ವಕ್ಕೆ ಮಸೀದಿಯ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ (ನಕಾಶೆ Q)

ಟಿಪ್ಪು ಸುಲ್ತಾನ

ಹಿಜ್ರ 1210

ಪರ್ಶಿಯನ್

ಉತ್ತಮ ವಂಶದ ಗಫೂರ್ ಖಾನನು ಪವಿತ್ರವಾದ ಮಸೀದಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922ರ 680.

ಮಲಪನಗುಡಿ

ಸಂ. 423

ಮಲ್ಲಿಕಾರ್ಜುನ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ R)

ವಿಜಯನಗರ, ದೇವರಾಯ

ಶಕ 1333, ಖರ, ಮಾಘ ಬ. 5 ಬು(ಧವಾರ) = ಕ್ರಿ.ಶ. 1412, ಫೆಬ್ರವರಿ 3, ಬುಧವಾರ

ಕನ್ನಡ

ಬುಳ್ಳೆನಾಯಕನ ಮಗ ಹೆಗ್ಗಡೆ ಸೋಮಣ್ಣಅಣ್ಣನು ಬಿಸಿಲಹಳ್ಳಿ ಕಣುವೆ ಮತ್ತು ಬಡವಲಿಯ ಕಣುವೆಯ ಹೆದ್ದಾರಿಗಳು ಕೂಡುವ ಸ್ಥಳದಲ್ಲಿ ಮಾಳಿಗೆಯುಳ್ಳ ಬಾವಿಯನ್ನು (ಮಾಳಿಗೆ ಕೂಪಾರಾಮ) ಕಟ್ಟಿಸಿ ಸುತ್ತಲೂ ವನ ಬೆಳೆಸಿದನೆಂದು ತಿಳಿಸುತ್ತದೆ. ಅಲ್ಲದೆ ಮೂರು ವ್ರಿತ್ತಿಗಳನ್ನು ಬ್ರಾಹ್ಮಣರಿಂದ (ಹೆಸರುಗಳಿವೆ) ಕೊಂಡು ಬಾವಿ ಮತ್ತು ಅರವಟ್ಟಿಗೆಗಳ ಜೀರ್ಣೋದ್ಧಾರ ಮಾಡಲು, ಪಾತ್ರೆಗಳನ್ನು ಕೊಳ್ಳಲು ಮತ್ತು ಅಲ್ಲಿ ಕೆಲಸ ಮಾಡುವವರಿಗೆ ವೇತನ ಕೊಡಲು ವ್ಯವಸ್ಥೆ ಮಾಡಿದನೆಂದೂ ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904ರ 25; ಸೌಇಇ, IX ii, ಸಂ. 436; XVII, ಸಂ. 27; ವಿಪ್ರೊರೀ, 1984-87, ಪು. 179-182.

ಸಂ. 424

ಮಾಳಿಗೆಕೂಪಾರಾಮ ಬಾವಿಯಲ್ಲಿ ಮೆಟ್ಟಿಲುಗಳ ಮೇಲಿರುವ ಕಲ್ಲಿನ ತೊಲೆಯ ಮೇಲೆ (ನಕಾಶೆ R)

--

ಪಾರ್ಥಿವ, ಚ(ಯಿತ್ರ) ಶು. 5 = ಕ್ರಿ.ಶ. 1405, ಮಾರ್ಚ್ 7

ಕನ್ನಡ

ಬಹುಶಃ ತ್ರಯಂಬಕಯ (ದೇವ)ರ ಭಕ್ತನು (ಬಾವಿಯನ್ನು) ಕಟ್ಟಿಸಿದ ವಿಷಯ ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904ರ 26; ವಿಪ್ರೊರೀ, 1984-87, ಪು. 179.

ಸಂ. 425

ಅದೇ ಬಾವಿಯ ಮೊಗಸಾಲೆಯ ನೈರುತ್ಯ ದಿಕ್ಕಿನಲ್ಲಿರುವ ಕಮಾನಿನ ತೊಲೆಯ ಮೇಲೆ (ನಕಾಶೆ R)

--

--

ಕನ್ನಡ

''ತ್ರಯಂಬಕಯ'' ಎಂದು ಬರೆಯಲಾಗಿದೆ.

ವಿಪ್ರೊರೀ, 1984-87, ಪು. 179.

ಕೊಂಡನಾಯಕನಹಳ್ಳಿ

ಸಂ. 426

ವಿಶ್ವನಾಥ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ (ನಕಾಶೆ R)

--

15ನೇ ಶತಮಾನ

ಕನ್ನಡ

ಗಣಪತಿಯ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಉಳಿದ ಭಾಗ ಹಾಳಾಗಿದೆ.

ವಿಪ್ರೊರೀ, 1991-92, ಸಂ. 7.

ಸಂ. 427

ಅದೇ ಸ್ಥಳದಲ್ಲಿ ಇನ್ನೊಂದು ಕಲ್ಲಿನ ಮೇಲೆ (ನಕಾಶೆ R)

--

15ನೇ ಶತಮಾನ

ಕನ್ನಡ

ಹಾಳಾಗಿದೆ.

ವಿಪ್ರೊರೀ, 1991-92, ಸಂ. 8.

ಕಮಲಾಪುರ

ಸಂ. 428

ಗ್ರಾಮದ ವಾಯುವ್ಯಕ್ಕೆ ಕುಂಬಾರಕುಂಟೆಯ ಹತ್ತಿರವಿರುವ ಗುಂಡಿನ ಮೇಲೆ (ನಕಾಶೆ SC)

ವಿಜಯನಗರ, ಕೃಷ್ಣರಾಯ ಮಹಾರಾಯ

ಶಕ 1(4)3(9), ಬಹುಧಾನ್ಯ, ಕಾರ್ತಿಕ ಶು. (ಬ.) 12, ಶನಿವಾರ = ಕ್ರಿ.ಶ. 1518, ಅಕ್ಟೋಬರ್ 30, ಶನಿವಾರ

ಸಂಸ್ಕೃತ, ಕನ್ನಡ

(ರಾಜಕುಮಾರ) ತಿರುಮಲರಾಯ ಮಹಾರಾಯನಿಗೆ ಪುಣ್ಯವಾಗಲೆಂದು ಅರಸನ ಹಿರಿಯ ರಾಣಿ ತಿರುಮಲದೇವಿಯು ವಿಜಯನಗರದಲ್ಲಿಯ ಅಂಜನಗಿರಿಯ ಕಱಿಯ ತಿರುವೆಂಗಳನಾಥ ದೇವರಿಗೆ ವಿಜಯನಗರದ ಹತ್ತಿರವಿರುವ ಕುಮ್ಮರಗುಂಟೆ ಎಂಬ ಭೂಮಿಯನ್ನು ದಾನ ಮಾಡಿದಳೆಂದು ತಿಳಿಸುತ್ತದೆ. ವೈಷ್ಣವ ಧರ್ಮದ ಪ್ರವರ್ತಕನಾದ ರಾಮಾನುಜ ಮುನಿಯನ್ನು ಉಲ್ಲೇಖಿಸುತ್ತದೆ.

ಆರಿಸೌಇಎ, 1922-23, ಸಂ. 1922ರ 697, ಸೌಇಇ, IX ii, ಸಂ. 510.

ಸಂ. 429

ತುರ್ತು ಕಾಲುವೆಗೆ (ಆನೆಶಾಲೆಯ ಹಿಂಭಾಗದಲ್ಲಿ) ಹೋಗುವ ಕಾಲುದಾರಿಯ ಎಡಭಾಗದಲ್ಲಿ

--

ಶಕ 1[27]0 = ಕ್ರಿ.ಶ. 1348

ತೆಲುಗು

ಹಾಳಾಗಿದೆ ಮತ್ತು ಅಳಿಸಿಹೋಗಿದೆ.

ಆ್ಯರಿಇಎ, 1957-58, ಸಂ. ಬಿ 202.

ಸಂ. 430

ಗ್ರಾಮದಲ್ಲಿ ಮೂರುಗುಡಿ ಗದ್ದೆ ಎಂಬ ಹೊಲದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 1453, ಖರ = ಕ್ರಿ.ಶ. 1531

ತೆಲುಗು

ತಿರುವೆಂಗಳನಾಥ ದೇವಸ್ಥಾನದ ಉಲ್ಲೇಖವಿದೆ.

ಆ್ಯರಿಎ, 1903-04, ಸಂ. 1904ರ 19.

ಸಂ. 431

ದರ್ಗಾದ ಹತ್ತಿರದ ಹೊಲದಲ್ಲಿಯ ಕಲ್ಲಿನ ಮೇಲೆ

ವಿಜಯನಗರ, ಕೃಷ್ಣದೇವರಾಯ

ಶಕ 1444, ಈಶ್ವರ, ಆಷಾಢ ಶು. 12 = ಕ್ರಿ.ಶ. 1517, ಜೂನ್ 30, ಮಂಗಳವಾರ

ಕನ್ನಡ

ವಿಜಯನಗರ ಪಟ್ಟಣದಲ್ಲಿ ತಿರುವೆಂಗಳನಾಥ ದೇವರ ಅಮೃತಪಡಿ ಸೇವೆಗೆ ಅರಸು ಮನೆತನದವರು ಭೂಮಿದಾನ ಮಾಡಿದ್ದನ್ನು ತಿಳಿಸುತ್ತದೆ. ದಾನವನ್ನು ಅರಸನು ತುಂಗಭದ್ರಾ ನದಿಯ ದಂಡೆಯ ಮೇಲೆ ವಿಠಲೇಶ್ವರ ದೇವರ ಸನ್ನಿಧಿಯಲ್ಲಿ ಮಾಡಿದನೆಂದು ತಿಳಿಸುತ್ತದೆ. ಶಾಸನವು ರಾಮಾನುಜ ಮುನಿಯು ಬೌದ್ಧ, ಜೈನ ಮತ್ತು ಮಯ ದರ್ಶನಗಳ ಮೇಲೆ ಸಾಧಿಸಿದ ವಿಜಯದ ಸ್ತುತಿಯನ್ನೊಳಗೊಂಡಿದೆ.

ಆ್ಯರಿಸೌಇಎ, 1889, ಸಂ. 29; ಸೌಇಇ, IV, ಸಂ. 249.

ಸಂ. 432

ಪ್ರವಾಸಿ ಮಂದಿರದ ಪೂರ್ವಕ್ಕೆ ಕಲ್ಲಿನ ಮೇಲೆ (ನಕಾಶೆ SCa?)

ವಿಜಯನಗರ, ಅಚ್ಯುತರಾಯ

ಶಕ 1453, ಖರ, ಚೈತ್ರ ಶು. 15, ಸ್ಥಿರವಾರ = ಕ್ರಿ.ಶ. 1531, ಏಪ್ರಿಲ್ 1, ಶನಿವಾರ

ಕನ್ನಡ

ಸಾಳುವ ದಣಾಯಕನು ಕೊಂಡಮರಸಯನಪಾಳ್ಯದ ನರಸಿಂಹ ದೇವರ ಮುಂದೆ ನಂದಾದೀಪವನ್ನು ಬೆಳಗಲು ಭೂಮಿದಾನ ಮಾಡಿದನೆಂದು ತಿಳಿಸುತ್ತದೆ. ಚೇರಟಿಮಂಗಲದ ಲಿಂಗರಸನ ಮಗ ತಿಮ್ಮಪನು ಶಾಸನವನ್ನು ಬರೆದನು.

ಆ್ಯರಿಎ, 1903-04, ಸಂ. 1904ರ 22; ಸೌಇಇ, IX ii, ಸಂ. 533; XVII, ಸಂ. 23.

ಸಂ. 433

ಪ್ರವಾಸಿ ಮಂದಿರದ ಮೊಗಸಾಲೆಯಲ್ಲಿರುವ ನಾಗರಾಜ ಶಿಲ್ಪದ ಮೇಲೆ (ನಕಾಶೆ SCa)

--

16ನೇ ಶತಮಾನ

ತೆಲುಗು

ಭೀಮಯನ ಮಗ (ಶಿಲ್ಪಿ?) ಭೀಮಯನ ಉಲ್ಲೇಖವಿದೆ.

ಆ್ಯರಿಇಎ, 1955-56, ಸಂ. ಬಿ 339.

ಸಂ. 434

ಅದೇ ಸ್ಥಳದಲ್ಲಿಯ ವಿಗ್ರಹದ ಮೇಲೆ (ನಕಾಶೆ SCa)

--

16ನೇ ಶತಮಾನ

ತೆಲುಗು

(ಶಿಲ್ಪಿ?) ಕೋಚವಯನ ಉಲ್ಲೇಖವಿದೆ.

ಆ್ಯರಿಇಎ, 1955-56, ಸಂ. ಬಿ 339.

ಸಂ. 435

ಎಸ್ಟೇಟ್ ಗಾರ್ಡಿಯನ್‌ನಿಂದ ಪಡೆಯಲಾದ ತಾಮ್ರಶಾಸನ (ನಕಾಶೆ SC)

ವಿಜಯನಗರ, ಕೃಷ್ಣರಾಯ

ಶಕ 1447, ಪಾರ್ಥಿವ, ಫಾಲ್ಗುಣ ಶು. 12 = ಕ್ರಿ.ಶ. 1526, ಫೆಬ್ರವರಿ 24, ಶವಿವಾರ

ಸಂಸ್ಕೃತ, ನಂದಿನಾಗರಿ

ಕುಕ್ಕುಟ್ಲ ಸ್ಥಳದೊಳಗಿನ ಕೊಯ್ಯಕುರಿಕಿ ಸೀಮೆಯೊಳಗಿನ ವ್ಯಾಸಸಮುದ್ರವೆಂದು ಕರೆಯಲ್ಪಡುವ ಮತ್ತು ಕೃಷ್ಣರಾಯಪುರಂ ಎಂಬ ಹೆಸರುಳ್ಳ ಬೆಟ್ಟಕೊಂಡ ಗ್ರಾಮವನ್ನು ಬ್ರಾಹ್ಮಣ್ಯತೀರ್ಥರ ಶಿಷ್ಯರಾದ ವ್ಯಾಸತೀರ್ಥರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ. ದಾನ ಸ್ವೀಕರಿಸಿದವನು ಈ ಗ್ರಾಮವನ್ನು ಅನೇಕ ಪಾಲುಗಳಲ್ಲಿ ವಿಂಗಡಿಸಿ ಅನೇಕ ಬ್ರಾಹ್ಮಣರಿಗೆ ವಿತರಿಸಿದನು.

ಎಇ, XXXI, ಸಂ. 21.

ಸಂ. 436

ಪುರಾತತ್ವ ಸಂಗ್ರಹಾಲಯದಲ್ಲಿಯ ತಾಮ್ರ ಶಾಸನ (ಸಂಗ್ರಹಾಲಯ ಸಂ. 484) (ನಕಾಶೆ SCb)

ವಿಜಯನಗರ, -

--

ಸಂಸ್ಕೃತ, ನಾಗರಿ

ಇದೊಂದು ಬಿಡಿ ಪಟವಾಗಿದ್ದು, ದಾನ ಸ್ವೀಕರಿಸಿದವರ ಹೆಸರುಗಳ ಒಂದು ಭಾಗವನ್ನೊಳಗೊಂಡಿದೆ. ಕೊನೆಯಲ್ಲಿ ಇದು ಕೃಷ್ಣರಾಯನ ರಾಜಾಜ್ಞೆ ಎಂದು ತಿಳಿಸುತ್ತದೆ.

ಆ್ಯರಿಇಎ, 1972-73, ಸಂ. ಎ 2.

ಸಂ. 437

ಅದೇ ಸಂಗ್ರಹಾಲಯದಲ್ಲಿಯ ತಾಮ್ರ ಶಾಸನ (ಸಂಗ್ರಹಾಲಯ ಸಂ. 493) (ನಕಾಶೆ SCb)

ವಿಜಯನಗರ, ಅಚ್ಯುತ

ಶಕ 1461 (ವಸುಧಾ ಋತು ವೇದ ಇಂದು), ವಿಕಾರಿನ್, ವೈಶಾಖ ಶು. 15, ಸೋಮವಾರ = ಕ್ರಿ.ಶ. 1539, ಮೇ 3, ಶನಿವಾರ (ಸೋಮವಾರವಲ್ಲ)

ಸಂಸ್ಕೃತ, ನಾಗರಿ

ಎರಡು ಪಟಗಳು ಮಾತ್ರ (3 ಮತ್ತು 4ನೆಯವು) ಇವೆ. ಅರಸನು ಸಲಕರಾಜ ಮತ್ತು ತಿಪ್ಪಾಂಬಿಕಾರ ಮಗ ಪೆದ್ದ ತಿಮ್ಮನ ವಿನಂತಿಯ ಮೇರೆಗೆ ಚಂದ್ರಗಿರಿ ರಾಜ್ಯದಲ್ಲಿಯ ಪೊ್ರಲೂರಿ ಸೀಮೆಯಲ್ಲಿನ ಚೋಲಿಂಗಪುರಪ್ಪರ್‍ರುವಿನಲ್ಲಿ ನಂಗಮಂಗಲಮ್‌ವೆಂಬ ಪ್ರತಿನಾಮದ ಶ್ರೀರಾಮಸಾಗರಂ ಎಂಬ ಗ್ರಾಮವನ್ನು ತುಂಗಭದ್ರಾ ನದಿಯ ದಂಡೆಯ ಮೇಲೆ ವಿಠಲೇಶ್ವರನ ಸನ್ನಿಧಿಯಲ್ಲಿ ವಿವಿಧ ಗೋತ್ರ ಮತ್ತು ಸೂತ್ರಗಳಿಗೆ ಸೇರಿದ ಅನೇಕ ವಿದ್ವಾಂಸ ಬ್ರಾಹ್ಮಣರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1972-73, ಸಂ. ಎ 3.

ಸಂ. 438

ಅದೇ ಸಂಗ್ರಹಾಲಯದಲ್ಲಿಯ ತಾಮ್ರ ಶಾಸನ (ಸಂಗ್ರಹಾಲಯ ಸಂ. 491) (ನಕಾಶೆ SCb)

ವಿಜಯನಗರ, ಪೆನುಗೊಂಡದಿಂದ ಆಳುತ್ತಿದ್ದ ಶ್ರೀರಂಗ

ಶಕ 1500, ಬಹುಧಾನ್ಯ, ನಿಜ ಚೈತ್ರ ಶು. 6 = ಕ್ರಿ.ಶ. 1578, ಮಾರ್ಚ್ 14

ತೆಲುಗು

ಕ್ರಯದಾನದ ದಾಖಲೆ. ಕೌಂಡಿನ್ಯ ಗೋತ್ರ, ಕಾತ್ಯಾಯನ ಸೂತ್ರ ಮತ್ತು ಶುಕ್ಲಯಜುಶಾಖೆಯ ಮೊನಯ, ದಾಕಯ, ಸಾಕಯ ಮತ್ತು ತಿಮ್ಮಪ್ಪ ಎಂಬ ನಾಲ್ವರು ಭಾರ್ಗವ ಗೋತ್ರ, ಅಶ್ವಲಾಯನ ಸೂತ್ರ ಮತ್ತು ಋಕ್‌ಶಾಖೆಯ ಕಂಬದೂರಿನ ಲಿಂಗಪ್ಪನಿಗೆ ದೊಂಬರಿ ಕಾಮರಿಪಲ್ಲೆ ಎಂಬ ಪ್ರತಿನಾಮವುಳ್ಳ ಲಕ್ಷ್ಮೀನರಸಿಂಹಪುರವೆಂಬ ಗ್ರಾಮದಲ್ಲಿ ಭೂಮಿಯನ್ನು ಅವರ ಜ್ಞಾತಿಗಳ ಸಮಕ್ಷಮದಲ್ಲಿ 84 ಅಚ್ಯುತರಾಯ ಮಾಡ ವರಹ ಗದ್ಯಾಣಗಳಿಗೆ ಮಾರಿದ ವಿಷಯವನ್ನು ತಿಳಿಸುತ್ತದೆ.

ಆ್ಯರಿಇಎ, 1972-73, ಸಂ. ಎ 4.

ಸಂ. 439

ಅದೇ ಸಂಗ್ರಹಾಲಯದಲ್ಲಿಯ ತಾಮ್ರ ಶಾಸನ (ಸಂಗ್ರಹಾಲಯ ಸಂ. 495) (ನಕಾಶೆ SCb)

ವಿಜಯನಗರ, ವೆಂಕಟ II

ಶಕ 1558 (ವಸು ಬಾಣ ಕಲಂಬ ಇಂದು), ಧಾತು, ಭಾದ್ರಪದ ಶು. 12 = ಕ್ರಿ.ಶ. 1636, ಸೆಪ್ಟೆಂಬರ್ 2, (ಧಾತ್ರಿ ಸಂವತ್ಸರ)

ಸಂಸ್ಕೃತ, ನಾಗರಿ

ಅರಸನು ವೇದ, ಶಾಸ್ತ್ರ ಮತ್ತು ವೈಷ್ಣವಾಗಮ ಸಿದ್ಧಾಂತಗಳಲ್ಲಿ ಪರಿಣತನಾದ ವತ್ಸ ಗೋತ್ರ, ಆಪಸ್ತಂಭ ಸೂತ್ರ ಮತ್ತು ಯಜುಶಾಖೆಯ ವೆಂಕಟಾಚಾರ್ಯರ ಮೊಮ್ಮಗ ಮತ್ತು ನೈನಾರರ ಮಗನಾದ ಪ್ರತಿವಾದಿ ಭಯಂಕರ ಅಣ್ಣಗಾಚಾರ್ಯರಿಗೆ ಚಂದ್ರಗಿರಿ ರಾಜ್ಯದ ನಿನ್ರ ನಾಡಿನಲ್ಲಿಯ ಕುಂತವತ್ತಿಲ ಕೊಟ್ಟಮ್‌ನಲ್ಲಿಯ ನಾರಾಯಣಪುರ ಪಟ್ಟುವಿನಲ್ಲಿಯ ಮುಡಿಯೂರು ಪ್ರತಿನಾಮವುಳ್ಳ ವೆಂಕಟ ಮಹಾರಾಯಪುರಂ ಎಂಬ ಗ್ರಾಮವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಶಾಸನವನ್ನು ಸಭಾಪತಿಯ ಮೊಮ್ಮಗ ಮತ್ತು ಕಾಮಕೋಟಿಯ ಮಗನಾದ ರಾಮಕವಿಯು ರಚಿಸಿದನು, ವೀರಣಾಚಾರ್ಯರ ಮೊಮ್ಮಗ ಮತ್ತು ಗಣಪಾರ್ಯರ ಮಗ ಅಚ್ಯುತರಾಯನು ಬರೆದನು.

ಆ್ಯರಿಇಎ, 1972-73, ಸಂ. ಎ 5.

ಸಂ. 440

ಅದೇ ಸಂಗ್ರಹಾಲಯದಲ್ಲಿಯ ತಾಮ್ರ ಶಾಸನ (ಸಂಗ್ರಹಾಲಯ ಸಂ. 1353) (ನಕಾಶೆ SCb)

ಕೆಳದಿ, -

18ನೇ ಶತಮಾನದ ಲಿಪಿಯಲ್ಲಿದೆ

ಸಂಸ್ಕೃತ, ನಾಗರಿ

ಮೊದಲನೇ ಪಟ ಮಾತ್ರ ದೊರೆತಿದೆ. ಕೆಳದಿ ಅರಸ ವೀರಭದ್ರನವರೆಗಿನ ವಂಶಾವಳಿಯನ್ನು ತಿಳಿಸುತ್ತದೆ. ಅಲ್ಲದೆ ಬಹುಶಃ ವೀರಭದ್ರನ ತಂದೆ ವೆಂಕಟನ ಮಂತ್ರಿಯನ್ನು (ಹೆಸರು ಲಭ್ಯವಿಲ್ಲ) ಉಲ್ಲೇಖಿಸುತ್ತದೆ.

ಆ್ಯರಿಇಎ, 1972-73, ಸಂ. ಎ 6.

ಸಂ. 441

ಅದೇ ಸಂಗ್ರಹಾಲಯದಲ್ಲಿಯ ತಾಮ್ರ ಪಟ (ಸಂ. 1352) (ನಕಾಶೆ SCb)

--

ಸಿದ್ಧಾರ್ಥಿ, ಮಾಘ ಶು. 15

ತೆಲುಗು, ಕನ್ನಡ; ತೆಲುಗು

ಪೆನುಗೊಂಡದ ಸಾಮಿಸೆಟ್ಟಿಯು ಬರೆದ ಮೊದಲಿನ ಎರಡು ಶಾಸನಗಳ ಪ್ರತಿ ಎಂದು ತೆಲುಗಿನಲ್ಲಿ ಬರೆಯಲಾಗಿದೆ. ಕನ್ನಡದ ಎರಡು ಶಾಸನಗಳಲ್ಲಿ ಮೊದಲನೆಯದು ನಿಡಿಗಲ್ಲುನಲ್ಲಿ ಆಳುತ್ತಿದ್ದ ಇರುಂಗೊಲ ಚೋಳ ಮಹಾರಾಜನ ಕಾಲದಲ್ಲಿ ಶಕ 1111, ಕಾಳಿಕ, ಜ್ಯೇಷ್ಠ ಶು. 5, ಗುರುವಾರದಂದು ನಿಡಿಗಲ್ಲು ಕೋಟೆಯಲ್ಲಿನ ನಗರೇಶ್ವರ ದೇವರ ಪೂಜೆ, ನೈವೇದ್ಯಕ್ಕೆ ನಿಡಿಗಲ್ಲಿನ ವೈಶ್ಯರು ಭೂಮಿ ದಾನ

ಮಾಡಿದ್ದನ್ನು ತಿಳಿಸುತ್ತದೆ. ಎರಡನೆಯ ಶಾಸನವು ಮೇಲೆ ತಿಳಿಸಿದ ದೇವಸ್ಥಾನದ ಮೇಲಿನ ಅಧಿಕಾರದ ಬಗ್ಗೆ ಉದ್ಭವಿಸಿದ್ದ ಜಗಳದ ಬಗ್ಗೆ ತಿಳಿಸುತ್ತದೆ. ಅಲ್ಲದೆ ಶಕ 1616, ಭವ, ಜ್ಯೇಷ್ಠ ಸು. 5, ಗುರುವಾರ ಆ ಸ್ಥಳದ ಮುಖ್ಯಸ್ಥ ಮುಮ್ಮಡಿ ಹೊಟ್ಟುಲ್ಲ ನಾಯಕನು ನಗರೇಶ್ವರ ದೇವಸ್ಥಾನದ ಅಧಿಕಾರವನ್ನು ನಾನಾದೇಶದ ಐವತ್ತಾರು ದೇಶಕ್ಕೆ ಸೇರಿದ ನೂರ ಇಪ್ಪತ್ತು ಎಂಬ ಸಂಘಕ್ಕೆ, ಶೃಂಗೇರಿ ಸ್ವಾಮಿಗಳು ಮತ್ತು ಇತರ ವಿದ್ವಾಂಸರ ತೀರ್ಪಿನ ಮೇರೆಗೆ, ಇರುಂಗೊಳ ಚೋಳ ಮಹಾರಾಜನ ಕಾಲದ ಮೊದಲಿನ ಶಾಸನದ ಆಧಾರದ ಮೇಲೆ ಕೊಟ್ಟ ಬಗ್ಗೆಯೂ ತಿಳಿಸುತ್ತದೆ.

ಆ್ಯರಿಇಎ, 1972-73, ಸಂ. ಎ 7.

ಸಂ. 442

ಅದೇ ಸಂಗ್ರಹಾಲಯದಲ್ಲಿಯ ಭಗ್ನಗೊಂಡ ವಿಗ್ರಹದ ಪೀಠದ ಮೇಲೆ (ನಕಾಶೆ SCb)

--

13ನೇ ಶತಮಾನ

ಕನ್ನಡ

ಅಕ್ಷರ "ಪ" ಮತ್ತು ಅಂಕಿ "2" ನ್ನು ಬರೆಯಲಾಗಿದೆ.

ಆ್ಯರಿಇಎ, 1955-56, ಸಂ. ಬಿ 329.

ಸಂ. 443

ಅದೇ ಸಂಗ್ರಹಾಲಯದಲ್ಲಿಯ ವಿಗ್ರಹವಿಲ್ಲದ ಪೀಠದ ಮೇಲೆ (ನಕಾಶೆ SCb)

--

13ನೇ ಶತಮಾನ

ಕನ್ನಡ

"ವ" ಅಕ್ಷರವನ್ನು ಬರೆಯಲಾಗಿದೆ.

ಆ್ಯರಿಇಎ, 1955-56, ಸಂ. ಬಿ 330.

ಸಂ. 444

ಅದೇ ಸಂಗ್ರಹಾಲಯದಲ್ಲಿಯ ಭೈರವ ವಿಗ್ರಹದ ಪೀಠದ ಮೇಲೆ (ನಕಾಶೆ SCb)

--

13ನೇ ಶತಮಾನ

ಕನ್ನಡ

ಭೈರವ ವಿಗ್ರಹವನ್ನು ತಳವರ ಸೋವಪನು ಮಾಡಿದೆನೆಂದು ತಿಳಿಸುತ್ತದೆ.

ಆ್ಯರಿಇಎ, 1955-56, ಸಂ. ಬಿ 331.

ಸಂ. 445

ಅದೇ ಸಂಗ್ರಹಾಲಯದಲ್ಲಿಯ ಭಗ್ನವಾದ ನಂದಿ ವಿಗ್ರಹದ ಮೇಲೆ (ನಕಾಶೆ SCb)

--

13ನೇ ಶತಮಾನ

ಕನ್ನಡ

ಚೆನ್ನಬಸವಣನ ಉಲ್ಲೇಖವಿದೆ. ಇವನು ವಿಗ್ರಹವನ್ನು ಮಾಡಿರಬಹುದು.

ಆರಿಇಎ, 1955-56, ಸಂ. ಬಿ 332.

ಸಂ. 446

ಅದೇ ಸಂಗ್ರಹಾಲಯದಲ್ಲಿಯ ವೀರಗಲ್ಲಿನ ಮೇಲೆ (ನಕಾಶೆ SCb)

--

ಭವ .... (13ನೇ ಶತಮಾನ)

ಕನ್ನಡ

ಉಪೇಕ್ಷೆಯಿಂದ ಬರೆಯಲಾದ ಶಾಸನ ಹಾಳಾಗಿದೆ. ಒಬ್ಬ ವ್ಯಕ್ತಿಯ ಸಾವಿನ ಬಗ್ಗೆ ತಿಳಿಸುತ್ತದೆ.

ಆರಿಇಎ, 1955-56, ಸಂ. ಬಿ 333.

ಸಂ. 447

ಅದೇ ಸಂಗ್ರಹಾಲಯದಲ್ಲಿ ಕಲ್ಲಿನ ತೊಲೆಯ ಮೇಲೆ (ನಕಾಶೆ SCb)

--

16ನೇ ಶತಮಾನ

ಕನ್ನಡ

ಉಪೇಕ್ಷೆಯಿಂದ ಬರೆಯಲಾಗಿದ್ದು, ಹಾಳಾಗಿದೆ. ಚಿಕತಾರಿಯರ ಅಂಗಡಿಯ ಪಟ್ಟಣಶೆಟ್ಟಿ ಮತ್ತು ಮಲ್ಲಿಶೆಟ್ಟಿಯರ ಉಲ್ಲೇಖವಿದೆ.

ಆರಿಇಎ, 1955-56, ಸಂ. ಬಿ 334.

ಸಂ. 448

ಅದೇ ಸಂಗ್ರಹಾಲಯದಲ್ಲಿಯ ಒಂದು ಕಲ್ಲಿನ ಮೇಲೆ (ನಕಾಶೆ SCb)

--

11ನೇ ಶತಮಾನ

ಕನ್ನಡ

ಜೈನ ಸನ್ಯಾಸಿಗಳ ಗುರುಪರಂಪರೆಯ ವಿವರಣೆಯಿದೆ. ಗೊಲ್ಲಾಚಾರ್ಯ, ಆತನ ಶಿಷ್ಯ ಗುಣಚಂದ್ರ ಮತ್ತು ಗುಣಚಂದ್ರನ ಶಿಷ್ಯ ಇಂದ್ರನಂದಿಯರ ಸ್ತುತಿ ಇದೆ. ನಂದಿಮುನಿ ಮತ್ತು ಕಂತಿಯರ ಉಲ್ಲೇಖವಿದೆ.

ಆ್ಯರಿಇಎ, 1952-53, ಸಂ. ಬಿ 222; 1955-56, ಸಂ. ಬಿ 335; 1980-81, ಸಂ. ಬಿ 116.

ಸಂ. 449

ಅದೇ ಸಂಗ್ರಹಾಲಯದಲ್ಲಿಯ ಕುದುರೆಯ ಮೇಲೆ ಕುಳಿತಿರುವ ಮನುಷ್ಯನಿರುವ ವಿಗ್ರಹದ ಮೇಲೆ (ನಕಾಶೆ SCb)

--

14ನೇ ಶತಮಾನ

ಕನ್ನಡ

ಹಾಳಾಗಿದೆ. ''ಕೇಸರಿ'' ಎಂದು ಹೆಸರಿನ ಉಲ್ಲೇಖವಿದೆ.

ಆ್ಯರಿಇಎ, 1955-56, ಸಂ. ಬಿ 338.

ಸಂ. 450

ಅದೇ ಸಂಗ್ರಹಾಲಯದಲ್ಲಿಯ ಕಲ್ಲಿನ ಮೇಲೆ (ಸಂಗ್ರಹಾಲಯ ಸಂ. 320) (ನಕಾಶೆ SCb)

--

16ನೇ ಶತಮಾನ

ಕನ್ನಡ

ಶಿವಯನು ಭೀಮಯನಿಗೆ ದಾನ ಮಾಡಿದ ದಾಖಲೆಯಿದೆ.

ಆ್ಯರಿಇಎ, 1980-81, ಸಂ. ಬಿ 108.

ಸಂ. 451

ಅದೇ ಸಂಗ್ರಹಾಲಯದಲ್ಲಿಯ ಕಲ್ಲಿನ ಮೇಲೆ (ನಕಾಶೆ SCb)

--

13-14ನೇ ಶತಮಾನ

ಕನ್ನಡ

ಹಾಳಾಗಿದೆ. ಒಬ್ಬ ಆಚಾರ್ಯನ (ಹೆಸರು ಸ್ಪಷ್ಟವಾಗಿಲ್ಲ) ಬಗ್ಗೆ ತಿಳಿಸುತ್ತದೆ.

ಆ್ಯರಿಇಎ, 1980-81, ಸಂ. ಬಿ 109.

ಸಂ. 452

ಅದೇ ಸಂಗ್ರಹಾಲಯದಲ್ಲಿಯ ಕಂಬದ ಮೇಲೆ (ಸಂಗ್ರಹಾಲಯ ಸಂ. 904) (ನಕಾಶೆ SCb)

--

10-11ನೇ ಶತಮಾನ

ಕನ್ನಡ

ಗವರಯ್ಯ ಎಂಬ ವ್ಯಕ್ತಿಯ ಉಲ್ಲೇಖವಿದೆ. ಉಳಿದ ವಿವರಗಳು ಸ್ಪಷ್ಟವಾಗಿಲ್ಲ.

ಆರಿಇಎ, 1980-81, ಸಂ. ಬಿ 10.

ಸಂ. 453

ಅದೇ ಸಂಗ್ರಹಾಲಯದಲ್ಲಿಯ ವಿಷ್ಣು ವಿಗ್ರಹದ ಪೀಠದ ಮೇಲೆ (ಸಂಗ್ರಹಾಲಯ ಸಂ. 543) (ನಕಾಶೆ SCb)

--

15-16ನೇ ಶತಮಾನ

ಕನ್ನಡ

''ಮಾಧವಮೂರ್ತಿ'' ಎಂದು ಬರೆದಿದೆ.

ಆರಿಇಎ, 1980-81, ಸಂ. ಬಿ 111.

ಸಂ. 454

ಅದೇ ಸಂಗ್ರಹಾಲಯದಲ್ಲಿಯ ಕಲ್ಲಿನ ಮೇಲೆ (ಸಂಗ್ರಹಾಲಯ ಸಂ. 748) (ನಕಾಶೆ SCb)

--

14ನೇ ಶತಮಾನ

ಕನ್ನಡ

ಬಹುಶಃ ವಿಗ್ರಹವನ್ನು ಮಾಡಿಸಿದ ಬಗ್ಗೆ ತಿಳಿಸುತ್ತದೆ. ವಿವರಗಳು ಸ್ಪಷ್ಟವಾಗಿಲ್ಲ.

ಆರಿಇಎ, 1980-81, ಸಂ. ಬಿ 112.

ಸಂ. 455

ಅದೇ ಸಂಗ್ರಹಾಲಯದಲ್ಲಿಯ ವೀರಗಲ್ಲಿನ ಪೀಠದ ಮೇಲೆ (ನಕಾಶೆ SCb)

--

15ನೇ ಶತಮಾನ

ಕನ್ನಡ

ಉದ್ದೇಶ ಸ್ಪಷ್ಟವಾಗಿಲ್ಲ.

ಆರಿಇಎ, 1980-81, ಸಂ. ಬಿ 113.

ಸಂ. 456

ಅದೇ ಸಂಗ್ರಹಾಲಯದಲ್ಲಿಯ ಕಲ್ಲಿನ ಮೇಲೆ (ಸಂಗ್ರಹಾಲಯ ಸಂ. 903) (ನಕಾಶೆ SCb)

--

16ನೇ ಶತಮಾನ

ಕನ್ನಡ

ಒಂದು ನಿವೇಶನದ ದಾನದ ಬಗ್ಗೆ ತಿಳಿಸುತ್ತದೆ. ಎರಡನೇ ಸಾಲಿನಲ್ಲಿ ''ಗ್ಗತಾಯಿ'' ಎಂದು ಬರೆದಿದೆ.

ಆ್ಯರಿಇಎ, 1980-81, ಸಂ. ಬಿ 114.

ಸಂ. 457

ಅದೇ ಸಂಗ್ರಹಾಲಯದಲ್ಲಿಯ ಕಲ್ಲಿನ ಮೇಲೆ (ಸಂಗ್ರಹಾಲಯ ಸಂ. 1705) (ನಕಾಶೆ SCb)

--

16ನೇ ಶತಮಾನ

ಕನ್ನಡ

ಒಂದನೆಯ ಸಾಲಿನಲ್ಲಿ ''ಸಿಂಗೇಶ್ವರನ'' ಎಂದು ಬರೆದಿದೆ.

ಆ್ಯರಿಇಎ, 1980-81, ಸಂ. ಬಿ 115.

ಸಂ. 458

ಅದೇ ಸಂಗ್ರಹಾಲಯದಲ್ಲಿಯ ಪೀಠದ ಮೇಲೆ (ಸಂಗ್ರಹಾಲಯ ಸಂ. 586) (ನಕಾಶೆ SCb)

--

ಶಕ ....[ಸ್ವ*]ಭಾನು, ಫಾಲ್ಗುಣ (14-15ನೇ ಶತಮಾನ)

ಕನ್ನಡ

ಸರಸ್ವತಿ ಗಚ್ಛ, ಬಲಾತ್ಕರ ಗಣ ಮತ್ತು ಮೂಲ ಸಂಘದ ಜೈನ ಗುರುವಿನ ಬಗ್ಗೆ ತಿಳಿಸುತ್ತದೆ. ಉಳಿದ ವಿವರ ಸ್ಪಷ್ಟವಾಗಿಲ್ಲ.

ಆ್ಯರಿಇಎ, 1980-81, ಸಂ. ಬಿ 117.

ಸಂ. 459

ಅದೇ ಸಂಗ್ರಹಾಲಯಗಲ್ಲಿಯ ಕಲ್ಲಿನ ಮೇಲೆ (ನಕಾಶೆ SCb)

- -

ಇತ್ತೀಚಿನ ಲಿಪಿಯಲ್ಲಿ

ಕನ್ನಡ

''ಶ್ರೀ ವಿರೂಪಾಕ್ಷ'' ಎಂದು ಬರೆದಿದೆ.

ಆ್ಯರಿಇಎ, 1980-81, ಸಂ. ಬಿ 118.

ಸಂ. 460

ಅದೇ ಸಂಗ್ರಹಾಲಯದಲ್ಲಿಯ ಕಲ್ಲಿನ ಮೇಲೆ (ಸಂಗ್ರಹಾಲಯ ಸಂ. 234) (ನಕಾಶೆ SCb)

--

ಕಾಳಯುಕ್ತಿ, ಭಾದ್ರ(ಪದ*) (ಇತ್ತೀಚಿನ ಲಿಪಿಯಲ್ಲಿ)
ಕನ್ನಡ
ಹಾಳಾಗಿದೆ. ವಿವರ ಸ್ಪಷ್ಟವಾಗಿಲ್ಲ.
ಆ್ಯರಿಇಎ, 1980-81, ಸಂ. ಬಿ 119.

ಸಂ. 461

ಅದೇ ಸಂಗ್ರಹಾಲಯದಲ್ಲಿಯ ವಿಷ್ಣುವಿನ ವಿಗ್ರಹದ ಪೀಠದ ಮೇಲೆ (ಸಂಗ್ರಹಾಲಯ ಸಂ. 585) (ನಕಾಶೆ SCb)
--
ಇತ್ತೀಚಿನ ಲಿಪಿಯಲ್ಲಿ
ಕನ್ನಡ
''ಕೇಶವಮೂರ್ತಿ'' ಎಂದು ಬರೆದಿದೆ.
ಆ್ಯರಿಇಎ, 1980-81, ಸಂ. ಬಿ 120.

ಸಂ. 462

ಅದೇ ಸಂಗ್ರಹಾಲಯದಲ್ಲಿಯ ಕಲ್ಲಿನ ಮೇಲೆ (ಸಂಗ್ರಹಾಲಯ ಸಂ. 236) (ನಕಾಶೆ SCb)
--
ಇತ್ತೀಚಿನ ಲಿಪಿಯಲ್ಲಿ
ಕನ್ನಡ
ಹಾಳಾಗಿದೆ. ವಿವ್ವರ ಸ್ಪಷ್ಟವಾಗಿಲ್ಲ.
ಆ್ಯರಿಇಎ, 1980-81, ಸಂ. ಬಿ. 121.

ಸಂ. 263

ಅದೇ ಸಂಗ್ರಹಾಲಯದಲ್ಲಿಯ ಕಲ್ಲಿನ ಮೇಲೆ (ನಕಾಶೆ SCb)
--
11ನೇ ಶತಮಾನ
ಕನ್ನಡ
ತ್ರುಟಿತ. ಬಹುಶಃ ಒಬ್ಬ ಗುರುವಿನ ಸ್ತುತಿ ಇದೆ.
ಆ್ಯರಿಇಎ, 1980-81, ಸಂ. ಬಿ 124.

ಸಂ. 464

ಪಟ್ಟಾಭಿರಾಮ ದೇವಸ್ಥಾನದ ಪೂರ್ವ ಗೋಪುರದ ಎಡಭಾಗದಲ್ಲಿ (ನಕಾಶೆ SDf)
ವಿಜಯನಗರ, ಅಚ್ಯುತ

ಶಕ 1461, ವಿಕಾರಿ, ಭಾದ್ರಪದ ಶು 12, ಭೂಮಿಸುತವಾರ = ಕ್ರಿ.ಶ. 1539, ಆಗಸ್ಟ್ 26

ಸಂಸ್ಕೃತ, ತೆಲುಗು

ಅರಸನು ಬ್ರಾಹ್ಮಣರಿಗೆ ಆನಂಧ್ದನಿಧಿಯ ದಾನವನ್ನು ನೀಡಿದನೆಂದು ತಿಳಿಸುತ್ತದೆ. ಒಳಭಾಗದಲ್ಲಿ ನಾಗರಿ ಲಿಪಿಯಲ್ಲಿ ಇನ್ನೊಂದು ಪ್ರತಿ ಇದೆ.

ಆ್ಯರಿಎ, 1903-04, ಸಂ. 1904ರ 20; ಸೌಇಇ, XVI, ಸಂ. 120; XVII, ಸಂ. 21.

ಸಂ. 465

ಅದೇ ದೇವಸ್ಥಾನದ ಮಂಟಪದ ಪೂರ್ವ ಗೋಡೆಯ ಮೇಲೆ (ನಕಾಶೆ SDf-1)

ವಿಜಯನಗರ, ಅಚ್ಯುತದೇವ ಮಹಾರಾಯ

ಶಕ 1461, ವಿಕಾರಿ, ಪುಷ್ಯ ಶು. 1 = ಕ್ರಿ.ಶ. 1539, ಡಿಸೆಂಬರ್ 11, ಗುರುವಾರ

ಕನ್ನಡ

ಅಚ್ಯುತರಾಯ ಮಲ್ಲಪಣ್ಣನು ವರದಾಜಮ್ಮನವರ ಪಟ್ಟಣದ ರಘುನಾಥದೇವರ ನೈವೇದ್ಯಕ್ಕೆ ದೊರವದಿ ಸೋಮಲಾಪುರ ಸೀಮೆಯಲ್ಲಿ ಸಂಗ್ರಹಿಸಿದ ತೋಟದ ಬೆಳೆಯ ಸುಂಕದ ಆದಾಯವಾದ 1050 ವರಹಗಳನ್ನು ದಾನಮಾಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922ರ 695; ಸೌಇಇ, IX ii, ಸಂ. 595.

ಸಂ. 466

ಕೋಟೆಯ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ (ನಕಾಶೆ SE?)

--

16ನೇ ಶತಮಾನ

ಕನ್ನಡ

ಸ್ವಾಮಿದೇವರ ಬಾಗಿಲು ಎಂದು ತಿಳಿಸುತ್ತದೆ.

ಆ್ಯರಿಇಎ, 1955-56, ಸಂ. ಬಿ 337

ಸಂ. 467

ಚಿಕ್ಕಹುಡೆ ದೇವಸ್ಥಾನದ ಉತ್ತರದ ಗೋಪುರದ ಎಡಭಾಗದಲ್ಲಿ (ನಕಾಶೆ SEg)

ವಿಜಯನಗರ, ಅಚ್ಯುತ

ಶಕ 1461, ವಿಕಾರಿ = ಕ್ರಿ.ಶ. 1539

ಸಂಸ್ಕೃತ, ತೆಲುಗು

ಅರಸನು ಬ್ರಾಹ್ಮಣರಿಗೆ ಆನಂದನಿಧಿಯ ದಾನ ನೀಡಿದ್ದನ್ನು ತಿಳಿಸುತ್ತದೆ. ಬಲಭಾಗದಲ್ಲಿ ನಾಗರಿ ಲಿಪಿಯಲ್ಲಿ ಇನ್ನೊಂದು ಪ್ರತಿ ಇದೆ.

ಆ್ಯರಿಎ, 1903-04, ಸಂ. 1904ರ 17; ಸೌಇಇ, XVI, ಸಂ. 119.

ಸಂ. 468

ಚಿನ್ನಹುಡಿಯಮ್ ದೇವಸ್ಥಾನದ ದಕ್ಷಿಣಕ್ಕೆ ಕಲ್ಲಿನ ಮೇಲೆ (ನಕಾಶೆ SEs)

ವಿಜಯನಗರ, ಅಚ್ಯುತರಾಯ

ಶಕ 1463, ಶಾರ್ವರಿ, ಕಾರ್ತಿಕ ಶು. 5, ಗುರುವಾರ = ಕ್ರಿ.ಶ. 1540 ನವೆಂಬರ್ 4.

ಕನ್ನಡ

ಕಾಶ್ಯಪ ಗೋತ್ರ ಮತ್ತು ಆಪಸ್ತಂಭ ಸೂತ್ರದ ಹರಿಗಿಯ ಹಿರಿಯ ಅಬ್ಬರಾಜನ ಮಗ ತಿಮ್ಮರಾಜನು ವರದಾಜಮ್ಮನ ಪಟ್ಟಣದ ಪೂರ್ವಕ್ಕಿರುವ ಪೆನುಗೊಂಡೆ ಬಾಗಿಲಿನ ಹತ್ತಿರ ಅವನೇ ಪ್ರತಿಷ್ಠಾಪಿಸಿದ ರಘುನಾಥದೇವರ ಅಮೃತಪಡಿ ನೈವೇದ್ಯಕ್ಕೆ ಭೂಮಿ ದಾನ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1889, ಸಂ. 16; 1922-23, ಸಂ. 1922ರ 698; ಸೌಇಇ, IV, ಸಂ. 245.

ಸಂ. 469

ಪೆನುಗೊಂಡೆ ಬಾಗಿಲ ಪೂರ್ವ ದಿಕ್ಕಿಗೆ ವೀರಭದ್ರ ದೇವಸ್ಥಾನದ ಹತ್ತಿರ ರಸ್ತೆಯ ಎಡಭಾಗದಲ್ಲಿ ಮೇಲೆ ನಂದಿಯ ಶಿಲ್ಪವಿರುವ ಕಲ್ಲಿನ ಮೇಲೆ (ನಕಾಶೆ SEx)

--

15-16ನೇ ಶತಮಾನ

ಕನ್ನಡ

"ಗಡಿಮಲಿಸೆಟಿ" ಎಂದು ಬರೆದಿದೆ.

ವಿಪ್ರೊರೀ, 1991-92, ಸಂ. 9.

ಸಂ. 470

ಪೆನುಗೊಂಡೆ ಬಾಗಿಲಿನ ಪೂರ್ವಕ್ಕೆ ಬೆಟ್ಟದ ಮೇಲೆ ವೈಷ್ಣವ ದೇವಸ್ಥಾನದ ಪಕ್ಕದಲ್ಲಿ ಬಿದ್ದಿರುವ ಕಲ್ಲಿನ ಮೇಲೆ (ನಕಾಶೆ SEz)

--

15-16ನೇ ಶತಮಾನ

ತೆಲುಗು

ವೆಂಗರಾಯನ ಹೊಲ (ಪೊಲ)ದ ಉಲ್ಲೇಖವಿದೆ.

ವಿಪ್ರೊರೀ, 1991-92, ಸಂ. 10.

ಜಂಬುನಾಥನಹಳ್ಳಿ

ಸಂ. 471

ಹೊಸಪೇಟೆಯ ಹತ್ತಿರವಿರುವ ಜಂಬುನಾಥ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿಯ ಮಂಟಪದ ಎರಡು ಕಂಬಗಳ ಮೇಲೆ (ನಕಾಶೆ V)

ವಿಜಯನಗರ, ಸದಾಶಿವದೇವ

ಶಕ 1471, ಸೌಮ್ಯ, ಪುಷ್ಯ ಶು. 9 = ಕ್ರಿ.ಶ. 1549, ಡಿಸೆಂಬರ್ 28, ಶನಿವಾರ

ಕನ್ನಡ

ಅನಂತಶಯನ ದೇವರ ಸೇವೆಗೆ ಮೀಸಲಾದ ಆಹಾರ ಪದಾರ್ಥಗಳಲ್ಲಿ 4 ಪಡಿ ಅಕ್ಕಿಯನ್ನು ಪ್ರತಿದಿನ ಜಂಬುಕೇಶ್ವರ ಬೆಟ್ಟದ ಮೇಲಿನ ಹನುಮಂತದೇವರಿಗೆ ದಾನ ಮಾಡಿದ ವಿಷಯ ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904ರ 23; ಸೌಇಇ, IX ii, ಸಂ. 635; XVII, ಸಂ. 24.

ಪದಸೂಚಿ

ಈ ಪದಸೂಚಿಯಲ್ಲಿ ಕೆಳಗಿನ ಸಂಕೇತಾಕ್ಷರಗಳನ್ನು ಉಪಯೋಗಿಸಲಾಗಿದೆ. *ಅ* = ಅರಸ, ಅರಸಿ; *ಅಧಿ* = ಅಧಿಕಾರಿ; *ಆ ವಿ* = ಆಡಳಿತ ವಿಭಾಗ; *ಊ* = ಊರು; *ಕ* = ಕವಿ; *ಕೆ* = ಕೆರೆ; *ಗಂ* = ಗಂಡಸು; *ದಾ* = ದಾನಿ; *ದೇ* = ದೇವತೆ; *ದೇವಾ* = ದೇವಾಲಯ; *ಪ* = ಪತ್ನಿ; *ಪ್ರ* = ಪ್ರತಿಗ್ರಹಿ; *ಬಿ* = ಬಿರುದು; *ಮಂ* = ಮಂತ್ರಿ; *ಯ* = ಯತಿ; *ರಾಕು* = ರಾಜಕುಮಾರ, ರಾಜಕುಮಾರಿ; *ಲೇ* = ಲೇಖಕ; *ವಂ* = ವಂಶ; *ವಿ* = ವಿಜಯನಗರ; *ವೀ* = ವೀರಶೈವ; *ವೈ* = ವೈಷ್ಣವ; *ಸಂ* = ಸಂಸ್ಥೆ; *ಸ್ಥ* = ಸ್ಥಳ; *ಹೆಂ* = ಹೆಂಗಸು.

ಪ